24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 24 | ಸಂಚಿಕೆ 49 | ನವದೆಹಲಿ | ಬೆಲೆ ₹10 | ಆಗಸ್ಟ್ 14 2026 ಶುಕ್ರವಾರ

## ಒಳಪುಟಗಳಲ್ಲಿ

ಬಾಲಿವುಡ್ ತಾರೆಯರು ಈಗ್ಯಾಕೆ ಮೊಸಳೆ ಕಣ್ಣೀರು ಸುರಿಸುತ್ತಿಲ್ಲ: ಕಂಗನಾ ರಣಾವತ್ - ಪು.4

ಮಾಫಿ ಸಾಕ್ಷಿಗೆ ಆಕ್ಷೇಪ ಸಲ್ಲ: ನಟ ದರ್ಶನ್ ಅರ್ಜಿ ವಜಾಗೊಳಿಸಿದ ಹೈಕೋರ್ಟ್ - ಪು.5

ಸಾರ್ವಜನಿಕ ಸೇವೆ, ಶುಚಿತ್ವಕ್ಕೆ ಆದ್ಯತೆ ನೀಡಲು ಡಿ.ಸಿ ಡಾ. ಕೆ.ಆನಂದ ಸೂಚನೆ - ಪು.6

# ಸಂಸತ್ ಮುಂಗಾರು ಅಧಿವೇಶನ ಬಹುತೇಕ ವ್ಯರ್ಥ: ಪ್ರತಿಪಕ್ಷ ವಿರುದ್ಧ ರಿಜಿಜು ಟೀಕೆ

### 19 ದಿನ ಕಲಾಪ, 12 ಮಸೂದೆ ಅಂಗೀಕಾರ, ಕೇವಲ 2ರ ಬಗ್ಗೆ ಸದನದಲ್ಲಿ ಚರ್ಚೆ

**ನವದೆಹಲಿ, ಆ.13:** ಸಂಸತ್ತಿನ ಮುಂಗಾರು ಅಧಿವೇಶನ ಗುರುವಾರ ಅಂತ್ಯಗೊಂಡಿದ್ದು, ನಿರಂತರ ಗದ್ದಲ, ಪ್ರತಿಭಟನೆ ಹಾಗೂ ಆಡಳಿತ–ಪ್ರತಿಪಕ್ಷಗಳ ನಡುವಿನ ಸಂಘರ್ಷದಿಂದಾಗಿ ಕಲಾಪಗಳು ನಡೆಯದೆ ವ್ಯರ್ಥವಾಗಿದೆ. ಜುಲೈ 20ರಿಂದ ಆಗಸ್ಟ್ 13ರವರೆಗೆ ನಡೆದ ಅಧಿವೇಶನದಲ್ಲಿ ಲೋಕಸಭೆಯ ಕಲಾಪ ಕೇವಲ ಶೇ.19ರಷ್ಟಿದ್ದರೆ, ರಾಜ್ಯಸಭೆಯ ಕಲಾಪ ಶೇ.39ರಷ್ಟಾಗಿದೆ ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ತಿಳಿಸಿದ್ದಾರೆ.

ಅಧಿವೇಶನದ ಅಂತ್ಯದಲ್ಲಿ ಲೋಕಸಭೆ ಹಾಗೂ ರಾಜ್ಯಸಭೆ ಎರಡನ್ನೂ ಅನಿರ್ದಿಷ್ಟಾವಧಿಗೆ ಮುಂದೂಡಲಾಯಿತು. ಒಟ್ಟು 19 ಕಲಾಪ ದಿನಗಳ ಈ ಅಧಿವೇಶನದಲ್ಲಿ ಒಟ್ಟು 12 ಮಸೂದೆಗಳು ಅಂಗೀಕಾರಗೊಂಡಿವೆ. ಆದರೆ ಈ 12 ಮಸೂದೆಗಳ ಪೈಕಿ ಎರಡೂ ಸದನಗಳಲ್ಲಿ ಚರ್ಚೆಗೆ ಒಳಗಾದದ್ದು ಕೇವಲ ಒಂದು ಮಸೂದೆಯಾಗಿದೆ.

ಪರೀಕ್ಷಾ ಅಕ್ರಮ ತಡೆಗೆ ಸಂಬಂಧಿಸಿದ Public Examinations (Prevention of Unfair Means) Amendment Bill, 2026 ಎರಡೂ ಸದನಗಳಲ್ಲಿ ಗಣನೀಯ ಚರ್ಚೆಗೆ ಒಳಗಾದ ಪ್ರಮುಖ ಮಸೂದೆಯಾಗಿದೆ. ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಸೇರಿ ಒಟ್ಟು 17 ಗಂಟೆ 34 ನಿಮಿಷ ಚರ್ಚೆಯಾಗಿದೆ.

**ನೀಟ್ ವಿವಾದದಿಂದ ಆರಂಭವಾದ ಗದ್ದಲ:** ಅಧಿವೇಶನದ ಆರಂಭದಿಂದಲೇ ನೀಟ್‌ಗ ಪರೀಕ್ಷೆ, ಪ್ರಶ್ನೆಪತ್ರಿಕೆ ಸೋರಿಕೆ ಹಾಗೂ ವಿದ್ಯಾರ್ಥಿಗಳ ಪ್ರತಿಭಟನೆ ಪ್ರಮುಖ ರಾಜಕೀಯ ವಿಚಾರಗಳಾಗಿದ್ದವು. ಇದಲ್ಲದೆ ಅಯೋಧ್ಯೆಯ ರಾಮಮಂದಿರಕ್ಕೆ ಸಂಬಂಧಿಸಿದ ದೇಣಿಗೆಗಳ ವಿಚಾರವೂ ವಿರೋಧ ಪಕ್ಷಗಳ ಪ್ರತಿಭಟನೆಗೆ ಕಾರಣವಾಗಿತ್ತು. ಈ ವಿಷಯಗಳಲ್ಲಿ ಚರ್ಚೆಗೆ ಅವಕಾಶ ನೀಡಬೇಕು ಎಂದು



ವಿರೋಧ ಪಕ್ಷಗಳು ಒತ್ತಾಯಿಸಿದರೆ, ಸರ್ಕಾರ ಚರ್ಚೆಗೆ ಸಿದ್ಧವಿದ್ದರೂ ವಿಪಕ್ಷಗಳು ಸದನ ನಡೆಸಲು ಅವಕಾಶ ನೀಡುತ್ತಿಲ್ಲ ಎಂದು ಆರೋಪಿಸಿತು.

ಅಧಿವೇಶನದ ಕೊನೆಯ ದಿನದ ಮುನ್ನ ಕೇಂದ್ರ ಗೃಹ ಸಚಿವ ಅಮಿತ್ ಶಾ ಕೂಡ ವಿದ್ಯಾರ್ಥಿಗಳ ಪ್ರತಿಭಟನೆ ಮತ್ತು ನೀಟ್ ವಿವಾದದ ಕುರಿತು ಎರಡು ದಿನಗಳ ಚರ್ಚೆಗೆ ಸಿದ್ಧ ಎಂದು ಪ್ರತಿಪಕ್ಷಗಳಿಗೆ ಸವಾಲು ಹಾಕಿದ್ದರು. ಆದರೆ ರಾಜಕೀಯ ಭಿನ್ನಾಭಿಪ್ರಾಯದಿಂದಾಗಿ ಈ ಪ್ರಸ್ತಾಪದ ಮೇಲೂ ಒಮ್ಮತ ಮೂಡಲಿಲ್ಲ.

ಅಧಿವೇಶನದ ಅಂತ್ಯದ ಬಳಿಕ ಮಾತನಾಡಿದ ಕಿರಣ್ ರಿಜಿಜು, ಸಂಸತ್ತಿನಲ್ಲಿ ಚರ್ಚೆಯಿಂದ ವಿಪಕ್ಷಗಳು ಹಿಂದೆ ಸರಿದಿವೆ ಎಂದು ಆರೋಪಿಸಿದರು. ಸರ್ಕಾರ ಚರ್ಚೆಗೆ ಸಿದ್ಧವಾಗಿದ್ದರೂ ಕಾಂಗ್ರೆಸ್ ಸೇರಿದಂತೆ ಪ್ರತಿಪಕ್ಷಗಳು ಪದೇಪದೇ ಕಲಾಪಕ್ಕೆ ಅಡ್ಡಿಪಡಿಸಿವೆ ಎಂದು ಸಚಿವರು ದೂರಿದರು.

ಸರ್ಕಾರ ಚರ್ಚೆಗೆ ಸಿದ್ಧವಾಗಿದ್ದಾಗಲೂ ಪ್ರತಿಪಕ್ಷಗಳು ಚರ್ಚೆಯಿಂದ ಹಿಂದೆ ಸರಿದಿದ್ದು ಇದೇ ಮೊದಲು ಎಂಬ ರಿಜಿಜು ಅಸಮಾಧಾನ ವ್ಯಕ್ತಪಡಿಸಿದರು.

ಅಧಿವೇಶನವನ್ನು ಎರಡು ರೀತಿಯಲ್ಲಿ ನೋಡಬೇಕಿದೆ. ಶಾಸನಾತ್ಮಕ ಕಾರ್ಯಭಾರದ ದೃಷ್ಟಿಯಿಂದ ಅಧಿವೇಶನ ಯಶಸ್ವಿ, ಏಕೆಂದರೆ 12 ಮಸೂದೆಗಳು ಅಂಗೀಕಾರಗೊಂಡಿವೆ. ಆದರೆ ಚರ್ಚೆ ಮತ್ತು ಸಂವಾದದ ದೃಷ್ಟಿಯಿಂದ ಅಧಿವೇಶನ ಯಶಸ್ವಿಯಾಗಿಲ್ಲ ಎಂದರು.

ಈ ಅಧಿವೇಶನದಲ್ಲಿ ಪರೀಕ್ಷಾ ಅಕ್ರಮ ತಡೆ ಮಸೂದೆಯ ಜತೆಗೆ ಹಲವು ಪ್ರಮುಖ ಮಸೂದೆಗಳು ಅಂಗೀಕಾರಗೊಂಡಿವೆ. ಅವುಗಳಲ್ಲಿ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳ ಸಂಖ್ಯೆ ಹೆಚ್ಚಳಕ್ಕೆ ಸಂಬಂಧಿಸಿದ ತಿದ್ದುಪಡಿ ಮಸೂದೆ, MSME ಅಭಿವೃದ್ಧಿ ತಿದ್ದುಪಡಿ ಮಸೂದೆ, ಜನನ–ಮರಣ ನೋಂದಣಿ ತಿದ್ದುಪಡಿ ಮಸೂದೆ, ಬ್ಯಾಂಕರ್‌ಗಳ ಪುಸ್ತಕಗಳ ಸಾಕ್ಷ್ಯ ಮಸೂದೆ, ತೆರಿಗೆ ಮತ್ತು ಇತರ ಕಾನೂನುಗಳ ತಿದ್ದುಪಡಿ ಮಸೂದೆ, ಟ್ರಿಬ್ಯುನಲ್ಸ್ ಸುಧಾರಣಾ ಮಸೂದೆ, ಕೇರಳದ ಹೆಸರು ಬದಲಾವಣೆ ಮಸೂದೆ ಹಾಗೂ ಖನಿಜ ಮತ್ತು ಗಣಿಗಾರಿಕೆ ಅಭಿವೃದ್ಧಿ ತಿದ್ದುಪಡಿ ಮಸೂದೆ ಸೇರಿವೆ.

ಅಧಿವೇಶನದ ಕೊನೆಯ ದಿನವೂ Mines and Minerals (Development and Regulation) Amendment Bill, 2026 ರಾಜ್ಯಸಭೆಯಲ್ಲಿ ಅಂಗೀಕಾರಗೊಂಡಿತು.

ಈ ಮಸೂದೆ ನಿರ್ಣಾಯಕ ಖನಿಜಗಳ ಅನ್ವೇಷಣೆ ಮತ್ತು ಅಭಿವೃದ್ಧಿಗೆ ಉತ್ತೇಜನ ನೀಡುವ ಉದ್ದೇಶ ಹೊಂದಿದೆ. ರಾಜ್ಯಸಭೆಯಲ್ಲಿ ಕೂಡ ನಿರಂತರ ಅಡ್ಡಿಪಡಿಸುವಿಕೆಗೆ ಸಭಾಪತಿ ಸಿ.ಪಿ. ರಾಧಾಕೃಷ್ಣನ್ ಅಸಮಾಧಾನ ವ್ಯಕ್ತಪಡಿಸಿದರು. ಸದನದ ಗೌರವ ಮತ್ತು ಸಂಸದೀಯ ಕರ್ತವ್ಯಗಳನ್ನು ಕಾಪಾಡುವಂತೆ ಅವರು ಸದಸ್ಯರಿಗೆ ಕರೆ ನೀಡಿದರು.

# ಭಾಷಣ ಮಾಡಿದ ಸ್ಥಳ ಶುದ್ಧೀಕರಣ ರಾಜ್ಯಸಭೆಯಲ್ಲಿ ಖರ್ಗೆ ಆಕ್ರೋಶ



### ಕೇಂದ್ರ ಸರ್ಕಾರದಿಂದ ತನಿಖೆಯ ಭರವಸೆ

**ನವದೆಹಲಿ, ಆ.13:** ಉತ್ತರಾಖಂಡದ ಹಲ್ದ್ವಾನಿಯಲ್ಲಿ ತಾವು ಭಾಷಣ ಮಾಡಿದ್ದ ರಾಮಲೀಲಾ ಮೈದಾನದ ವೇದಿಕೆಯನ್ನು ಶ್ರೀರಾಮಸೇನಾ ಸಂಘಟನೆಯು ಶುದ್ಧೀಕರಣ ನಡೆಸಿದ್ದಕ್ಕೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಕೃತ್ಯವು ಹಿಂದೂ ಧರ್ಮಕ್ಕೇ ವಿರುದ್ಧವಾದದ್ದು. ಈ ದೇಶದಲ್ಲಿ ದಲಿತರಿಗೆ ಸ್ಥಾನ ಇಲ್ಲ ಎಂಬುದನ್ನು ತೋರಿಸುತ್ತದೆ ಎಂದು ಕಿಡಿಕಾರಿದ್ದಾರೆ. ಆದರೆ, ಬಿಜೆಪಿ ನಾಯಕರು ಇದನ್ನು ತಳ್ಳಿಹಾಕಿದ್ದು, ಶುದ್ಧೀಕರಣ ಮಾಡಿದವರು ತಮ್ಮ ಪಕ್ಷಕ್ಕೆ ಸೇರಿದವರಲ್ಲ ಎಂದಿದ್ದಾರೆ.

ಹಲ್ದ್ವಾನಿಯ ರಾಮಲೀಲಾ ಮೈದಾನದಲ್ಲಿ ಮಲ್ಲಿಕಾರ್ಜುನ ಖರ್ಗೆ ವಿಜಯ ಶಂಖನಾದ ರ್‍ಯಾಲಿಯನ್ನು ಉದ್ದೇಶಿಸಿ ಭಾಷಣ ಮಾಡಿದ್ದರು. ಅದಾದ ಎರಡು ದಿನಗಳ ನಂತರ ಶ್ರೀರಾಮ ಸೇನಾ ಸಂಘಟನೆಯ ಸದಸ್ಯರು ಆ ವೇದಿಕೆಯಲ್ಲಿ ಶುದ್ಧೀಕರಣ ಹವನ ನಡೆಸಿದ್ದರು. ವಿಪಕ್ಷ ನಾಯಕರಾಗಿರುವ ಮಲ್ಲಿಕಾರ್ಜುನ ಖರ್ಗೆ ಅವರು ಸಂಸತ್ತಿನ ಮುಂಗಾರು ಅಧಿವೇಶನದ ಕೊನೆಯ ದಿನವಾದ ಗುರುವಾರ ಈ ವಿಚಾರ ಪ್ರಸ್ತಾಪಿಸಿ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.

ನಾನು ದಲಿತ ಸಮುದಾಯಕ್ಕೆ ಸೇರಿದವನೆಂಬ ಕಾರಣಕ್ಕೆ ಹಾಗೂ ದೇಶದಲ್ಲಿ ದಲಿತರಿಗೆ ಸ್ಥಾನವಿಲ್ಲ ಎಂಬ ಮನಸ್ಥಿತಿಯಿಂದ ಈ ರೀತಿ ಮಾಡಲಾಗಿದೆ. ಸಾರ್ವಜನಿಕ ಮೈದಾನದಲ್ಲಿ ಶುದ್ಧೀಕರಣ ಹವನ ಮಾಡುವ ಅಗತ್ಯವೇನಿತ್ತು? ಪ್ರಜಾಪ್ರಭುತ್ವದಲ್ಲಿ ಇದು ಸರಿಯಾದ ಮಾರ್ಗವೇ ಎಂದು ಪ್ರಶ್ನಿಸಿದರು.

ಕಾರ್ಯಕ್ರಮದಲ್ಲಿ ಲಕ್ಷಾಂತರ ಜನರು ಸೇರಿದ್ದರು. ನಾನು ಯಾವುದೇ ಸಮುದಾಯ ಅಥವಾ ಧರ್ಮದ ಹೆಸರನ್ನು ಪ್ರಸ್ತಾಪಿಸಲಿಲ್ಲ. ಸರ್ಕಾರದ ವೈಫಲ್ಯಗಳನ್ನು ಮಾತ್ರ ಪ್ರಶ್ನಿಸಿದ್ದೆ. ನನ್ನ ಭಾಷಣದ ಬಳಿಕ ಬಿಜೆಪಿಯ ಜನರು ವೇದಿಕೆ ಶುದ್ಧೀಕರಣಕ್ಕೆ ಹವನ ಮಾಡಿದ್ದಾರೆ. ನಾನೊಬ್ಬ ಪ್ರತಿಪಕ್ಷ ನಾಯಕ. ಇದು ನನ್ನ ವಿರುದ್ಧ ತೋರಿದ ಅಸ್ಪೃಶ್ಯತೆ ಎಂದು ಖರ್ಗೆ ಕೆಂಡಕಾರಿದ್ದಾರೆ.

ಈ ವಿಷಯಕ್ಕೆ ಪ್ರತಿಕ್ರಿಯಿಸಿದ ಸಚಿವ ಜೆ.ಪಿ. ನಡ್ಡಾ, ಈ ಘಟನೆ ದುರದೃಷ್ಟಕರ ಆದರೆ ಇದರಲ್ಲಿ ಬಿಜೆಪಿಯ ಪಾತ್ರವಿಲ್ಲ. ಈ ಬಗ್ಗೆ ತನಿಖೆ ನಡೆಸಲಾಗುವುದು ಎಂದು ಭರವಸೆ ನೀಡಿದ್ದಾರೆ. ಮತ್ತೊಂದೆಡೆ ಬಿಜೆಪಿ ವಕ್ತಾರ ಖಜಾನ್ ದಾಸ್ ಮಾತನಾಡಿ, ರ್‍ಯಾಲಿಯ ಸಮಯದಲ್ಲಿ ಸನಾತನ ಧರ್ಮ ಹಾಗೂ ಇತರ ಧರ್ಮಗಳಿಗೆ ಸಂಬಂಧಿಸಿದಂತೆ ಕೂಗಲಾದ ಘೋಷಣೆಗಳಿಂದ ಸ್ಥಳೀಯರ ಭಾವನೆಗೆ ಧಕ್ಕೆಯಾಗಿತ್ತು, ಆದ್ದರಿಂದ ಈ ಹವನ ನಡೆದಿದೆಯೇ ಹೊರತು ಜಾತಿ ಕಾರಣಕ್ಕಲ್ಲ ಎಂದು ಹೇಳಿದ್ದಾರೆ.

### ಡಿಕೆಶಿ ಆಕ್ರೋಶ

ಉತ್ತರಾಖಂಡದ ಹಲ್ದ್ವಾನಿಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಭಾಷಣ ಮಾಡಿದ ಜಾಗವನ್ನು ಶುದ್ಧೀಕರಣ ಮಾಡಿರುವ ಕ್ರಮವನ್ನು ಸಿಎಂ ಡಿ.ಕೆ. ಶಿವಕುಮಾರ್ ಖಂಡಿಸಿದ್ದು, ಈ ಘಟನೆಯು ಕೇವಲ ಒಬ್ಬ ವ್ಯಕ್ತಿಗೆ ಮಾಡಿದ ಅಪಮಾನವಲ್ಲ, ಬದಲಿಗೆ ಸಂವಿಧಾನದಲ್ಲಿ ಪ್ರತಿಪಾದಿಸಲಾದ ಮೌಲ್ಯಗಳ ಮೇಲಿನ ನೇರದಾಳಿ. ಅಲ್ಲದೆ, ಆಧುನಿಕ ಭಾರತದಲ್ಲಿ ಜಾತಿ ತಾರತಮ್ಯದ ಅಸಹ್ಯಕರ ನೆನಪು ಎಂದು ಕಿಡಿಕಾರಿದ್ದಾರೆ. ಗೌರವಾನ್ವಿತ ಜನನಾಯಕರು ಮತ್ತು ಜೀವಮಾನವಿಡೀ ಜನಸೇವೆ ಮಾಡಿದ ದಲಿತ ನಾಯಕರೊಬ್ಬರು ಭಾಷಣ ಮಾಡಿದರು ಎಂಬ ಕಾರಣಕ್ಕೆ ಸಾರ್ವಜನಿಕ ಸ್ಥಳವೊಂದಕ್ಕೆ ಶುದ್ಧೀಕರಣ ಬೇಕು ಎಂದು ಬಿಂಬಿಸಿರುವುದು ಜಾತಿ ತಾರತಮ್ಯಕ್ಕೆ ಸ್ಪಷ್ಟ ಉದಾಹರಣೆಯಾಗಿದೆ ಎಂದು ಹೇಳಿದರು.



ಇಂತಹ ಕೃತ್ಯಗಳನ್ನು ಸಾಮಾನ್ಯಗೊಳಿಸುವ ಅಥವಾ ಸಮರ್ಥಿಸುವ ಯಾವುದೇ ಪ್ರಯತ್ನವನ್ನು ಸ್ಪಷ್ಟವಾಗಿ ತಿರಸ್ಕರಿಸಬೇಕು ಎಂದು ತಿಳಿಸಿದ್ದಾರೆ.

# ವಿಧಾನಸಭೆ ಹೊಸ್ತಿಲು, ಸಿಎಂ ಪೀಠಕ್ಕೆ ಶಿರಬಾಗಿ ವಂದಿಸಿದ ಡಿ.ಕೆ. ಶಿವಕುಮಾರ್

**ಬೆಂಗಳೂರು,ಆ.13:** ರಾಜ್ಯ ವಿಧಾನಮಂಡಲದ ಮುಂಗಾರು ಅಧಿವೇಶನ ಗುರುವಾರದಿಂದ ಆರಂಭವಾಗಿದ್ದು, ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಮೊದಲ ಬಾರಿ ಅಧಿವೇಶನದಲ್ಲಿ ಭಾಗವಹಿಸುತ್ತಿರುವ ಡಿ.ಕೆ. ಶಿವಕುಮಾರ್ ಅವರು ಸದನವನ್ನು ಪ್ರವೇಶಿಸುವಾಗ ವಿಧಾನಸಭೆಯ ಹೊಸ್ತಿಲಿಗೆ ಮತ್ತು ಮುಖ್ಯಮಂತ್ರಿ ಪೀಠಕ್ಕೆ ಶಿರಬಾಗಿ ನಮಸ್ಕರಿಸಿದರು.



"ಕೋಟ್ಯಂತರ ಕನ್ನಡಿಗರ ಆಶೀರ್ವಾದದೊಂದಿಗೆ, ಪ್ರಜಾಪ್ರಭುತ್ವದ ಆಶಯಕ್ಕೆ ಶಿರಬಾಗಿ ಸದನಕ್ಕೆ ಮುಖ್ಯಮಂತ್ರಿಯಾಗಿ ನನ್ನ ಮೊದಲ ಹೆಜ್ಜೆ" ಎಂದು ಡಿಕೆ ಶಿವಕುಮಾರ್ ಅವರು ಎಕ್ಸ್‌ನಲ್ಲಿ ಫೋಟೋ ಹಂಚಿಕೊಂಡಿದ್ದಾರೆ. ಸಿಎಂ ಶಿವಕುಮಾರ್ ಅವರು ವಿರೋಧ ಪಕ್ಷದ ಬೆಂಚುಗಳತ್ತ ನಡೆದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಮತ್ತು ವಿರೋಧ ಪಕ್ಷದ ಉಪ ನಾಯಕ ಅರವಿಂದ್ ಬೆಲ್ಲದ್ ಅವರನ್ನು ದಿನದ ಕಲಾಪದ ಆರಂಭದಲ್ಲಿ ಸ್ವಾಗತಿಸಿದರು.

ಮೇ 28ರಂದು ಸಿದ್ದರಾಮಯ್ಯ ಅವರು ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿದ ನಂತರ ಜೂನ್ 3 ರಂದು ಶಿವಕುಮಾರ್ ಅವರು 13 ಸಚಿವರೊಂದಿಗೆ ಮೊದಲ ಬಾರಿ ಸಿಎಂ ಆಗಿ ಪ್ರಮಾಣ ಸ್ವೀಕರಿಸಿದರು.

ಆಗಸ್ಟ್ 3 ರಂದು ಮತ್ತೆ 19 ಸಚಿವರನ್ನು ತಮ್ಮ ಸಂಪುಟಕ್ಕೆ ಸೇರಿಸಿಕೊಳ್ಳುವ ಮೂಲಕ ಸಚಿವ ಸಂಪುಟವನ್ನು ವಿಸ್ತರಿಸಿದರು. ಈಗ ಡಿಕೆ ಶಿವಕುಮಾರ್ ನೇತೃತ್ವದ ಸಂಪುಟದ ಸಚಿವರ ಸಂಖ್ಯೆ 33ಕ್ಕೆ ತಲುಪಿದ್ದು, ಇನ್ನೂ ಒಂದು ಸ್ಥಾನ ಖಾಲಿ ಉಳಿದಿದೆ.

**ವಿಪಕ್ಷದಿಂದ ಸಹಕಾರ ಕೋರಿದ ಡಿಕೆಶಿ:** ವಿರೋಧ ಪಕ್ಷದ ನಾಯಕರು ಕುಳಿತುಕೊಂಡ ಸಾಲಿಗೆ ಸ್ವತಃ ಸಿಎಂ ಡಿಕೆ ಶಿವಕುಮಾರ್ ಆಗಮಿಸಿ ಕೈಕುಲುಕಿ ಸಹಕಾರ ಕೋರಿದರು. ವಿಧಾನಸಭೆ ಅಧಿವೇಶನದ ಆರಂಭದ ದಿನವೇ ವಿಪಕ್ಷಗಳ ಸಹಕಾರ ಕೇಳುವ ಮೂಲಕ ಗಮನ ಸೆಳೆದರು.

ಕಳೆದ ಮೂರು–ನಾಲ್ಕು ದಶಕಗಳಿಂದ ನಿರಂತರವಾಗಿ ಸದನದ ಸದಸ್ಯರಾಗಿರುವ ಶಿವಕುಮಾರ್, ವಿರೋಧ ಪಕ್ಷದ ಉಪನಾಯಕರಾಗಿ, ವಿವಿಧ ಇಲಾಖಾ ಸಚಿವರಾಗಿ, ಉಪಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ್ದಾರೆ.

ಸಿದ್ದರಾಮಯ್ಯ ಆಡಳಿತದಲ್ಲಿ ಮುಖ್ಯಮಂತ್ರಿಗಳ ಪಕ್ಕದ ಆಸನದಲ್ಲಿ ಕುಳಿತು ಉಪಮುಖ್ಯಮಂತ್ರಿಯಾಗಿ ಕಾರ್ಯ ನಿರ್ವಹಿಸಿದ್ದರು. ಬದಲಾದ ರಾಜಕೀಯ ಸನ್ನಿವೇಶದಲ್ಲಿ ಕಾಂಗ್ರೆಸ್ ಪಕ್ಷ, ಶಿವಕುಮಾರ್ ಅವರನ್ನು ಮುಖ್ಯಮಂತ್ರಿಯಾಗಿ ಮಾಡಿದ ನಂತರ ನಡೆಯುತ್ತಿರುವ ಮೊದಲ ಮುಂಗಾರು ಅಧಿವೇಶನದಲ್ಲಿ ಪಾಲ್ಗೊಳ್ಳಲು ವಿಧಾನಸೌಧದ ಮೊಗಸಾಲೆಯಲ್ಲಿನ ಕಚೇರಿ ದ್ವಾರಕ್ಕೆ ಶಿರಬಾಗಿ ನಮಸ್ಕರಿಸಿ ತಮ್ಮ ಕಾರ್ಯ ಆರಂಭಿಸಿದರು.

## ಆದಿವಾಸಿ ಮತ್ತು ಅಲೆಮಾರಿ ಆಯೋಗ ರಚನೆಗೆ ಸಿಎಂ ಆದೇಶ

**ಬೆಂಗಳೂರು, ಆ.13:** ಆದಿವಾಸಿ ಮತ್ತು ಅಲೆಮಾರಿ ಸಮುದಾಯಗಳ ಅಭಿವೃದ್ಧಿಗೆ ವಿಶೇಷ ಆಯೋಗ ರಚನೆಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆದೇಶ ಹೊರಡಿಸಿದ್ದಾರೆ. ಇತ್ತೀಚೆಗಷ್ಟೇ ವಿಶ್ವ ಆದಿವಾಸಿ ದಿನಾಚಾರಣೆ ಕಾರ್ಯಕ್ರಮದಲ್ಲಿ ಈ ವಿಶೇಷ ಆಯೋಗ ರಚನೆಗೆ ಬೇಡಿಕೆ ನೀಡಲಾಗಿತ್ತು. ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಒಂದು ತಿಂಗಳಲ್ಲಿ ಆಯೋಗ ರಚಿಸುವ ವಾಗ್ದಾನ ನೀಡಿದ್ದರು. ಈಗ ಎರಡೇ ದಿನದಲ್ಲಿ ಈ ಆದೇಶ ಹೊರಡಿಸುವ ಮೂಲಕ ನುಡಿದಂತೆ ನಡೆದಿದ್ದಾರೆ.

ಕರ್ನಾಟಕದಲ್ಲಿ ವಾಸಿಸುತ್ತಿರುವ ಆದಿವಾಸಿ ಮತ್ತು ಅಲೆಮಾರಿ ಸಮುದಾಯಗಳು ಇಂದಿಗೂ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕವಾಗಿ ಹಲವು ಸವಾಲುಗಳನ್ನು ಎದುರಿಸುತ್ತಿವೆ. ಈ ಹಿನ್ನೆಲೆಯಲ್ಲಿ ಅವರ ಅಭಿವೃದ್ಧಿ, ಹಕ್ಕುಗಳ ರಕ್ಷಣೆ ಹಾಗೂ ಸಾಮಾಜಿಕ ನ್ಯಾಯವನ್ನು ಒದಗಿಸುವ ಸಲುವಾಗಿ ವಿಶೇಷ ಆಯೋಗವನ್ನು ರಚಿಸಲು ಸರ್ಕಾರ ನಿರ್ಧರಿಸಿದೆ.

ಉತ್ತಮ ಶಿಕ್ಷಣ, ಪೌಷ್ಟಿಕ ಆಹಾರ, ಗುಣಮಟ್ಟದ ಆರೋಗ್ಯ ಸೇವೆ, ವಸತಿ, ಕುಡಿಯುವ ನೀರು, ರಸ್ತೆ, ವಿದ್ಯುತ್ ಸೇರಿದಂತೆ ಅಗತ್ಯ ಮೂಲಸೌಕರ್ಯಗಳನ್ನು ಸಮರ್ಪಕವಾಗಿ ಒದಗಿಸುವುದರ ಜೊತೆಗೆ, ಯುವಜನರಿಗೆ ಕೌಶಲ್ಯಾಭಿವೃದ್ಧಿ ಮತ್ತು ಉದ್ಯೋಗಾವಕಾಶಗಳನ್ನು ಕಲ್ಪಿಸುವುದೇ ಸರ್ಕಾರದ ಮುಖ್ಯ ಉದ್ದೇಶವಾಗಿದೆ. ಆದಿವಾಸಿ ಮತ್ತು ಅಲೆಮಾರಿ ಸಮುದಾಯಗಳ ಬದುಕಿನಲ್ಲಿ ಹೊಸ ಭರವಸೆ ಮೂಡಿಸುವುದರ ಜೊತೆಗೆ ಸಮಾನ ಅವಕಾಶಗಳನ್ನು ಒದಗಿಸಲು ಸರ್ಕಾರ ಬದ್ಧವಾಗಿದೆ.

# 2030–31ರವರೆಗೆ ಮೆರಿಟ್ ವಿದ್ಯಾರ್ಥಿವೇತನ ಮುಂದುವರಿಸಲು ಕೇಂದ್ರ ಸರ್ಕಾರ ಚಿಂತನೆ

**ನವದೆಹಲಿ, ಆ.13:** ರಾಷ್ಟ್ರೀಯ ಸಾಧನೆ ಆಧಾರಿತ ವಿದ್ಯಾರ್ಥಿ ವೇತನ ಯೋಜನೆಯನ್ನು 4 ವರ್ಷ ಅವಧಿಗೆ ಮುಂದುವರಿಸಲು ಕೇಂದ್ರ ಸರ್ಕಾರ ಚಿಂತನೆ ನಡೆಸಿದೆ.

ಕೇಂದ್ರ ಶಿಕ್ಷಣ ಸಚಿವ ಪ್ರಲ್ಹಾದ ಜೋಶಿ ಅವರು ಶಿಕ್ಷಣ ಸಚಿವಾಲಯದ ಹಿರಿಯ ಅಧಿಕಾರಿಗಳ ಸಭೆ ನಡೆಸಿ ಓಒಎಖಖ ಯೋಜನೆ ಮುಂದುವರಿಸುವ ಪ್ರಸ್ತಾವನೆ ಕುರಿತಂತೆ ಚರ್ಚಿಸಿದ್ದಾರೆ. ಸಭೆಯ ಅಧ್ಯಕ್ಷತೆ ವಹಿಸಿದ್ದ ಸಚಿವರು, ಈ ಯೋಜನೆಯನ್ನು 2026–27ರಿಂದ 2030–31ರ ವರೆಗೆ ವಿಸ್ತರಿಸುವ ಬಗ್ಗೆ ಉನ್ನತ ಅಧಿಕಾರಿಗಳಿಂದ ಅಗತ್ಯ ಮಾಹಿತಿ, ಸಲಹೆ ಪಡೆದಿದ್ದಾರೆ.



■ ಶಿಕ್ಷಣ ಇಲಾಖೆ ಅಧಿಕಾರಿಗಳ ಜತೆ ಸಚಿವ ಪ್ರಲ್ಹಾದ ಜೋಶಿ ಚರ್ಚೆ

ದೇಶಾದ್ಯಂತ ಪ್ರತಿಭಾವಂತ, ಕಸಾಧಕ ವಿದ್ಯಾರ್ಥಿಗಳಿಗೆ ಶೈಕ್ಷಣಿಕವಾಗಿ ಬೆಂಬಲ ನೀಡುವ ನಿಟ್ಟಿನಲ್ಲಿ ಈ ಯೋಜನೆ ನಿರಂತರ ಅನುಷ್ಠಾನದ ಕುರಿತು ಸಚಿವರು ಮಹತ್ವದ ಚರ್ಚೆ ನಡೆಸಿದರು. ಅಲ್ಲದೆ, ಯೋಜನೆ ಪ್ರಮುಖ ಅಂಶಗಳ ಬಗ್ಗೆ ಗಮನ ಹರಿಸಿದ ಸಚಿವರು, ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಇದರ ಪ್ರಯೋಜನ ಲಭ್ಯವಾಗಬೇಕು ಎಂದು ಸಲಹೆ ನೀಡಿದರು.

**ಈರುಳ್ಳಿ ದಾಸ್ತಾನು ಮೇಲೆ ನಿಗಾ:** ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು, ಗ್ರಾಹಕ ವ್ಯವಹಾರ ಸಚಿವರೂ ಆಗಿರುವ ಪ್ರಲ್ಹಾದ ಜೋಶಿ ಅವರು ಗ್ರಾಹಕ ವ್ಯವಹಾರ ಇಲಾಖೆ ಅಧಿಕಾರಿಗಳ ಜತೆಯೂ ಸಭೆ ನಡೆಸಿ, ಈರುಳ್ಳಿ ಸಂಗ್ರಹ, ದಾಸ್ತಾನು ಮೇಲೆ ನಿಗಾ ಇಡುವಂತೆ ಸೂಚಿಸಿದರು. ಈರುಳ್ಳಿ ಸಂಗ್ರಹಣೆ ಮತ್ತು ದಾಸ್ತಾನು ನಿರ್ವಹಣೆ ಬಗ್ಗೆ ಪರಿಶೀಲನೆ ನಡೆಸಿ, ಮಾರುಕಟ್ಟೆಯಲ್ಲಿ ಬೆಲೆ ಸ್ಥಿರತೆ ಬಗ್ಗೆ ಗಮನ ಹರಿಸಿ ಎಂದು ಗ್ರಾಹಕ ವ್ಯವಹಾರ ಇಲಾಖೆ ಕಾರ್ಯದರ್ಶಿಗೆ ಸಲಹೆ ನೀಡಿದರು. ಈರುಳ್ಳಿ ವಿಲೇವಾರಿ ತಂತ್ರ, ಮಾರುಕಟ್ಟೆ ಪರಿಸ್ಥಿತಿ ಮತ್ತು ಸೂಕ್ತ ದರದಲ್ಲಿ ನಿರಂತರ ಪೂರೈಕೆ ಕುರಿತಂತೆ ಚರ್ಚೆ ನಡೆಸಿದರು. ಮಾರುಕಟ್ಟೆಯಲ್ಲಿ ಈರುಳ್ಳಿ ದಾಸ್ತಾನು ಮತ್ತು ಬೆಲೆ ಸ್ಥಿರತೆಯನ್ನು ಬಲಪಡಿಸಲು ನಿಕಟವಾಗಿ ನಿಗಾ ವಹಿಸಬೇಕು, ಆ ನಿಟ್ಟಿನಲ್ಲಿ ಸಮನ್ವಯದ ಕ್ರಮಗಳ ಅಗತ್ಯತೆ ಬಗ್ಗೆಯೂ ಸಚಿವರು ನಿರ್ದೇಶನ ನೀಡಿದರು.

## ಕೆಂಪುಕೋಟೆ ಕಾರ್‌ಬಾಂಬ್ ಸ್ಫೋಟ: ವಿಶ್ವಸಂಸ್ಥೆ ಭದ್ರತಾ ಮಂಡಳಿ ವರದಿಯಲ್ಲಿ ಉಲ್ಲೇಖ

**ನವದೆಹಲಿ, ಆ.13:** ದೆಹಲಿಯ ಕೆಂಪುಕೋಟೆಯ ಬಳಿ ನಡೆದ ಕಾರು ಬಾಂಬ್ ಸ್ಫೋಟದ ತನಿಖೆಯಲ್ಲಿ ಜಾಗತಿಕ ಮಟ್ಟದಲ್ಲಿ ತಿರುವ ಸಿಕ್ಕಿದ್ದು, ದಾಳಿ ಹಿಂದೆ ಅಲ್–ಖೈದಾ ಕೈವಾಡದ ಕುರಿತು ಮಹತ್ವದ ಸಾಕ್ಷ್ಯ ದೊರೆತಿದೆ. ಈ ದಾಳಿಯನ್ನು 'ಅಲ್–ಖೈದಾ ಇನ್ ದಿ ಇಂಡಿಯನ್ ಸಬ್ ಕಾಂಟಿನೆಂಟ್ (ಎಕ್ಯುಐಎಸ್) ಉಗ್ರ ಸಂಘಟನೆಯೇ ನಡೆಸಿರುವುದು ಅಧಿಕೃತವಾಗಿ ಸಾಬೀತಾಗಿದೆ ಎಂದು ವಿಶ್ವಸಂಸ್ಥೆಯ ಭದ್ರತಾ ಮಂಡಳಿ ತಿಳಿಸಿದೆ. ಈ ಸಂಬಂಧ ಐಎಸ್‌ಐಎಲ್ ಮತ್ತು ಅಲ್‌ಖೈದಾ ಕುರಿತ 1267 ನಿರ್ಬಂಧ ಸಮಿತಿಗೆ ಸಲ್ಲಿಸಲಾದ ವಿಶ್ಲೇಷಣಾ ಬೆಂಬಲ ಮತ್ತು ನಿರ್ಬಂಧಗಳ ಮೇಲ್ವಿಚಾರಣಾ ತಂಡದ 38ನೇ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಎಕ್ಯುಐಎಸ್ ಸಂಘಟನೆಯು ಪ್ರಾದೇಶಿಕ ಭಯೋತ್ಪಾದಕ ಸಂಘಟನೆಯಾಗಿ ಕಾರ್ಯವೈಖರಿ ಬದಲಿಸಿಕೊಂಡಿದೆ. ಸಣ್ಣ ವಿಭಾಗಗಳ ಮೂಲಕ ಸಂಘಟನೆ ಸಾಗಣೆ ಹಾಗೂ ಹಣಕಾಸು ಜಾಲಗಳನ್ನು ಅಭಿವೃದ್ಧಿಪಡಿಸಿಕೊಂಡಿದೆ. 2025ರ ನವೆಂಬರ್‌ನಲ್ಲಿ ದೆಹಲಿಯ ಕೆಂಪುಕೋಟೆ ಬಳಿ ನಡೆದ ದಾಳಿಗೆ ಅಲ್–ಖೈದಾ ಇನ್ ದಿ ಇಂಡಿಯನ್ ಸಬ್‌ಕಾಂಟಿನೆಂಟ್ (ಎಕ್ಯುಐಎಸ್) ಅನ್ನು ಅಧಿಕೃತವಾಗಿ ಹೊಣೆಗಾರರನ್ನಾಗಿ ಮಾಡಲಾಗಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ದೆಹಲಿಯಲ್ಲಿ ಇತ್ತೀಚಿನ ವರ್ಷಗಳಲ್ಲಿ ನಡೆದ ಅತ್ಯಂತ ಭೀಕರ ಭಯೋತ್ಪಾದಕ ದಾಳಿಗಳಲ್ಲಿ ಇದೂ ಒಂದಾಗಿದ್ದು, ಕೆಂಪುಕೋಟೆ ಮೆಟ್ರೋ ನಿಲ್ದಾಣದ ಸಮೀಪದ ಟ್ರಾಫಿಕ್ ಸಿಗ್ನಲ್‌ನಲ್ಲಿ ನಿಧಾನವಾಗಿ ಚಲಿಸುತ್ತಿದ್ದ ಕಾರಿನಲ್ಲಿ ಸ್ಫೋಟ ಸಂಭವಿಸಿತ್ತು. ಘಟನೆಯಲ್ಲಿ 15 ಮಂದಿ ಮೃತಪಟ್ಟಿದ್ದು, ಹಲವರು ಗಾಯಗೊಂಡಿದ್ದರು.


# ರೈಡ್‌ಗೂ ಮುನ್ನ ಅಡ್ವಾನ್ಸ್ ಟಿಪ್ ಆಯ್ಕೆ ತೆಗೆಯಿರಿ

**ನವದೆಹಲಿ, ಆ.13:** ಓಲಾ, ಉಬರ್ ಹಾಗೂ ರ್‍ಯಾಪಿಡೊ ಸೇರಿ ಕ್ಯಾಬ್ ಸೇವಾ ಸಂಸ್ಥೆಗಳ ಆಪ್‌ಗಳಲ್ಲಿ ಪ್ರಯಾಣ ಆರಂಭಕ್ಕೂ ಮುನ್ನವೇ ಚಾಲಕರಿಗೆ ಟಿಪ್ ನೀಡುವ ಆಯ್ಕೆಯನ್ನು ತೆಗೆದುಹಾಕುವಂತೆ ಕೇಂದ್ರ ಸರ್ಕಾರ ಸೂಚಿಸಿದೆ.

ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಈ ಸಂಬಂಧ ರೈಡ್ ಅಗ್ರಿಗೇಟರ್‌ಗಳಿಗೆ ನಿರ್ದೇಶನ ನೀಡಿದ್ದು, ಪ್ರಯಾಣಿಕರಿಗೆ ಟಿಪ್ ನೀಡುವ ಅವಕಾಶವನ್ನು ರೈಡ್ ಪೂರ್ಣಗೊಂಡ ಬಳಿಕ ಮಾತ್ರ ಒದಗಿಸಬೇಕು ಎಂದು ಸ್ಪಷ್ಟಪಡಿಸಿದೆ.

ಮೋಟಾರ್ ವೆಹಿಕಲ್ ಅಗ್ರಿಗೇಟರ್ ಗೈಡ್‌ಲೈನ್ಸ್–2025ಕ್ಕೆ ಅನುಗುಣವಾಗಿ ಈ ನಿರ್ದೇಶನ ನೀಡಲಾಗಿದೆ. ಪ್ರಯಾಣಿಕರು ಸೇವೆಯನ್ನು ಅನುಭವಿಸುವ ಮೊದಲೇ ಟಿಪ್ ನೀಡುವಂತೆ ಆಪ್‌ನಲ್ಲಿ ಆಯ್ಕೆ ನೀಡುವುದು, ಹೆಚ್ಚುವರಿ ಹಣ ಪಾವತಿಸಿದರೆ ಬೇಗ ರೈಡ್ ಖಚಿತವಾಗಬಹುದು ಅಥವಾ ಚಾಲಕ ಬೇಗ ಸ್ವೀಕರಿಸಬಹುದು ಎಂಬ ತಪ್ಪು ಅಭಿಪ್ರಾಯ ಮೂಡಿಸುವ ಸಾಧ್ಯತೆ ಇದೆ ಎಂದು ಸರ್ಕಾರ ಅಭಿಪ್ರಾಯಪಟ್ಟಿದೆ.

### ಓಲಾ, ಉಬರ್ ಹಾಗೂ ರ್‍ಯಾಪಿಡೊ ಅಗ್ರಿಗೇಟರ್‌ಗಳಿಗೆ ಕೇಂದ್ರ ಸರ್ಕಾರ ಸೂಚನೆ





ಅಡ್ವಾನ್ಸ್ ಟಿಪ್, ಆಡ್–ಆನ್ ಆಯ್ಕೆ ಅಥವಾ ಟಿಪ್ ನೀಡಿದರೆ ರೈಡ್ ಬೇಗ ಖಚಿತವಾಗಲಿದೆ ಎಂಬ ರೀತಿಯ ಸೂಚನೆಗಳನ್ನು ರೈಡ್ ಆರಂಭಕ್ಕೂ ಮುನ್ನ ಅಥವಾ ಪ್ರಯಾಣದ ವೇಳೆ ಪ್ರದರ್ಶಿಸಬಾರದು ಎಂದು ಸಚಿವಾಲಯ ಹೇಳಿದೆ. ಟಿಪ್ ನೀಡುವುದು ಸಂಪೂರ್ಣ ಸ್ವಯಂಪ್ರೇರಿತವಾಗಿರಬೇಕು ಎಂದು ಕೇಂದ್ರ ಹೇಳಿದೆ.

ಪ್ರಯಾಣ ಮುಗಿದ ಬಳಿಕ ಪ್ರಯಾಣಿಕರು ತಮ್ಮ ಅನುಭವ ಹಾಗೂ ಸೇವೆಯ ಗುಣಮಟ್ಟವನ್ನು ಆಧರಿಸಿ ಟಿಪ್ ನೀಡಬಹುದಾಗಿದೆ.

ಈ ಮೊತ್ತದಲ್ಲಿ ಅಗ್ರಿಗೇಟರ್‌ಗಳು ಯಾವುದೇ ಕಮಿಷನ್ ಅಥವಾ ಶುಲ್ಕ ಕಡಿತ ಮಾಡದೆ, ಸಂಪೂರ್ಣ ಮೊತ್ತವನ್ನು ಚಾಲಕರಿಗೆ ನೀಡಬೇಕು ಎಂಬ ಸೂಚನೆಯೂ ಇದೆ. ಪ್ರಯಾಣಿಕರ ಮೇಲೆ ಹೆಚ್ಚುವರಿ ಹಣ ಪಾವತಿಸುವ ಒತ್ತಡ ಉಂಟಾಗದಂತೆ ಆಪ್ ವಿನ್ಯಾಸದಲ್ಲಿಯೂ ಅಗತ್ಯ ಬದಲಾವಣೆ ಮಾಡಬೇಕು ಎಂದು ಕೇಂದ್ರ ಸರ್ಕಾರ ಸೂಚಿಸಿದೆ.

# ಅಕ್ರಮ ಆಸ್ತಿ ತನಿಖೆ: ಹೈಕೋರ್ಟ್ ತೀರ್ಪು ಪ್ರಶ್ನಿಸಿ ಸುಪ್ರೀಂ ಮೊರೆಹೋದ ರಾಹುಲ್ ಗಾಂಧಿ


**ನವದೆಹಲಿ, ಆ.13:** ಅಕ್ರಮ ಆಸ್ತಿ ಗಳಿಕೆ ಆರೋಪಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸುವಂತೆ ಅಲಹಾಬಾದ್ ಹೈಕೋರ್ಟ್ ನೀಡಿರುವ ಆದೇಶವನ್ನು ಪ್ರಶ್ನಿಸಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ.



ಅಕ್ರಮ ಆಸ್ತಿ ಗಳಿಕೆ ಆರೋಪದ ಮೇಲೆ ರಾಹುಲ್ ಗಾಂಧಿ ವಿರುದ್ಧ ತನಿಖೆ ನಡೆಸುವಂತೆ ಅಲಹಾಬಾದ್ ಹೈಕೋರ್ಟ್ ಸಿಬಿಐ ಮತ್ತು ಇಡಿಗೆ ಸೂಚಿಸಿತ್ತು. ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿ ಜೋಯ್‌ಮಾಲ್ಯ ಬಾಗ್ಚಿ, ನ್ಯಾಯಮೂರ್ತಿ ವಿ.ಮೋಹನಾ ಅವರ ಪೀಠವು ಆ. 17ರಂದು ರಾಹುಲ್ ಗಾಂಧಿ ಅವರ ಅರ್ಜಿಯ ವಿಚಾರಣೆ ನಡೆಸಬಹುದು. ಜು.20ರಂದು ಅಲಹಾಬಾದ್ ಹೈಕೋರ್ಟ್‌ನ ಲಖನೌ ಪೀಠವು ಸಿಬಿಐನ ಪ್ರತಿಕ್ರಿಯೆಗೆ ಅತೃಪ್ತಿ ವ್ಯಕ್ತಪಡಿಸಿ, ರಾಹುಲ್ ವಿರುದ್ಧದ ಅಕ್ರಮ ಆಸ್ತಿಗಳ ಆರೋಪದ ತನಿಖೆಯಲ್ಲಿ ಆಗಿರುವ ಪ್ರಗತಿಯನ್ನು ವಿವರಿಸುವ ಹೊಸ ಅಫಿಡವಿಟ್ ಅನ್ನು ವೈಯಕ್ತಿಕವಾಗಿ ಸಲ್ಲಿಸುವಂತೆ ಸೂಚಿಸಿತ್ತು. ತನಿಖೆ ಸಂದರ್ಭದಲ್ಲಿ ಜಾರಿ ನಿರ್ದೇಶನಾಲಯವು ಯಾವುದೇ ಅಕ್ರಮವನ್ನು ಸೂಚಿಸುವ ವಸ್ತು ಅಥವಾ ದಾಖಲೆಗಳನ್ನು ಕಂಡುಕೊಂಡರೆ, ನಂತರ ಕಾನೂನಿನ ಪ್ರಕಾರ ಮುಂದಿನ ಕ್ರಮ ಕೈಗೊಳ್ಳಲು ಮುಕ್ತವಾಗಿರುತ್ತದೆ ಎಂದು ಹೈಕೋರ್ಟ್ ಹೇಳಿದೆ.

ಕಾಂಗ್ರೆಸ್ ನಾಯಕನ ಆದಾಯದ ಮೂಲಗಳನ್ನು ಮೀರಿದ ಆಸ್ತಿಗಳ ಆರೋಪಗಳ ಕುರಿತು ಸಿಬಿಐ ಮತ್ತು ಇಡಿ ತನಿಖೆ ನಡೆಸುವಂತೆ ಕೋರಿ ಸಲ್ಲಿಸಲಾದ ಅರ್ಜಿಯ ವಿಚಾರಣೆಯ ವೇಳೆ ಹೈಕೋರ್ಟ್ ಈ ಸೂಚನೆಗಳನ್ನು ನೀಡಿದೆ. ಕರ್ನಾಟಕದ ಎಸ್.ವಿಘ್ನೇಶ್ ಶಿಶಿರ್ ಸಲ್ಲಿಸಿದ್ದ ಕ್ರಿಮಿನಲ್ ರಿಟ್ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಧೀಶರು ಈ ಆದೇಶ ನೀಡಿದ್ದಾರೆ.

## ನಿತ್ಯ ಪಂಚಾಂಗ 14.08.2026 ಶುಕ್ರವಾರ



ಶ್ರೀಶಕ 1949 ಶ್ರೀ ಪರಾಭವ ನಾಮ ಸಂವತ್ಸರ, ದಕ್ಷಿಣಾಯಣ ಗ್ರೀಷ್ಮ ಋತು, ಚಾಂದ್ರಮಾನ, ಆಷಾಢ-ಶ್ರಾವಣ ಮಾಸ

ಶ್ರಾವಣ ಶುದ್ಧ, ಬಿದಿಗೆ, ಮಖ ನಕ್ಷತ್ರ, ಆಡಿ ಶುಕ್ರವಾರ, ಚಂದ್ರದರ್ಶನ, ಚಿತ್ರಹಳ್ಳಿ ಜಾತ್ರೆ, ಲೋಕಾಪುರ ಬಾಲಭುಜಂಗ ಸ್ವಾಮಿ ಆರಾಧನೆ

| ದಿನ | ರಾಹುಕಾಲ | ಯಮಗಂಡ | ಗುಳಿಕಕಾಲ |
|---|---|---|---|
| ಭಾನು | ಸ. 5.04– 6.33 | 12.00– 1.30 | 3.00– 4.00 |
| ಸೋಮ | ಬೆ. 7.20– 9.04 | 10.30–12.00 | 1.30– 3.00 |
| ಮಂಗಳ | ಮ. 3.25– 4.59 | 9.00–10.30 | 12.00– 1.30 |
| ಬುಧ | ಮ.12.16– 1.50 | 7.30– 9.00 | 10.30– 12.00 |
| ಗುರು | ಮ. 1.50– 3.29 | 6.00– 7.30 | 9.00– 10.30 |
| ಶುಕ್ರ | ಬೆ.10.42–12.16 | 3.00– 4.30 | 7.30– 9.00 |
| ಶನಿ | ಬೆ. 9.07–10.41 | 1.30– 3.00 | 6.00– 7.30 |



ಲೋಕಸಭೆ ಅಧಿವೇಶನದ ಕಡೆಯ ದಿನವಾದ ಗುರುವಾರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರನ್ನು ಭೇಟಿಮಾಡಿದ ದಕ್ಷಿಣ ಕನ್ನಡ ಸಂಸದ ಕ್ಯಾಪ್ಟನ್ ಚೌಟ, ಕ್ಷೇತ್ರದ ರೈಲ್ವೆ ಮೂಲಸೌಕರ್ಯ ಅಭಿವೃದ್ಧಿ ಮತ್ತು ಸೇವೆಗಳ ಕುರಿತು ಚರ್ಚೆ ನಡೆಸಿದರು. ಹಾಗೂ ಕರಾವಳಿಯನ್ನು ಸಂಪರ್ಕಿಸುವ ನಿಟ್ಟಿನಲ್ಲಿ ಬೆಂಗಳೂರು – ಮಂಗಳೂರು ಮಾರ್ಗವನ್ನು ಮೇಲ್ದರ್ಜೆಗೇರಿಸುವ ಕುರಿತು ಮಾತುಕತೆ ನಡೆಸಿದರು.

# ವಿಧಾನಮಂಡಲ ಅಧಿವೇಶನ: ಮೊದಲ ದಿನವೇ ಆಡಳಿತ- ಪ್ರತಿಪಕ್ಷಗಳ ನಡುವೆ ಲಘು ಚರ್ಚೆ

**ಮೊದಲು ಸಂತಾಪ ಸೂಚನೆ, ನಂತರ ನೂತನ ಸಚಿವರ ಪರಿಚಯ: ವಿಪಕ್ಷ ನಾಯಕ ಅಶೋಕ್ ಮಾತಿಗೆ ಸಹಮತ ವ್ಯಕ್ತಪಡಿಸಿದ ಸಿಎಂ ಡಿ.ಕೆ. ಶಿವಕುಮಾರ್**

**ಬೆಂಗಳೂರು, ಆ.13:** ವಿಧಾನಮಂಡಲದ ಅಧಿವೇಶನದ ಮೊದಲ ದಿನವೇ ಸಂತಾಪ ಸೂಚನೆ ಹಾಗೂ ನೂತನ ಸಚಿವರ ಪರಿಚಯ ವಿಚಾರವಾಗಿ ಆಡಳಿತ ಮತ್ತು ಪ್ರತಿಪಕ್ಷದ ನಡುವೆ ಲಘು ಚರ್ಚೆ ನಡೆಯಿತು.

ಸಂತಾಪ ಸೂಚನೆಯ ಗಂಭೀರ ಸಂದರ್ಭವನ್ನು ನೂತನ ಸಚಿವರಾಗಿ ಅಧಿಕಾರ ಸ್ವೀಕರಿಸಿರುವವರ ಸಂಭ್ರಮದೊಂದಿಗೆ ಮಿಶ್ರಣ ಮಾಡಬಾರದು ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಅಭಿಪ್ರಾಯಪಟ್ಟಿದ್ದು, ಇದಕ್ಕೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಹಮತ ವ್ಯಕ್ತಪಡಿಸಿದರು.

ವಿಧಾನಮಂಡಲದ ಅಧಿವೇಶನ ರಾಷ್ಟ್ರಗೀತೆ, ವಂದೇ ಮಾತರಂ ಗಾಯನದೊಂದಿಗೆ ಆರಂಭವಾಯಿತು. ಬಳಿಕ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಇತ್ತೀಚೆಗೆ ಸಂಪುಟಕ್ಕೆ ಸೇರ್ಪಡೆಯಾದ ನೂತನ ಸಚಿವರನ್ನು ಸದನಕ್ಕೆ ಪರಿಚಯಿಸಲು ಮುಂದಾದರು. ಈ ವೇಳೆ ಎದ್ದು ನಿಂತ ವಿರೋಧ ಪಕ್ಷದ ನಾಯಕ ಆರ್. ಅಶೋಕ್, ಸದನದಲ್ಲಿ ಸಂತಾಪ ಸೂಚನೆ ನಡೆಯಬೇಕಿದೆ. ಸಚಿವರಾಗಿ ಅಧಿಕಾರ ಸ್ವೀಕರಿಸಿರುವವರಿಗೆ ಇದು ಸಂಭ್ರಮದ ವಿಚಾರ. ಹೀಗಾಗಿ ಸಂತಾಪ ಸೂಚನೆಯ ಗಂಭೀರ ಸಂದರ್ಭದ ಜೊತೆಗೆ ನೂತನ ಸಚಿವರ ಪರಿಚಯದ ಸಂಭ್ರಮವನ್ನು ಮಿಶ್ರಣ ಮಾಡುವ ಹೊಸ ಸಂಪ್ರದಾಯ



ಬೇಡ ಎಂದು ಹೇಳಿದರು.

ಅಧಿವೇಶನದ ಅಧಿಕೃತ ಕಾರ್ಯ ಕಲಾಪಗಳು ಸೋಮವಾರದಿಂದ ಆರಂಭವಾಗಲಿದ್ದು, ಅಂದೇ ನೂತನ ಸಚಿವರನ್ನು ಸದನಕ್ಕೆ ಪರಿಚಯಿಸಬಹುದು ಎಂದು ಆರ್. ಅಶೋಕ್ ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಸಭಾಧ್ಯಕ್ಷರ ಪೀಠದಲ್ಲಿದ್ದ ಹಂಗಾಮಿ ಸಭಾಧ್ಯಕ್ಷ ಟಿ.ಬಿ. ಜಯಚಂದ್ರ ಅವರು ಮಧ್ಯಪ್ರವೇಶಿಸಿ, ಸಂತಾಪ ಸೂಚನಾ ನಿರ್ಣಯ ಇನ್ನೂ ಮಂಡನೆಯಾಗಿಲ್ಲ. ಆದ್ದರಿಂದ ಮುಖ್ಯಮಂತ್ರಿ ಅವರು ನೂತನ ಸಚಿವರನ್ನು ಸದನಕ್ಕೆ ಪರಿಚಯಿಸಬಹುದು ಎಂದು ಅಭಿಪ್ರಾಯಪಟ್ಟರು.

ಕಲಾಪ ಆರಂಭವಾದ ಸಂದರ್ಭದಲ್ಲಿ ಹೊಸದಾಗಿ ಸಚಿವರಾಗಿ ನೇಮಕಗೊಂಡವರನ್ನು ಸದನಕ್ಕೆ ಪರಿಚಯಿಸುವುದು ಸಂಪ್ರದಾಯವಾಗಿದೆ. ಇದಕ್ಕೆ ನಿಯಮಗಳಲ್ಲಿಯೂ ಅವಕಾಶವಿದೆ ಎಂದು ಜಯಚಂದ್ರ ತಿಳಿಸಿದರು. ಆದರೂ ಆರ್. ಅಶೋಕ್ ಅವರು ತಮ್ಮ ನಿಲುವಿಗೆ ಬದ್ಧರಾಗಿದ್ದರು.

ಸಂತಾಪ ಸೂಚನೆಯ ಸಂದರ್ಭವನ್ನು ಗೌರವಿಸುವುದು ಮುಖ್ಯವಾಗಿದ್ದು, ಸಚಿವರ ಪರಿಚಯವನ್ನು ನಂತರ ನಡೆಸುವುದು ಸೂಕ್ತ ಎಂದು ಪುನರುಚ್ಚರಿಸಿದರು.

ಈ ಹಂತದಲ್ಲಿ ಮಧ್ಯಪ್ರವೇಶಿಸಿದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರ ಭಾವನೆಗಳಿಗೆ ಬೆಂಬಲವಿದೆ ಎಂದು ಹೇಳಿದರು. ಮೊದಲು ಸಂತಾಪ ಸೂಚನೆ ನಡೆಯಲಿ. ಬಳಿಕ ನೂತನ ಸಚಿವರನ್ನು ಸದನಕ್ಕೆ ಪರಿಚಯಿಸುತ್ತೇನೆ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು. ಮುಖ್ಯಮಂತ್ರಿಯವರ ಸಹಮತದ ಬಳಿಕ ಹಂಗಾಮಿ ಸಭಾಧ್ಯಕ್ಷ ಟಿ.ಬಿ. ಜಯಚಂದ್ರ ಅವರು ಸಂತಾಪ ಸೂಚನಾ ನಿರ್ಣಯವನ್ನು ಕೈಗೆತ್ತಿಕೊಂಡರು. ಹೀಗಾಗಿ ನೂತನ ಸಚಿವರ ಪರಿಚಯವನ್ನು ಮುಂದೂಡಲಾಯಿತು.

# ವಿಧಾನಸಭಾಧ್ಯಕ್ಷ, ಮೇಲ್ಮನೆ ಸಭಾಪತಿ ಸ್ಥಾನಕ್ಕೆ ಇಂದು ಚುನಾವಣೆ

**ಕಾಂಗ್ರೆಸ್‌ನಿಂದ ಸ್ಪೀಕರ್ ಸ್ಥಾನಕ್ಕೆ ಜಿ.ಎಸ್.ಪಾಟೀಲ್, ಸಭಾಪತಿ ಸ್ಥಾನಕ್ಕೆ ಸಲೀಂ ಅಹ್ಮದ್ ನಾಮಪತ್ರ ಸಲ್ಲಿಕೆ**

**ಬೆಂಗಳೂರು, ಜು.13:** ರಾಜ್ಯ ವಿಧಾನಮಂಡಲದ ಎರಡು ಪ್ರಮುಖ ಸ್ಥಾನಗಳಾದ ವಿಧಾನಸಭೆ ಅಧ್ಯಕ್ಷ ಮತ್ತು ವಿಧಾನ ಪರಿಷತ್ ಸಭಾಪತಿ ಸ್ಥಾನಗಳಿಗೆ ಶುಕ್ರವಾರ ಚುನಾವಣೆ ನಡೆಯಲಿದ್ದು, ಆಡಳಿತಾರೂಢ ಕಾಂಗ್ರೆಸ್ ಅಭ್ಯರ್ಥಿಗಳನ್ನು ಅಖಾಡಕ್ಕಿಳಿಸಿದೆ.

ಸಭಾಧ್ಯಕ್ಷರ ಸ್ಥಾನಕ್ಕೆ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಜಿ.ಎಸ್.ಪಾಟೀಲ್ ಅವರು, ವಿಧಾನಸಭೆಯ ಕಾರ್ಯದರ್ಶಿ ಎಂ.ಕೆ.ವಿಶಾಲಾಕ್ಷಿ ಅವರಿಗೆ ಗುರುವಾರ ನಾಮಪತ್ರ ಸಲ್ಲಿಸಿದರು.

ಸಭಾಪತಿ ಸ್ಥಾನಕ್ಕೆ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ, ಸಲೀಂ ಅಹ್ಮದ್ ಅವರು ವಿಧಾನ ಪರಿಷತ್ ಕಾರ್ಯದರ್ಶಿ ಜ್ಯೋತಿ ಅವರಿಗೆ ಉಮೇದುವಾರಿಕೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಉಪ ಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ಸೇರಿದಂತೆ ಇತರ ಸಚಿವರು, ಕಾಂಗ್ರೆಸ್ ಮುಖಂಡರು ಉಪಸ್ಥಿತರಿದ್ದರು.

ಎರಡೂ ಸದನಗಳಲ್ಲಿ ಕಾಂಗ್ರೆಸ್ ಪಕ್ಷವು ಸ್ಪಷ್ಟ ಬಹುಮತವನ್ನು ಹೊಂದಿದೆ. ಹೀಗಾಗಿ, ಈ ಸ್ಥಾನಗಳನ್ನು ಸುಲಭವಾಗಿ ವಶಪಡಿಸಿಕೊಳ್ಳುವ ವಿಶ್ವಾಸ ಕಾಂಗ್ರೆಸ್ ಪಕ್ಷಕ್ಕೆ ಇದೆ.



ಸಭಾಪತಿ ಸ್ಥಾನಕ್ಕೆ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಸಲೀಂ ಅಹ್ಮದ್ ಉಮೇದುವಾರಿಕೆ



ಸಭಾಧ್ಯಕ್ಷರ ಸ್ಥಾನಕ್ಕೆ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಜಿ.ಎಸ್.ಪಾಟೀಲ್ ಉಮೇದುವಾರಿಕೆ

ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು, ಈ ಚುನಾವಣೆಗಾಗಿ ಅಧಿಕೃತ ಅಧಿಸೂಚನೆ ಹೊರಡಿಸಿದ್ದಾರೆ. ಪ್ರತಿಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್ , ಈ ಸ್ಥಾನಗಳಿಗೆ ತಮ್ಮ ಅಭ್ಯರ್ಥಿಗಳನ್ನು ಕಣಕ್ಕಿಳಿಸುವುದು ಅನುಮಾನವಾಗಿದೆ. ಒಂದು ವೇಳೆ ಪ್ರತಿಪಕ್ಷಗಳು ಅಭ್ಯರ್ಥಿಗಳನ್ನು ಸ್ಪರ್ಧೆಗೆ ಇಳಿಸದಿದ್ದರೆ, ಆಡಳಿತಪಕ್ಷದ ನಾಯಕರು ಅವಿರೋಧವಾಗಿ ಆಯ್ಕೆಯಾಗಲಿದ್ದಾರೆ. ಒಂದು ವೇಳೆ ಸ್ಪರ್ಧೆ ಏರ್ಪಟ್ಟರೆ ಮಾತ್ರ ನಾಳೆ ಮತದಾನ ಪ್ರಕ್ರಿಯೆ ನಡೆಯಲಿದೆ.

**ಸ್ಪೀಕರ್, ಸಭಾಪತಿ ಸ್ಥಾನಕ್ಕೆ ಅವಿರೋಧ ಆಯ್ಕೆ: ಇಂದು ಸದನದಲ್ಲಿ ಘೋಷಣೆ**

**ವಿಧಾನ ಸಭಾಧ್ಯಕ್ಷ ಮತ್ತು ವಿಧಾನ ಪರಿಷತ್ ಸಭಾಪತಿ ಸ್ಥಾನಗಳಿಗೆ ಪ್ರತಿಪಕ್ಷಗಳಿಂದ ಯಾವುದೇ ನಾಮಪತ್ರ ಸಲ್ಲಿಕೆಯಾಗದ ಕಾರಣ ಸಭಾಧ್ಯಕ್ಷರಾಗಿ ಜಿ.ಎಸ್. ಪಾಟೀಲ್, ಸಭಾಪತಿಯಾಗಿ ಸಲೀಂ ಅಹ್ಮದ್ ಅವಿರೋಧ ಆಯ್ಕೆ ಬಹುತೇಕ ಖಚಿತವಾಗಿದೆ. ಈ ಬಗ್ಗೆ ಶುಕ್ರವಾರ ಸದನದಲ್ಲಿ ಘೋಷಣೆಯಾಗುವ ಸಾಧ್ಯತೆ ಇದೆ.**

# ಮೇಲ್ಮನೆ ಸಭಾನಾಯಕರಾಗಿ ಸಚಿವ ಯತೀಂದ್ರ ಸಿದ್ದರಾಮಯ್ಯ ಕಾರ್ಯಾರಂಭ



**ಬೆಂಗಳೂರು, ಆ.13:** ವಿಧಾನ ಪರಿಷತ್‌ನ ಸಭಾ ನಾಯಕರಾಗಿ ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಗುರುವಾರ ಕಾರ್ಯಾರಂಭ ಮಾಡಿದರು. ವಿಧಾನಪರಿಷತ್ ಕಲಾಪ ಪ್ರಾರಂಭವಾಗುತ್ತಿದ್ದಂತೆ ಹಂಗಾಮಿ ಸಭಾಪತಿ ಪುಟ್ಟಣ್ಣ ಅವರು ಡಾ. ಯತೀಂದ್ರ ಸಿದ್ದರಾಮಯ್ಯ ಅವರನ್ನು ಸಭಾನಾಯಕರನ್ನಾಗಿ ನೇಮಕ ಮಾಡಲಾಗಿದೆ ಎಂದು ಪ್ರಕಟಿಸಿದರು.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೂಚನೆಯಂತೆ ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಅವರನ್ನು ವಿಧಾನಪರಿಷತ್ ಸಭಾನಾಯಕರಾಗಿ ನಾಮನಿರ್ದೇಶನ ಮಾಡಲಾಗಿದೆ ಎಂದು ಪ್ರಕಟಿಸುತ್ತಿದ್ದಂತೆ ಸದನದ ಎಲ್ಲಾ ಸದಸ್ಯರು ಮೇಜು ಕುಟ್ಟಿ ಸ್ವಾಗತಿಸಿದರು. ಕೆಳಮನೆಯಲ್ಲಿ ಡಿ.ಕೆ. ಶಿವಕುಮಾರ್ ಸಭಾ ನಾಯಕರು, ಮೇಲ್ಮನೆಯಲ್ಲಿ ಈ ಜವಾಬ್ದಾರಿಯನ್ನು ಡಾ. ಯತೀಂದ್ರ ನಿರ್ವಹಿಸಲಿದ್ದಾರೆ.

# ಬಂದ್ ವಾಪಸ್ ಪಡೆದ ಸಂಘಟನೆಗೆ ಸಿಎಂ ಕೃತಜ್ಞತೆ

**ಬೆಂಗಳೂರು, ಆ.13:** ರಾಜ್ಯದ ಹಿತಕ್ಕಾಗಿ ಬಂದ್ ವಾಪಸ್ ಪಡೆದಿರುವ ಎಲ್ಲಾ ಸಂಘಟನೆಗಳಿಗೆ ಧನ್ಯವಾದಗಳು" ಎಂದು ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ತಿಳಿಸಿದರು. ಸುದ್ದಿಗಾರರ ಜೊತೆ ಮಾತನಾಡಿದ ಅವರು, ಸಂಘಟನೆಗಳು ಕರೆ ನೀಡಿದ್ದ ಬಂದ್ ಹಿಂಪಡೆದ ಬಗ್ಗೆ ಕೇಳಿದಾಗ, "ಎಲ್ಲಾ ಕನ್ನಡಪರ ಸಂಘಟನೆಗಳ ಮುಖಂಡರು ನನ್ನನ್ನು ಭೇಟಿಮಾಡಿ ಬಂದ್ ಹಿಂಪಡೆದ ಬಗ್ಗೆ ಮಾಹಿತಿ ನೀಡಿದರು. ರಾಜ್ಯದ ಜನರ ಹಿತ ಹಾಗೂ ರೈತರ ಕಲ್ಯಾಣಕ್ಕೆ ಸಂಬಂಧಿಸಿದಂತೆ ಅವರು ಕೆಲವು ಬೇಡಿಕೆ ಇಟ್ಟಿದ್ದಾರೆ. ಅವರ ಬೇಡಿಕೆಗಳನ್ನು ಪರಿಶೀಲನೆ ಮಾಡುವೆ. ಅವರ ಸಹಕಾರಕ್ಕೆ ಕೃತಜ್ಞತೆ" ಎಂದು ತಿಳಿಸಿದರು.

# ಸಿದ್ಧಾರ್ಥ ವಿಹಾರ ಟ್ರಸ್ಟ್ ಭೂಹಗರಣ: ಪ್ರಿಯಾಂಕ್ ಖರ್ಗೆ ರಾಜೀನಾಮೆಗೆ ರವಿಕುಮಾರ್ ಆಗ್ರಹ



**ಬೆಂಗಳೂರು, ಆ.13:** ಸಿದ್ಧಾರ್ಥ ವಿಹಾರ ಟ್ರಸ್ಟ್‌ಗೆ ಮಂಜೂರಾದ ಜಮೀನು ಹಗರಣದ ಬಗ್ಗೆ ತನಿಖೆಗೆ ಜನಪ್ರತಿನಿಧಿಗಳ ನ್ಯಾಯಾಲಯ ಆದೇಶ ನೀಡಿರುವ ಹಿನ್ನೆಲೆಯಲ್ಲಿ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ವಿಧಾನಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ಆಗ್ರಹಿಸಿದ್ದಾರೆ.

ಜನಪ್ರತಿನಿಧಿಗಳ ನ್ಯಾಯಾಲಯದ ಆದೇಶ ಕಾಂಗ್ರೆಸ್ ಸರ್ಕಾರಕ್ಕೆ ಕಪಾಳಮೋಕ್ಷದಂತಿದ್ದು, ಖರ್ಗೆ ಕುಟುಂಬದ ಭೂದಾಹ ಜಗಜ್ಜಾಹೀರಾಗಿದ್ದಾರೆ ಎಂದಿದ್ದಾರೆ.

ಇದು ಸತ್ಯಕ್ಕೆ ಸಿಕ್ಕ ಜಯವಾಗಿದ್ದು, ಕಾಂಗ್ರೆಸ್ ನಾಯಕರ ಕೌಟುಂಬಿಕ ಲೂಟಿಗೆ ಬಲವಾದ ಪೆಟ್ಟು ಬಿದ್ದಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಿಯಾಂಕ್ ಖರ್ಗೆ, ಸಂಸದ ರಾಧಾಕೃಷ್ಣ ಸೇರಿದಂತೆ ಕೇವಲ ಅವರದ್ದೇ ಕುಟುಂಬಸ್ಥರೇ ತುಂಬಿರುವ "ಸಿದ್ಧಾರ್ಥ ವಿಹಾರ ಟ್ರಸ್ಟ್" ಹಗರಣಕ್ಕೆ ಸಂಬಂಧಿಸಿದಂತೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಸಮಗ್ರ ತನಿಖೆಗೆ ಆದೇಶಿಸಿರುವುದು ರಾಜ್ಯ ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರದ ಮುಖವಾಡವನ್ನು ಕಳಚಿಹಾಕಿದೆ. ಅಧಿಕಾರದ ದರ್ಪದಲ್ಲಿ ಸರ್ಕಾರಿ ಆಸ್ತಿಯನ್ನು ತಮ್ಮ ಅಪ್ಪನ ಮನೆ ಆಸ್ತಿಯಂತೆ ಕಬಳಿಸಲು ಹೊರಟಿದ್ದ ಖರ್ಗೆ ಕುಟುಂಬಕ್ಕೆ ನ್ಯಾಯಾಲಯ ತಕ್ಕ ಶಾಸ್ತಿ ಮಾಡಿದೆ. ಇದು ಭ್ರಷ್ಟ ಕಾಂಗ್ರೆಸ್ ಆಡಳಿತದ ವಿರುದ್ಧ ಬಿಜೆಪಿ ನಡೆಸುತ್ತಿರುವ ನಿರಂತರ ಹೋರಾಟಕ್ಕೆ ಸಂದ ನೈತಿಕ ಜಯವಾಗಿದೆ ಎಂದು ಹೇಳಿದ್ದಾರೆ.

ಹಗರಣದ ಕರಾಳ ಮುಖ ಮತ್ತು ಕಾಂಗ್ರೆಸ್ಸಿನ ಬೂಟಾಟಿಕೆ ಅಧಿಕಾರದ ದುರ್ಬಳಕೆ ಮತ್ತು ಸ್ವಜನಪಕ್ಷಪಾತ ದಲಿತರು, ಬಡವರು ಮತ್ತು ಅರ್ಹ ನೈಜ ಉದ್ಯಮಿಗಳಿಗೆ ಮೀಸಲಿದ್ದ ಕೆಐಎಡಿಬಿಯ ಕೋಟ್ಯಂತರ ರೂಪಾಯಿ ಬೆಲೆಬಾಳುವ ಜಾಗ ಹಾಗೂ ಸರ್ಕಾರಿ ನಿವೇಶನಗಳನ್ನು, ತಮ್ಮದೇ ಖಾಸಗಿ ಟ್ರಸ್ಟ್‌ನ ಹೆಸರಿನಲ್ಲಿ ಲಪಟಾಯಿಸಲು ಖರ್ಗೆ ಕುಟುಂಬ ನಡೆಸಿದ ಷಡ್ಯಂತ್ರ ಅಕ್ಷಮ್ಯ ಇದಾಗಿದೆ. ರಾಜಕೀಯ ಪ್ರಭಾವವನ್ನು ಬಳಸಿ ನಿಯಮಗಳನ್ನು ಗಾಳಿಗೆ ತೂರಿ ನಡೆಸಿದ ಈ "ಭೂ–ಲೂಟಿ" ಕಾಂಗ್ರೆಸ್ಸಿಗರ ಅಧಿಕಾರದ ದಾಹವನ್ನು ತೋರಿಸುತ್ತದೆ.

ಈ ಹಗರಣದ ವಾಸನೆ ಹೊರಬರುತ್ತಿದ್ದಂತೆ ಮತ್ತು ಬಿಜೆಪಿ ಇದರ ವಿರುದ್ಧ ಪ್ರಬಲ ಧ್ವನಿ ಎತ್ತುತ್ತಿದ್ದಂತೆ, ಬೆದರಿದ ಖರ್ಗೆ ಕುಟುಂಬ ನಿವೇಶನವನ್ನು ಹಿಂದಿರುಗಿಸುವ ನಾಟಕವಾಡಿತು. "ಕಳ್ಳತನ ಮಾಡಿ ಸಿಕ್ಕಿಬಿದ್ದ ಮೇಲೆ, ಕದ್ದ ಮಾಲನ್ನು ವಾಪಸ್ ಕೊಟ್ಟರೆ ಆತ ನಿರಪರಾಧಿಯಾಗುವುದಿಲ್ಲ" ಎಂಬುದನ್ನು ಬಿಜೆಪಿ ಮೊದಲಿನಿಂದಲೂ ಸಾರಿ ಹೇಳುತ್ತಿತ್ತು. ನ್ಯಾಯಾಲಯ ಈಗ ತನಿಖೆಗೆ ಆದೇಶಿಸುವ ಮೂಲಕ ನಮ್ಮ ವಾದವನ್ನು ಎತ್ತಿಹಿಡಿದಿದೆ.

ಸದಾ ಪಾರದರ್ಶಕತೆ ಮತ್ತು ಭ್ರಷ್ಟಾಚಾರದ ಬಗ್ಗೆ ಉದ್ದುದ್ದ ಭಾಷಣ ಬಿಗಿಯುವ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಮ್ಮ ಹೈಕಮಾಂಡ್ ನಾಯಕರ ಕುಟುಂಬದವರ ಭೂಗಳ್ಳತನವನ್ನು ರಕ್ಷಿಸಲು ಸರ್ಕಾರಿ ಯಂತ್ರವನ್ನೇ ಗುರಾಣಿಯಾಗಿ ಬಳಸಿಕೊಂಡಿದ್ದಾರೆ. ಇದು ಇಡೀ ಸಚಿವ ಸಂಪುಟವೇ ಶಾಮೀಲಾಗಿರುವ ವ್ಯವಸ್ಥಿತ ಹಗರಣ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ನ್ಯಾಯಾಲಯ ತನಿಖೆಗೆ ಆದೇಶಿಸಿರುವಾಗ, ಪ್ರಿಯಾಂಕ್ ಖರ್ಗೆ ಸಂಪುಟದಲ್ಲಿ ಸಚಿವರಾಗಿ ಮುಂದುವರಿಯುವ ಯಾವುದೇ ನೈತಿಕ ಹಕ್ಕು ಹೊಂದಿಲ್ಲ. ಅವರು ಅಧಿಕಾರದಲ್ಲಿದ್ದರೆ ಸಾಕ್ಷ್ಯನಾಶ ಮಾಡುವ ಮತ್ತು ತನಿಖಾಧಿಕಾರಿಗಳ ಮೇಲೆ ಒತ್ತಡ ಹೇರುವ ಸ್ಪಷ್ಟ ಅಪಾಯವಿದೆ. ಹೀಗಾಗಿ ಅವರು ತಕ್ಷಣ ರಾಜೀನಾಮೆ ನೀಡಬೇಕು, ಇಲ್ಲವೇ ಮುಖ್ಯಮಂತ್ರಿಗಳು ಅವರನ್ನು ಸಚಿವ ಸಂಪುಟದಿಂದ ಕಿತ್ತುಹಾಕಬೇಕು

# ಸಂಕಷ್ಟದಲ್ಲಿರುವ ಮಾಜಿ ಶಾಸಕರ ಕುಟುಂಬ ಪರಿಸ್ಥಿತಿ ಕುರಿತು ಸಮೀಕ್ಷೆಯಾಗಲಿ

**ಮುಖ್ಯಮಂತ್ರಿಗೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸಿ.ಬಿ. ಸುರೇಶ್‌ಬಾಬು ಒತ್ತಾಯ**



ಬೆಂಗಳೂರು, ಆ.13: ಹಿರಿಯ ಮಾಜಿ ಶಾಸಕರ ಕುಟುಂಬಗಳು ಯಾವ ರೀತಿ ಜೀವನ ಸಾಗಿಸುತ್ತಿವೆ ಎಂಬ ಬಗ್ಗೆ ಸರ್ವೇ ಮಾಡಿಸಬೇಕು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸಿ.ಬಿ.ಸುರೇಶ್‌ಬಾಬು ಅವರು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಆಗ್ರಹಿಸಿದರು. ವಿಧಾನಸಭೆಯಲ್ಲಿ ಇತ್ತೀಚೆಗೆ ಅಗಲಿದ ಗಣ್ಯರಿಗೆ ಸಂತಾಪ ಸೂಚನಾ ನಿರ್ಣಯ ವನ್ನು ಬೆಂಬಲಿಸಿ ಮಾತನಾಡಿದ ಅವರು, ಇತ್ತೀಚಿನ ರಾಜಕಾರಣಿಗಳಿಗೆ ಕಷ್ಟದ ಪರಿಸ್ಥಿತಿ ಇಲ್ಲದಿರಬಹುದು. ಹಿಂದಿನ ರಾಜಕಾರಣಿಗಳು ಬಸ್ಸಿನಲ್ಲೇ ಪ್ರಯಾಣಿಸುತ್ತಿದ್ದರು. ಹೀಗಾಗಿ ಹಿರಿಯ ಶಾಸಕರ ಕುಟುಂಬಗಳ ಸರ್ವೇ ಮಾಡಿಸಿ ಅವರ ಜೀವನ ಹೇಗೆ ಸಾಗುತ್ತಿದೆ ಎಂಬುದನ್ನು ತಿಳಿಯುವುದು ಸೂಕ್ತ. ಬಹಳಷ್ಟು ಮಾಜಿ ಶಾಸಕರ ಕುಟುಂಬಗಳು ಕಷ್ಟದಲ್ಲಿ ಇದೆ ಎಂದು ಹೇಳಿದರು.

# ಹಲ್ದ್ವಾನಿಯ 'ಶುದ್ಧೀಕರಣ' ಘಟನೆ: ಇದು ಒಬ್ಬ ನಾಯಕನ ಅವಮಾನವಲ್ಲ, ಸಂವಿಧಾನದ ಆತ್ಮಕ್ಕೆ ಮಾಡಿದ ಸವಾಲು: ಡಾ. ಆನಂದ ಕುಮಾರ್

**ಜಾತಿಯ ಹೆಸರಿನಲ್ಲಿ ಮನುಷ್ಯನನ್ನು ಅಪವಿತ್ರನೆಂದು ನೋಡುವ ಮನೋಭಾವಕ್ಕೆ ಸಂವಿಧಾನಾತ್ಮಕ ಭಾರತದಲ್ಲಿ ಸ್ಥಾನವಿಲ್ಲ**

**ನವದೆಹಲಿ, 13 ಆ:** ಹಲ್ದ್ವಾನಿಯಲ್ಲಿ ಕಾಂಗ್ರೆಸ್ ಅಧ್ಯಕ್ಷರು ಹಾಗೂ ಲೋಕಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಜಿ ಅವರು ಭಾಗವಹಿಸಿದ್ದ ಕಾರ್ಯಕ್ರಮದ ನಂತರ ಅದೇ ಸ್ಥಳದಲ್ಲಿ ನಡೆದಿರುವುದಾಗಿ ವರದಿಯಾಗಿರುವ ಶುದ್ಧೀಕರಣ ಕಾರ್ಯಕ್ರಮವು ಅತ್ಯಂತ ಗಂಭೀರ, ಅವಮಾನಕಾರಿ ಮತ್ತು ಆತಂಕಕಾರಿ ಬೆಳವಣಿಗೆಯಾಗಿದೆ ಎಂದು AICC SC Departmentನ ರಾಷ್ಟ್ರೀಯ ಸಂಯೋಜಕರು ಹಾಗೂ ಮಹಾರಾಷ್ಟ್ರದ ಉಸ್ತುವಾರಿ ಡಾ. ಆನಂದ ಕುಮಾರ್ ಅವರು ತೀವ್ರವಾಗಿ ಖಂಡಿಸಿದ್ದಾರೆ.

ಒಬ್ಬ ವ್ಯಕ್ತಿ ಯಾವ ಜಾತಿಯಲ್ಲಿ ಹುಟ್ಟಿದ್ದಾನೆ ಎಂಬ ಕಾರಣಕ್ಕೆ, ಅವರು ಕಾಲಿಟ್ಟ ಸ್ಥಳವನ್ನು ಶುದ್ಧೀಕರಿಸಬೇಕೆಂಬ ಮನೋಭಾವ ಕೇವಲ ಹಳೆಯ ಅಸ್ಪೃಶ್ಯತೆಯ ನೆರಳಲ್ಲ; ಅದು ಮನುಷ್ಯನ ಘನತೆಯನ್ನೇ ನಿರಾಕರಿಸುವ ಮನೋಭಾವವಾಗಿದೆ. ಇಂತಹ ಮನೋಭಾವಕ್ಕೆ ಆಧುನಿಕ, ಪ್ರಜಾಸತ್ತಾತ್ಮಕ ಮತ್ತು ಸಂವಿಧಾನಾತ್ಮಕ ಭಾರತದಲ್ಲಿ ಯಾವುದೇ ಸ್ಥಾನವಿಲ್ಲ ಎಂದು ಡಾ. ಆನಂದ ಕುಮಾರ್ ಹೇಳಿದ್ದಾರೆ.

**ಇದು ಖರ್ಗೆ ಅವರ ವೈಯಕ್ತಿಕ ಅವಮಾನ ಮಾತ್ರವಲ್ಲ**

ಮಲ್ಲಿಕಾರ್ಜುನ ಖರ್ಗೆ ಅವರು ಭಾರತದ ಹಿರಿಯ ದಲಿತ ನಾಯಕರು ಮಾತ್ರವಲ್ಲ; ಅವರು ದೇಶದ ಪ್ರಮುಖ ಸಾಂವಿಧಾನಿಕ ವ್ಯವಸ್ಥೆಯ ಭಾಗವಾಗಿ ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಖರ್ಗೆ ಅವರನ್ನು ಅವಮಾನಿಸುವುದು ಎಂದರೆ ಅವರ ವೈಯಕ್ತಿಕ ಘನತೆಯನ್ನು ಮಾತ್ರ ಅವಮಾನಿಸುವುದಲ್ಲ. ಶತಮಾನಗಳ ಕಾಲ ಜಾತಿ ಆಧಾರಿತ ತಾರತಮ್ಯವನ್ನು ಎದುರಿಸಿ, ಶಿಕ್ಷಣ, ಸ್ವಾಭಿಮಾನ, ಸಮಾನತೆ ಮತ್ತು ಸಂವಿಧಾನಾತ್ಮಕ ಹಕ್ಕುಗಳಿಗಾಗಿ ಹೋರಾಡಿದ ಕೋಟ್ಯಂತರ ದಲಿತರು ಮತ್ತು ಹಿಂದುಳಿದ ವರ್ಗಗಳ ಆತ್ಮಗೌರವಕ್ಕೆ ಧಕ್ಕೆ ತರುವ



ಪ್ರಯತ್ನವಾಗಿದೆ ಎಂದು ಅವರು ಹೇಳಿದರು.

ಶುದ್ಧೀಕರಣ ಎಂಬ ಪದವೇ ಒಂದು ಗಂಭೀರ ಪ್ರಶ್ನೆಯನ್ನು ಎತ್ತುತ್ತದೆ ಡಾ. ಆನಂದ ಕುಮಾರ್ ಅವರು ಪ್ರಶ್ನಿಸಿದ್ದಾರೆ:

ಯಾವ ಮನುಷ್ಯನ ಸ್ಪರ್ಶದಿಂದ ಒಂದು ಸ್ಥಳ ಅಶುದ್ಧವಾಗುತ್ತದೆ ಮತ್ತು ಯಾವ ಮನುಷ್ಯನ ಸ್ಪರ್ಶದಿಂದ ಅದು ಶುದ್ಧವಾಗುತ್ತದೆ ಈ ಪ್ರಶ್ನೆಯ ಉತ್ತರದಲ್ಲಿಯೇ ಜಾತಿ ವ್ಯವಸ್ಥೆಯ ಅಮಾನವೀಯತೆಯ ಮುಖ ಅಡಗಿದೆ.

ಭಾರತದ ಸಂವಿಧಾನವು ಪ್ರತಿಯೊಬ್ಬ ನಾಗರಿಕನಿಗೂ ಸಮಾನತೆ ಮತ್ತು ಘನತೆಯ ಹಕ್ಕನ್ನು ನೀಡಿದೆ. ಅಸ್ಪೃಶ್ಯತೆಯನ್ನು ಸಂವಿಧಾನವೇ ಸಂಪೂರ್ಣವಾಗಿ ನಿಷೇಧಿಸಿದೆ.

ಬಾಬಾಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅವರು ಹೋರಾಡಿದ್ದು ಕೇವಲ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಅಲ್ಲ; ಮನುಷ್ಯನನ್ನು ಮನುಷ್ಯನಾಗಿ ಗೌರವಿಸುವ ಸಮಾಜಕ್ಕಾಗಿ. ಆದ್ದರಿಂದ ಇಂತಹ ಘಟನೆಗಳು ಅಂಬೇಡ್ಕರ್ ಅವರ ಸಾಮಾಜಿಕ ನ್ಯಾಯದ ಕನಸಿಗೆ ನೇರ ಸವಾಲಾಗಿವೆ ಎಂದು ಡಾ. ಆನಂದ ಕುಮಾರ್ ತಿಳಿಸಿದ್ದಾರೆ.

ಕಾಂಗ್ರೆಸ್‌ನ ಹೋರಾಟ ಯಾರ ವಿರುದ್ಧವೂ ಅಲ್ಲ; ಅನ್ಯಾಯದ ವಿರುದ್ಧ

೦ಚಿಅಅ ಖಅ ಆಜಡಿಚಿಡಿಣಟಜಟಣ ಮತ್ತು ಔಃಅ ಆಜಡಿಚಿಡಿಣಟಜಟಣ ವತಿಯಿಂದ 13ರಿಂದ 15 ಆಗಸ್ಟ್ 2026ರವರೆಗೆ ದೇಶದಾದ್ಯಂತ ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಶಾಂತಿಯುತ ಪ್ರತಿಭಟನೆಗಳನ್ನು ನಡೆಸುವ ನಿರ್ಧಾರವನ್ನು ಡಾ. ಆನಂದ ಕುಮಾರ್ ಸ್ವಾಗತಿಸಿದ್ದಾರೆ.

ಈ ಹೋರಾಟ ಯಾವುದೇ ವ್ಯಕ್ತಿ, ಜಾತಿ ಅಥವಾ ಸಮುದಾಯದ ವಿರುದ್ಧವಲ್ಲ. ಇದು ಅಸ್ಪೃಶ್ಯತೆ, ಜಾತಿ ತಾರತಮ್ಯ, ಸಾಮಾಜಿಕ ಅವಮಾನ ಮತ್ತು ಮಾನವ ಘನತೆಯ ನಿರಾಕರಣೆಯ ವಿರುದ್ಧದ ಹೋರಾಟ. ಇದು ಸಂವಿಧಾನದ ಮೌಲ್ಯಗಳನ್ನು ರಕ್ಷಿಸುವ ಪ್ರಜಾಸತ್ತಾತ್ಮಕ ಹೋರಾಟ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ದಲಿತರಿಗೆ ಗೌರವ ಎಂದರೆ ಸಂವಿಧಾನಕ್ಕೆ ಗೌರವ

ಡಾ. ಆನಂದ ಕುಮಾರ್ ಅವರು ಹೇಳಿದರು:

ದಲಿತರು ಮತ್ತು ಹಿಂದುಳಿದ ವರ್ಗಗಳಿಗೆ ಗೌರವ ನೀಡುವುದು ಯಾರ ಮೇಲೂ ಉಪಕಾರ ಮಾಡುವುದಲ್ಲ. ಅದು ಸಂವಿಧಾನ ನೀಡಿರುವ ಸಮಾನ ಹಕ್ಕನ್ನು ಗೌರವಿಸುವುದು. ದಲಿತನೊಬ್ಬನ ಸ್ಪರ್ಶದಿಂದ ಸ್ಥಳ ಅಪವಿತ್ರವಾಗುತ್ತದೆ ಎಂದು ಭಾವಿಸುವ ಸಮಾಜದ ಮನಸ್ಥಿತಿಯನ್ನು ಬದಲಾಯಿಸದೆ, ನಾವು ನಿಜವಾದ ಸಾಮಾಜಿಕ ಸ್ವಾತಂತ್ರ್ಯವನ್ನು ಸಾಧಿಸಿದ್ದೇವೆ ಎಂದು ಹೇಳಲು ಸಾಧ್ಯವಿಲ್ಲ.

ಮಾಧ್ಯಮದ ಪ್ರಶ್ನೆಗಳಿಗೆ ಡಾ. ಆನಂದ ಕುಮಾರ್ ಅವರ ಉತ್ತರ

ಪ್ರಶ್ನೆ: ಕಾಂಗ್ರೆಸ್ ಈ ಘಟನೆಯನ್ನು ಏಕೆ ಇಷ್ಟು ಗಂಭೀರವಾಗಿ ತೆಗೆದುಕೊಂಡಿದೆ

ಉತ್ತರ: ಇದು ಕೇವಲ ಒಂದು ಕಾರ್ಯಕ್ರಮದ ನಂತರ ನಡೆದ ಒಂದು ಘಟನೆ ಎಂದು ನೋಡಬಾರದು. ಇದರ ಹಿಂದೆ ಇರುವ ಮನೋಭಾವವನ್ನು ನೋಡಬೇಕು. ಜಾತಿಯ ಆಧಾರದ ಮೇಲೆ ಒಬ್ಬ ವ್ಯಕ್ತಿಯ ಉಪಸ್ಥಿತಿಯನ್ನೇ ಅಶುದ್ಧ ಎಂದು ಪರಿಗಣಿಸುವ ಮನೋಭಾವವೇ ನಮ್ಮ ಆತಂಕಕ್ಕೆ ಕಾರಣ. ಇದು ಸಾಮಾಜಿಕ ನ್ಯಾಯದ ಮೂಲಭೂತ ಪ್ರಶ್ನೆ.

ಪ್ರಶ್ನೆ: ಇದು ಮಲ್ಲಿಕಾರ್ಜುನ ಖರ್ಗೆ ಅವರಿಗೆ ಮಾಡಿದ ಅವಮಾನವೇ

ಉತ್ತರ: ಹೌದು, ವೈಯಕ್ತಿಕವಾಗಿ ಅವರ ಘನತೆಗೆ ಧಕ್ಕೆ ತರುವ ಕೃತ್ಯ ಎಂದು ನಾವು ಖಂಡಿಸುತ್ತೇವೆ. ಆದರೆ ಇದರ ವ್ಯಾಪ್ತಿ ಅದಕ್ಕಿಂತ ಬಹಳ ದೊಡ್ಡದು. ಇದು ದಲಿತ ಸಮುದಾಯದ ಆತ್ಮಗೌರವ, ಸಾಮಾಜಿಕ ಸಮಾನತೆ ಮತ್ತು ಸಂವಿಧಾನದ ಆಶಯಗಳ ಮೇಲಿನ ಪ್ರಶ್ನೆಯಾಗಿದೆ.

ಪ್ರಶ್ನೆ: ಕಾಂಗ್ರೆಸ್‌ನ ಪ್ರತಿಭಟನೆಯ ಉದ್ದೇಶವೇನು

ಉತ್ತರ: ನಾವು ಯಾರ ವಿರುದ್ಧವೂ ದ್ವೇಷ ಹುಟ್ಟಿಸಲು ಬಯಸುವುದಿಲ್ಲ. ನಮ್ಮ ಉದ್ದೇಶ ದೇಶಕ್ಕೆ ಒಂದು ಸ್ಪಷ್ಟ ಸಂದೇಶ ನೀಡುವುದು ಜಾತಿಯ ಆಧಾರದ ಮೇಲೆ ಯಾರನ್ನೂ ಅವಮಾನಿಸಬಾರದು; ಅಸ್ಪೃಶ್ಯತೆಗೆ ಯಾವುದೇ ರೂಪದಲ್ಲೂ ಅವಕಾಶ ನೀಡಬಾರದು.

ಪ್ರಶ್ನೆ: ಈ ಸಂದರ್ಭದಲ್ಲಿ ಡಾ. ಅಂಬೇಡ್ಕರ್ ಅವರನ್ನು ಏಕೆ ನೆನಪಿಸಿಕೊಳ್ಳಬೇಕು

ಉತ್ತರ: ಏಕೆಂದರೆ ಅಂಬೇಡ್ಕರ್ ಅವರ ಸಂಪೂರ್ಣ ಹೋರಾಟದ ಕೇಂದ್ರಬಿಂದು ಮಾನವ ಘನತೆ ಮತ್ತು ಸಮಾನತೆ. ಅವರು ನಮಗೆ ಸಂವಿಧಾನ ನೀಡಿದರು. ಇಂದು ಆ ಸಂವಿಧಾನದ ಆತ್ಮವನ್ನು ರಕ್ಷಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ.

ಪ್ರಶ್ನೆ: ನಿಮ್ಮ ಸಂದೇಶ ಏನು

ಉತ್ತರ: ನನ್ನ ಸಂದೇಶ ಬಹಳ ಸರಳ ಮತ್ತು ಸ್ಪಷ್ಟ:

ಮನುಷ್ಯನನ್ನು ಜಾತಿಯಿಂದ ಅಳೆಯಬೇಡಿ; ಅವನ ಮಾನವೀಯತೆಯಿಂದ ಅಳೆಯಿರಿ, ಅಸ್ಪೃಶ್ಯತೆಗೆ ಸ್ಥಾನವಿಲ್ಲ, ಜಾತಿ ಅವಮಾನಕ್ಕೆ ಸ್ಥಾನವಿಲ್ಲ, ಮಾನವ ಘನತೆಯ ಮೇಲಿನ ದಾಳಿಗೆ ಸ್ಥಾನವಿಲ್ಲ. ಸಂವಿಧಾನಾತ್ಮಕ ಭಾರತದಲ್ಲಿ ಸಮಾನತೆ, ಸ್ವಾಭಿಮಾನ ಮತ್ತು ಸಾಮಾಜಿಕ ನ್ಯಾಯವೇ ನಮ್ಮ ದಾರಿ. ಇಂದು ನಾವು ಬಾಬಾಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆಗಳ ಮುಂದೆ ನಿಂತು ಪ್ರತಿಭಟನೆ ನಡೆಸುತ್ತಿರುವುದು ಕೇವಲ ಒಂದು ಘಟನೆಯನ್ನು ಖಂಡಿಸಲು ಅಲ್ಲ. ಭಾರತದ ಸಂವಿಧಾನವು ಪ್ರತಿಯೊಬ್ಬ ಭಾರತೀಯನಿಗೂ ನೀಡಿರುವ ಸಮಾನತೆ ಮತ್ತು ಘನತೆಯ ಭರವಸೆಯನ್ನು ಮತ್ತೊಮ್ಮೆ ಜನರ ಮುಂದೆ ಪ್ರತಿಜ್ಞೆಯಾಗಿ ಘೋಷಿಸಲು ಜಾತಿಯ ಗೋಡೆಗಳನ್ನು ಒಡೆಯೋಣ ಸಂವಿಧಾನದ ಮೌಲ್ಯಗಳನ್ನು ಬಲಪಡಿಸೋಣ.

Chief reporter : SANDEEP RENU ✆ 99728 72151 | Executive Editor : SHARAT JYOTSNA B.R ✆ 9886766483 ✉ vaarthe@gmail.com
Published from: K10,'A'/4, Khriki Extension, Malviya Nagar, New Delhi-110 017. Phone: 95-120-3917916-20
Printed at: Jyoti Printers, E-94, Sector 6, Noida, UP. Phone: 0120-4232687 Off : E-94,Sector 6, Noida,UP | RNI No. DELKAN/2003/10363

# ಸಚಿವ ಡಿ.ಸುಧಾಕರ್, ಎಸ್.ಜಾನಕಿ, ಆಶಾ ಬೋಸ್ಲೆ, ಚೆನ್ನಮ್ಮ ದೇವೇಗೌಡ ಸೇರಿ ಅಗಲಿದ ಗಣ್ಯರಿಗೆ ವಿಧಾನಮಂಡಲದ ಭಾವಪೂರ್ಣ ಶ್ರದ್ಧಾಂಜಲಿ

ಬೆಂಗಳೂರು, ಆ.13: ಇತ್ತೀಚೆಗೆ ನಿಧನರಾದ ರಾಜ್ಯದ ಹಾಲಿ ಸಚಿವರಾಗಿದ್ದ ಡಿ. ಸುಧಾಕರ್, ವಿಧಾನಸಭೆಯ ಮಾಜಿ ಉಪಾಧ್ಯಕ್ಷ ಸಿ. ವೀರಣ್ಣ, ಮಾಜಿ ಸಚಿವರಾದ ವೆಂಕಟರಮಣಪ್ಪ, ರಾಮಚಂದ್ರಗೌಡ ಸೇರಿ ಹಲವು ಮಾಜಿ ಶಾಸಕರು, ರಾಜ್ಯಸಭೆಯ ಮಾಜಿ ಸದಸ್ಯ ಎಚ್. ಹನುಮಂತಪ್ಪ, ಖ್ಯಾತ ಗಾಯಕಿಯರಾದ ಎಸ್. ಜಾನಕಿ, ಆಶಾ ಭೋಸ್ಲೆ ಹಾಗೂ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರ ಪತ್ನಿ ಚೆನ್ನಮ್ಮ ಸೇರಿದಂತೆ ಹಲವು ಗಣ್ಯರಿಗೆ ವಿಧಾನಮಂಡಲದಲ್ಲಿಂದು ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ವಿಧಾನಸಭೆಯ ಕಲಾಪ ಆರಂಭವಾಗುತ್ತಿದ್ದಂತೆ ಹಂಗಾಮಿ ಅಧ್ಯಕ್ಷ ಟಿ.ಬಿ. ಜಯಚಂದ್ರ ಅವರು ಸಂತಾಪ ಸೂಚನಾ ನಿರ್ಣಯ ಮಂಡಿಸಿದರು. ನಿಧನರಾದ ಗಣ್ಯರ ಸಾರ್ವಜನಿಕ ಸೇವೆ, ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಿಗೆ ನೀಡಿದ ಕೊಡುಗೆಗಳನ್ನು ಸದನದಲ್ಲಿ ಪ್ರಸ್ತಾಪಿಸಿದರು.

ಸಿದ್ದರಾಮಯ್ಯ ಸಂಪುಟದಲ್ಲಿ ಯೋಜನೆ ಮತ್ತು ಸಾಂಖ್ಯಿಕ ಹಾಗೂ ಇತರ ಪ್ರಮುಖ ಖಾತೆಗಳನ್ನು ನಿರ್ವಹಿಸಿದ್ದ ಸಚಿವ ಡಿ. ಸುಧಾಕರ್ ಅವರ ನಿಧನಕ್ಕೆ ಸದನ ತೀವ್ರ ಸಂತಾಪ ವ್ಯಕ್ತಪಡಿಸಿತು. ಮಾಜಿ ಉಪಸಭಾಧ್ಯಕ್ಷ, ಮಾಜಿ ಸಚಿವ ಸಿ.ವೀರಣ್ಣ ಸಲ್ಲಿಸಿದ ಅವರ ಸೇವೆಯನ್ನು ಕೂಡ ಸದನ ಸರಿಸಿತು.

ತುಮಕೂರು ಜಿಲ್ಲೆಯ ಪಾವಗಡ ತಾಲೂಕಿನ ಹನುಮಂತನಹಳ್ಳಿಯಲ್ಲಿ ಜನಿಸಿದ ವೆಂಕಟರಮಣಪ್ಪ ಅವರು 9ನೇ ವಿಧಾನಸಭೆಗೆ ಮೊದಲ ಬಾರಿಗೆ ಆಯ್ಕೆಯಾದ ವೆಂಕಟರಮಣಪ್ಪ ಅವರು ನಂತರ 11ನೇ, 13ನೇ ಹಾಗೂ 15ನೇ ವಿಧಾನಸಭೆಗೂ ಪುನರಾಯ್ಕೆಯಾಗಿದ್ದರು. ಸಣ್ಣ ಕೈಗಾರಿಕೆ ಸಚಿವರಾಗಿ ಸೇವೆ ಸಲ್ಲಿಸಿದ್ದ ಅವರು ಕ್ಷೇತ್ರದ ಅಭಿವೃದ್ಧಿಗೆ ಕೊಡುಗೆ ನೀಡಿದ್ದರು ಎಂದು ಸದನದಲ್ಲಿ ಸ್ಮರಿಸಲಾಯಿತು.

ಕುಣಿಗಲ್ ತಾಲೂಕಿನ ತಿಪೂರು ಗ್ರಾಮದಲ್ಲಿ ಜನಿಸಿದ ರಾಮಚಂದ್ರಗೌಡರು ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರಾಗಿ ಸೇವೆ ಸಲ್ಲಿಸಿದ್ದ ಅವರು ಪದವೀಧರ ಕ್ಷೇತ್ರದಿಂದ ವಿಧಾನ ಪರಿಷತ್ ಸದಸ್ಯರಾಗಿದ್ದರು. ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರಾಗಿ ಸೇವೆ ಸಲ್ಲಿಸಿದ್ದ ಅವರು ಚಲನಚಿತ್ರ ಕ್ಷೇತ್ರದಲ್ಲೂ ತೊಡಗಿಸಿಕೊಂಡಿದ್ದರು. ಅದೇರೀತಿ ಅಗಲಿದ ಗಣ್ಯರಾದ ಕೆ.ಆರ್. ಶ್ರೀನಿವಾಸಯ್ಯ, ಎಸ್.ಎಚ್. ಪುಟ್ಟರಂಗನಾಥ್, ಸೈಯದ್ ಯಾಸೀನ್, ವಿ.ಶ್ರೀನಿವಾಸನ್, ಎಚ್.ಎಂ.ಚಂದ್ರಶೇಖರಪ್ಪ, ಆರ್.ಜಿ. ವೆಂಕಟಾಚಲಯ್ಯ, ಎಸ್. ಕೃಷ್ಣಪ್ಪ, ರಾಜ್ಯಸಭೆಯ ಮಾಜಿ ಸದಸ್ಯ ಎಚ್. ಹನುಮಂತಪ್ಪ ಅವರ ಸಾರ್ವಜನಿಕ ಜೀವನವನ್ನೂ ಸದನದಲ್ಲಿ ಸ್ಮರಿಸಲಾಯಿತು.

**ಗಾನಕೋಗಿಲೆ ಎಸ್. ಜಾನಕಿಗೆ ಗೌರವ:**

ಇದೇ ವೇಳೆ ಖ್ಯಾತ ಭಾರತೀಯ ಚಿತ್ರರಂಗದ ಖ್ಯಾತ ಗಾಯಕಿ ಎಸ್. ಜಾನಕಿ ಆಶಾ ಭೋಸ್ಲೆ ಅವರ ಗುಣಗಾನ ಮಾಡಿ, ಶ್ರದ್ಧಾಂಜಲಿ ಸಲ್ಲಿಸಲಾಯಿತು.

**ಚೆನ್ನಮ್ಮ ಅವರ ಸೇವೆ ಸರಣೆ:**

ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರ ಧರ್ಮಪತ್ನಿ ಚೆನ್ನಮ್ಮ ಅವರ ನಿಧನಕ್ಕೂ ವಿಧಾನಸಭೆಯಲ್ಲಿ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.1937ರಲ್ಲಿ ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲೂಕಿನ ಮುತ್ತಿಗೆ ಹಿರೇಹಳ್ಳಿಯಲ್ಲಿ ಜನಿಸಿದ ಚೆನ್ನಮ್ಮ ಅವರು ತಮ್ಮ ಹುಟ್ಟೂರಿನಲ್ಲೇ ಪ್ರಾಥಮಿಕ ಶಿಕ್ಷಣ ಪಡೆದಿದ್ದರು. ಹೊಳೆನರಸೀಪುರದಲ್ಲಿ ಮಾಧ್ಯಮಿಕ ಶಿಕ್ಷಣ ಪಡೆದಿದ್ದರು. ದೇವೇಗೌಡರೊಂದಿಗೆ ವೈವಾಹಿಕ ಜೀವನಕ್ಕೆ ಕಾಲಿಟ್ಟ ಬಳಿಕ, ಅವರ ರಾಜಕೀಯ ಪಯಣದಲ್ಲಿ ಬೆನ್ನೆಲುಬಾಗಿ ನಿಂತಿದ್ದರು ಎಂದು ಸರಿಸಲಾಯಿತು.

ವಿಧಾನ ಪರಿಷತ್‌ನಲ್ಲೂ ಖ್ಯಾತ ಗಾಯಕಿಯರಾದ ಆಶಾ ಭೋಸ್ಲೆ, ಎಸ್.ಜಾನಕಿ, ಮಾಜಿ ಸಚಿವರಾದ ರಾಮಚಂದ್ರೇಗೌಡ, ವೆಂಕಟರಮಣಪ್ಪ, ಡಿ.ಸುಧಾಕರ್, ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಪತ್ನಿ ಚೆನ್ನಮ್ಮ ಸೇರಿದಂತೆ ಅನೇಕ ಗಣ್ಯರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು. ವಿಧಾನಪರಿಷತ್ ಕಲಾಪ ಆರಂಭವಾಗುತ್ತಿದ್ದಂತೆ ಹಂಗಾಮಿ ಸಭಾಪತಿ ಪುಟ್ಟಣ್ಣ ಅವರು ಅಗಲಿದ ಗಣ್ಯರಿಗೆ ಗೌರವ ಸೂಚಿಸುವ ಸಂತಾಪ ನಿರ್ಣಯವನ್ನು ಮಂಡಿಸಿದರು. ಸಂತಾಪ ನಿರ್ಣಯದ ಮೇಲೆ ಸಭಾನಾಯಕ ಡಾ.ಯತೀಂದ್ರ ಸಿದ್ದರಾಮಯ್ಯ, ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಸೇರಿದಂತೆ ಮತ್ತಿತರರು ಮಾತನಾಡಿ ಅಗಲಿದ ಗಣ್ಯರ ಸೇವೆಗಳನ್ನು ಶ್ಲಾಘನೆ ಮಾಡಿದರು. ಮಾಜಿ ಸಚಿವ ರಾಮಚಂದ್ರೇಗೌಡ ಅವರು ವೈದ್ಯಕೀಯ ಶಿಕ್ಷಣ ಸಚಿವರಾಗಿದ್ದ ವೇಳೆ ತೆಗೆದುಕೊಂಡಿದ್ದ ಕೆಲವು ನಿರ್ಧಾರಗಳನ್ನು ಹಂಗಾಮಿ ಸಭಾಪತಿ ಪುಟ್ಟಣ್ಣ ಅವರು ಶ್ಲಾಘಿಸಿದರು.ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರಾಗಿ ತಮ್ಮ ರಾಜಕೀಯ ಜೀವನ ಆರಂಭಿಸಿದ ಅವರು, ರಾಜ್ಯದಲ್ಲಿ ಬಿಜೆಪಿ ಸಂಘಟನೆಗೆ ಹೆಚ್ಚು ಶ್ರಮ ವಹಿಸಿದ್ದರು. ರಾಜ್ಯವು ಓರ್ವ ಉತ್ತಮ ಸಂಸದೀಯ ಪಟುವನ್ನು ಕಳೆದುಕೊಂಡಿದೆ ಎಂದು ವಿಷಾದಿಸಿದರು.

# ಸಾವಿನ ಯಜಮಾನ ಭಗವಂತ, ಈ ಜಗತ್ತಿನ ತೋಟಗಾರ ಅವನು: ಸಿಎಂ ಡಿ.ಕೆ. ಶಿವಕುಮಾರ್

## ಶ್ಲೋಕ, ಸುಭಾಷಿತಗಳ ಮೂಲಕ ಅಗಲಿದ ಗೆಳೆಯರು, ಗಣ್ಯರು, ಹಿರಿಯ ನಾಯಕರಿಗೆ ಸಂತಾಪ



ಬೆಂಗಳೂರು, ಆ.13: ಸಾವಿನ ಯಜಮಾನ ಭಗವಂತ. ಈ ಜಗತ್ತಿಗೆ ತೋಟಗಾರ ಅವನು. ಇವತ್ತು ನಾವು ಆ ತೋಟದಲ್ಲಿ ಬೀಜಗಳನ್ನು ಬಿತ್ತಿ, ಪ್ರತಿಯೊಬ್ಬರ ಸ್ವಭಾವಕ್ಕೆ ತಕ್ಕಂತೆ ಬೆಳೆದು, ಕೊನೆಗೆ ಸಾವನ್ನು ಪಡೆದುಕೊಡು ಹೋಗುತ್ತಿದ್ದೇವೆ.

ವಿಧಾನಸಭೆ ಅಧಿವೇಶನದಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸಾವಿನ ಕುರಿತು ತಾತ್ಪರ್ಯ ನೀಡಿದ್ದು ಹೀಗೆ.

ವಿಧಾನಮಂಡಲ ಉಭಯ ಸದನಗಳ ಜಂಟಿ ಅಧಿವೇಶನದಲ್ಲಿ ಇತ್ತೀಚೆಗೆ ನಿಧನರಾದ ಗಣ್ಯರು, ರಾಜಕೀಯ ನಾಯಕರು, ರಾಷ್ಟ್ರದ ಸಾಧಕರಿಗೆ ಗೌರವ ಸಲ್ಲಿಸಲು ಸಂತಾಪ ಸೂಚಕ ನಿರ್ಣಯದ ಮೇಲೆ ಮುಖ್ಯಮಂತ್ರಿಗಳು ಮಾತನಾಡಿ, ಶ್ಲೋಕ, ಸುಭಾಷಿತಗಳೊಂದಿಗೆ ಅಗಲಿದ ಗಣ್ಯರಿಗೆ ನುಡಿನಮನ ಸಲ್ಲಿಸಿದರು.

ಕೊರಗಲೇಕೆ, ಮರುಗಲೇಕೆ, ಹುಟ್ಟಿ ಬಂದಿದ್ದೇ.. ಅಳಲೇಕೆ, ಸುಖವೇ ಬರಲಿ, ದುಃಖವೇ ಬರಲಿ, ರೋಗ ಭೋಗವೇ ಇರಲಿ, ಎಲ್ಲಾ ಹೊತ್ತು, ಋಣ ತೆತ್ತು, ಮುಂದೆ ಪುಣ್ಯದ ಬೀಜ ಬಿತ್ತು ಎಂದು ಸಾವಿನ ಸತ್ಯ ವ್ಯಾಖ್ಯಾನಿಸಿದರು.

ಸುಧಾಕರ್ ಅಗಲಿಕೆ ಕಷ್ಟದಿಂದಲೇ ಒಪ್ಪಿಕೊಳ್ಳಬೇಕಾದ ಪರಿಸ್ಥಿತಿ ಈಗ ಬಂದಿದೆ. ಡಿ.ಸುಧಾಕರ್ ನನ್ನ ಆತ್ಮೀಯ ಗೆಳೆಯ. ಇಬ್ಬರದೂ ಒಂದೇ ವಯಸ್ಸು. ಆತನ ಉಸಿರು ಇಷ್ಟು ಬೇಗ ಹೋಗುತ್ತದೆ ಎಂದು ನಾವು, ನೀವು ಯಾರೂ ನಿರೀಕ್ಷಿಸಿರಲಿಲ್ಲ? ಎಂದು ಬೇಸರ ವ್ಯಕ್ತಪಡಿಸಿದರು. ಸುಧಾಕರ್ ನನ್ನನ್ನು ಮುಖ್ಯಮಂತ್ರಿ ಸ್ಥಾನದಲ್ಲಿ ನೋಡಬೇಕು ಅಂತ ಬಹಳ ಆಸೆ ಪಟ್ಟಿದ್ದರು. ನಿನ್ನ ಸಂಪುಟದಲ್ಲಿ ಮಂತ್ರಿಯಾಗದೇ ಇದ್ದರೂ ಚಿಂತೆ ಇಲ್ಲ ಎಂದಿದ್ದರು. ಪ್ರೀತಿ, ಗೆಳೆತನವನ್ನು ಒಪ್ಪಿಕೊಳ್ಳಬೇಕು. ಸಾವನ್ನು ಸ್ವಾಗತಿಸಬೇಕು ಎಂದು ಹಿರಿಯರು ಹೇಳಿದ್ದಾರೆ ಎಂದರು.

ಹುಟ್ಟುವಾಗ ಮಗು ಅಳುತ್ತಿರುತ್ತದೆ. ಆಗ ಸಮಾಜ ಬಹಳ ಸಂತೋಷ ಪಡುತ್ತದೆ. ಅದೇ ಮಗು ಬೆಳೆದು ದೊಡ್ಡವನಾಗಿ ಸಾಧನೆ ಮಾಡಿ ಸತ್ತಾಗ ಇದೇ ಸಮಾಜ ಅಳುತ್ತದೆ. ಗೆಳೆಯ ಸುಧಾಕರ್ ಅವರ ಸಾವು ಇನ್ನೂ ಕಣ್ಣ ಮುಂದಿದೆ. ಆ ಒಂದು ತಿಂಗಳು ಆತ ಬದುಕಿನಲ್ಲಿ ಮಾಡಿದ ಹೋರಾಟ ನೆನಸಿಕೊಂಡರೆ ದುಃಖವಾಗುತ್ತದೆ ಎಂದು ಹೇಳಿದರು.

**ವೆಂಕಟರಮಣಪ್ಪ ಅವರನ್ನು ತೋಳ ಎನ್ನುತ್ತಿದ್ದೆವು**

ಪಾವಗಡದ ವೆಂಕಟರಣಪ್ಪನವರನ್ನು ನಾವು ತೋಳ, ತೋಳ ಎಂದು ಕರೆಯುತ್ತಿದ್ದೆವು. ಸಣ್ಣ ಕೈಗಾರಿಕೆ, ರೇಷ್ಮೆ ಜವಳಿ ಸಚಿವರಾಗಿದ್ದರು. ಕುಡಿಯುವ ನೀರಿಗೆ ಬಹುದೊಡ್ಡ ಹೋರಾಟ ಮಾಡಿದವರು. ತುಮಕೂರು– ರಾಯದುರ್ಗ ರೈಲ್ವೇ ಯೋಜನೆಗೆ ಶ್ರಮಿಸಿದ್ದರು. ಕೃಷಿ ವೃತ್ತಿ, ರಾಜಕೀಯ ಪ್ರವೃತ್ತಿ ಎಂದು ಹೇಳುತ್ತಿದ್ದರು ಎಂದರು.

**ಪ್ರಾಮಾಣಿಕ ರಾಜಕಾರಣಿ**

ರಾಮಚಂದ್ರೇಗೌಡರು ನನ್ನ ಸಂಬಂಧಿಕರು. ಅವರು ಕಾರ್ಪೋರೇಟರ್ ಆಗಿದ್ದಾಗ ನಾನು ವಿದ್ಯಾರ್ಥಿ ನಾಯಕನಾಗಿದ್ದೆ. ಸಜ್ಜನ ರಾಜಕಾರಣಿ. ಯಡಿಯೂರಪ್ಪ ಅವರಿಗೆ ಬಲಗೈ ಬಂಟರಾಗಿದ್ದರು. 50 ವರ್ಷಗಳ ರಾಜಕೀಯ ಜೀವನದಲ್ಲಿ ಸರಳತೆಯಿಂದ ಇದ್ದವರು. ಬದುಕಿನಲ್ಲಿ ನ್ಯಾಯ, ನೀತಿ, ಸೇವೆಯನ್ನು ಗಮನದಲ್ಲಿಟ್ಟುಕೊಂಡು, ಶಿಸ್ತಿಗೆ ಪ್ರಾಮಾಣಿಕತೆಗೆ ಹೆಸರಾಗಿದ್ದರು ಎಂದರು.

ಬಿಜೆಪಿ ಕಟ್ಟಲು ಇಡೀ ರಾಜ್ಯ ಸುತ್ತಾಡಿದವರು. 5 ಬಾರಿ ಎಂಎಲ್‌ಸಿಯಾಗಿದ್ದರು. ವೈದ್ಯಕೀಯ ಸಚಿವರಾಗಿದ್ದಾಗ ಆರೋಪ ಎದುರಾಗಿ, ತಕ್ಷಣ ರಾಜೀನಾಮೆ ನೀಡುವ ಪರಿಸ್ಥಿತಿ ಬಂತು. ಅವರು ಅಧಿಕಾರಕ್ಕೆ ಅಂಟಿಕೊಳ್ಳದೇ, ಒಂದು ದಿನವೂ ಕಾಯದೇ ರಾಜಿನಾಮೆ ನೀಡಿದ್ದರು. ನಾನು ಕರೆ ಮಾಡಿ ಆತುರದ ನಿರ್ಧಾರ ಕೈಗೊಳ್ಳಬೇಡಿ ಎಂದು ಹೇಳಿದ್ದೆ. ಆದರೂ ಅವರು ದೃಢ ನಿರ್ಧಾರ ಮಾಡಿದ್ದರು. ನನಗೆ ನೈತಿಕತೆ ಇದೆ. ಅದಕ್ಕಾಗಿ ತನಿಖೆ ಎದುರಿಸುತ್ತೇನೆ ಎಂದು ಆರೋಪ ಮುಕ್ತರಾದರು ಎಂದು ಒಡನಾಟ ಸ್ಮರಿಸಿದರು.

**ಚೆನ್ನಮ್ಮ ಸರಳವಾಗಿ ಬದುಕಿದ ಹಿರಿಜೀವ**

ಮಾಜಿ ಪ್ರಧಾನಿ ದೇವೇಗೌಡರ ಪತ್ನಿ ಚೆನ್ನಮ್ಮನವರ ಅಂತ್ಯಕ್ರಿಯೆಯ ವಿಚಾರವಾಗಿ ಅನೇಕ ಚರ್ಚೆಗಳು ನಡೆದವು. ಆದರೆ, ಸಕಲ ಸರ್ಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆ ನೆರವೇರಿಸಲು ನಾನು ಗಟ್ಟಿ ನಿರ್ಧಾರ ತೆಗೆದುಕೊಂಡೆ. ದೇವೇಗೌಡರ ಪತ್ನಿ ಚೆನ್ನಮ್ಮ ಅವರು ಸರಳವಾಗಿ ಬದುಕಿದ ಜೀವ. ರಾಜಕಾರಣಿಗಳ ಮನೆಯಲ್ಲಿ ಹೆಣ್ಣುಮಕ್ಕಳು ಹೇಗಿರಬೇಕು ಎಂಬುದಕ್ಕೆ ಇವರ ಬದುಕೇ ಸಾಕ್ಷಿ. ಪ್ರತಿ ಯಶಸ್ವಿ ಪುರುಷನ ಹಿಂದೆ ಮಹಿಳೆ ಇರುತ್ತಾಳೆ ಎನ್ನುವುದಕ್ಕೆ ಅನ್ವರ್ಥದಂತೆ ಬದುಕಿದವರು. ತಾಯಿಯ ಮಾರ್ಗದರ್ಶನ ಸದಾ ಇತ್ತು ಎಂಬುದು ನನ್ನ ಭಾವನೆ ಎಂದರು.

ಹನುಮಂತಪ್ಪನವರು ನನಗೆ ಬಹಳ ಆತ್ಮೀಯರು. ರೈಲ್ವೇ ಆಯೋಗದ ಅಧ್ಯಕ್ಷರಾಗಿದ್ದರು. ನಾನು ಜನರಲ್ ಹಾಸ್ಟೆಲ್‌ನಲ್ಲಿ ರೂಮ್ ನಂಬರ್ 108ರಲ್ಲಿ ಇದ್ದೆ. ಅವರು 110 ರಲ್ಲಿ ಇದ್ದರು. ರಾಜೀವ್ ಗಾಂಧಿ, ಸೋನಿಯಾ ಗಾಂಧಿ ಅವರಿಗೆ ಮಾರ್ಗದರ್ಶನ ನೀಡಿದ್ದರು. ಚಿತ್ರದುರ್ಗದಲ್ಲಿ ಪಕ್ಷದ ಕಚೇರಿಗೆ ಬುನಾದಿ ಹಾಕಿದವರು. ನಿಜಲಿಂಗಪ್ಪನವರ ಆಸ್ತಿ ಖರೀದಿಗೆ ಒತ್ತಾಯ ಮಾಡಿದ್ದರು ಎಂದರು.

ಜಾಫರ್ ಷರೀಫ್ ಅವರ ಅಳಿಯರಾದ ಸಯ್ಯದ್ ಯಾಸೀನ್ ಅವರು ಮೂರು ಬಾರಿ ನನ್ನ ಜೊತೆ ಶಾಸಕರಾಗಿದ್ದರು. ಮಾಜಿ ಸಚಿವರಾದ ವೆಂಕಟಾಚಲಯ್ಯ ಅವರು ನಾವು ಒಟ್ಟಿಗೆ ಜಿಲ್ಲಾ ಪಂಚಾಯತಿ ಸದಸ್ಯರಾಗಿದ್ದೆವು. ಅವರು ನಂತರ ಶಾಸಕರಾದರು. ನಾನು ಅಂದು ಉಪಚುನಾವಣೆಯಲ್ಲಿ ದೊಡ್ಡ ಹೋರಾಟ ಮಾಡಿದೆ ಹಳೆಯ ನೆನಪನ್ನು ಹಂಚಿಕೊಂಡರು.

ಮಾಜಿ ಸಚಿವ ವೀರಣ್ಣನವರು ಉಗ್ರಪ್ಪ ಅವರ ಮಾವ. 1972ರಲ್ಲಿ ರಾಜಕೀಯ ಪ್ರವೇಶ ಮಾಡಿ, 83ರಲ್ಲಿ ಮಂತ್ರಿಯಾಗಿದ್ದರು. ಬಂಧಿಖಾನೆ ಮಂತ್ರಿಯಾಗಿ ಸೇವೆ ಮಾಡಿದ್ದರು. ದಕ್ಷತೆ ಪ್ರಾಮಾಣಿಕತೆಗೆ ಹೆಸರಾಗಿದ್ದರು ಎಂದರು.

**ಸಾವು ಯಾರನ್ನು ಕೇಳಿ ಬರಲ್ಲ. ಸಾವಿಗೆ ನಾಳೆ ಎನ್ನಲು ಸಾಧ್ಯವಿಲ್ಲ**

ನಮ್ಮೆಲ್ಲರ ಬದುಕಿನ ಪ್ರತಿಯೊಂದು ಭಾವನೆಗೂ ದನಿ ನೀಡಿದ ಗಾನ ಕೋಗಿಲೆ ಜಾನಕಿ ಅವರನ್ನು ಸದಾ ಸ್ಮರಿಸಿಕೊಳ್ಳಬೇಕು. ಪ್ರೀತಿಗೆ, ನೋವಿಗೆ, ಭಕ್ತಿಗೆ, ತಾಯ್ತನಕ್ಕೆ, ಗೆಳೆತನಕ್ಕೆ ಧ್ವನಿ ನೀಡಿದ ದೊಡ್ಡ ಗಾಯಕಿ. ಅಮ್ಮ ನಮ್ಮ ಜೊತೆ ದೈಹಿಕವಾಗಿ ಇಲ್ಲ. ಆದರೆ ಕಲಾವಿದರಿಗೆ ಸಾವಿಲ್ಲ. ಅವರ ದನಿಯ ಮೂಲಕ ಜೀವಂತವಾಗಿದ್ದಾರೆ.

ಅವರು ಪಕ್ಕದ ರಾಜ್ಯದವರು ಆದರೆ ತಮ್ಮ ಅಂತಿಮ ಸಂಸ್ಕಾರ ಮೈಸೂರಿನಲ್ಲೇ ಆಗಬೇಕು ಎಂದು ತೀರ್ಮಾನ ಮಾಡಿದ್ದರು. ಅವರ ಕುಟುಂಬದವರು ಈ ಮಾತನ್ನು ಹೇಳಿದಾಗ ಆಶ್ಚರ್ಯವಾಯಿತು ಎಂದು ಎಸ್.ಜಾನಕಿ ಅವರ ಸೇವೆಯನ್ನು ಕೊಂಡಾಡಿದರು.

ಅವರ ಹಾಡುಗಳು, ನೆನಪುಗಳು ಎಲ್ಲರ ಜೊತೆಯಲ್ಲಿವೆ. ಜಾನಕಿಯವರು ಎಂದಿಗೂ ನಮ್ಮ ಜೊತೆ ಇರಲಿದ್ದಾರೆ. ಕಳೆದುಕೊಂಡ ಮೇಲೆ ಕೊರಗೋ ಬದಲು ಜೊತೆಗೆ ಇದ್ದಾಗ ಅವರನ್ನು ಮಹತ್ವ ಅರಿತುಕೊಳ್ಳಬೇಕು. ಇದರ ಜೊತೆಗೆ ಹಿಂದಿ ಚಿತ್ರರಂಗದ ಆಶಾ ಭೋಸ್ಲೆ ಅವರೂ ಅವರ ದನಿಯ ಮೂಲಕ ಅಜರಾಮರ ಎಂದರು.

ಮಾಜಿ ಸಚಿವರು, ಶಾಸಕರಾದ ವಿ. ಶ್ರೀನಿವಾಸನ್, ಕೆ.ಆರ್.ಶ್ರೀನಿವಾಸಯ್ಯ, ಎಚ್.ಎಸ್. ಪುಟ್ಟರಂಗನಾಥ್ ಅವರನ್ನು ಸಿಎಂ ಸ್ಮರಿಸಿದರು.

# ಮಲ್ಲಿಕಾರ್ಜುನ ಖರ್ಗೆ ಭಾಗವಹಿಸಿದ್ದ ಸ್ಥಳ ಶುದ್ಧೀಕರಣ ಯಾಗ: ಡಿಸಿಎಂ ಜಿ. ಪರಮೇಶ್ವರ್ ಖಂಡನೆ



**ಬೆಂಗಳೂರು, ಆ.13:** ಉತ್ತರಾಖಂಡದ ಹಲ್ದ್ವಾನಿಯ ರಾಮಲೀಲಾ ಮೈದಾನದಲ್ಲಿ ಆಗಸ್ಟ್ 8 ರಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಕಾಂಗ್ರೆಸ್ ಪಕ್ಷದ ಸಾರ್ವಜನಿಕ ಸಮಾರಂಭವೊಂದರಲ್ಲಿ ಭಾಗವಹಿಸಿದ್ದ ಸ್ಥಳವನ್ನು ಸ್ವಚ್ಛಗೊಳಿಸಿರುವುದನ್ನು ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ಖಂಡಿಸಿದ್ದಾರೆ.


ಈ ಕುರಿತು ಹೇಳಿಕೆ ಬಿಡುಗಡೆ ಮಾಡಿರುವ ಅವರು, ಖರ್ಗೆ ಅವರು ದಲಿತ ಸಮುದಾಯಕ್ಕೆ ಸೇರಿದವರು ಎನ್ನುವ ಕಾರಣಕ್ಕಾಗಿ ಅವರ ಕಾರ್ಯಕ್ರಮ ನಡೆದಿದ್ದ ಜಾಗವನ್ನು ಶುದ್ಧೀಕರಣ ಯಾಗದ ಮೂಲಕ ಸ್ವಚ್ಛ ಮಾಡಲಾಗಿದೆ ಎನ್ನುವ ವಿಚಾರ ತಿಳಿದು ಮನಸ್ಸಿಗೆ ಘಾಸಿಯಾಯಿತು. ಭಾರತೀಯರು ಮೊದಲ ಬಾರಿಗೆ ಚಂದ್ರನ ದಕ್ಷಿಣ ಧ್ರುವವನ್ನು ಸ್ಪರ್ಶಿಸಿ ವಿಶ್ವದಾಖಲೆ ಬರೆದರೂ, ಸಮಾಜ ಇನ್ನೂ ತನ್ನ ಭಾಗವಾಗಿರುವ ದಲಿತನನ್ನು ಮುಟ್ಟಲು ತಯಾರಿಲ್ಲ ಎನ್ನುವುದು ಕೂಡ ಅಷ್ಟೇ ಸತ್ಯ. ಇವು ಭಾರತೀಯ ಸಮಾಜದ ಎರಡು ಮುಖಗಳು ಎಂದು ಹೇಳಲು ದುಃಖವಾಗುತ್ತದೆ ಎಂದಿದ್ದಾರೆ.

ಮಲ್ಲಿಕಾರ್ಜುನ ಖರ್ಗೆ ಅವರ ವಿರುದ್ಧ ಜಾತಿಯ ಹೆಸರಿನಲ್ಲಿ ನಡೆದಿರುವ ಈ ಅವಮಾನಕರ, ಅಮಾನವೀಯ ಕೃತ್ಯವನ್ನು ನಾನು ತೀವ್ರವಾಗಿ ಖಂಡಿಸುತ್ತೇನೆ. ದೇಶದಲ್ಲಿ ಜಾತಿ ವ್ಯವಸ್ಥೆ ಮತ್ತು ಅಸ್ಪೃಶ್ಯತೆಗಳ ಕರಾಳ ಆಚರಣೆ ಇಂದಿಗೂ ಜೀವಂತವಾಗಿವೆ ಎನ್ನುವುದಕ್ಕೆ ಇದು ಸಾಕ್ಷಿ. ಬಿಜೆಪಿ ಆಡಳಿತದಲ್ಲಿ ರಾಜ್ಯ ಸಭೆಯ ಪ್ರತಿಪಕ್ಷ ನಾಯಕನಿಗೇ ಈ ಪರಿಸ್ಥಿತಿಯಾದರೆ, ಇನ್ನು ಸಾಮಾನ್ಯ ದಲಿತರ ಪಾಡೇನು, ನರೇಂದ್ರ ಮೋದಿ ಅವರ ಆಡಳಿತದಲ್ಲಿ ಭಾರತ ಮತ್ತೆ ಮನುಸ್ಮೃತಿಯ ಕಾಲಕ್ಕೆ ಮರಳುತ್ತಿದೆಯೇ? ಎನ್ನುವ ಆತಂಕ ಒಬ್ಬ ದಲಿತನಾಗಿ ನನ್ನಲ್ಲಿ ಕಾಡುತ್ತಿದೆ ಎಂದಿದ್ದಾರೆ.

ಬಾಬಾಸಾಹೇಬ್ ಅಂಬೇಡ್ಕರ್ ಅವರು ತಾವು ಕಂಡುಂಡ ಅವಮಾನ, ಅಸಮಾನತೆಗಳಿಗೆ ಸಂವಿಧಾನದ ರೂಪದಲ್ಲಿ ಪರಿಹಾರವನ್ನು ನೀಡಿದ್ದಾರೆ. ಶೋಷಿತ ಸಮುದಾಯಗಳಿಗೆ ಘನತೆಯ ಬದುಕಿನ ಹಾದಿ ತೋರಿದ್ದಾರೆ. ಸಂವಿಧಾನದ ಮೂಲಕ ಇಂತಹ ಅನಿಷ್ಟಗಳ ನಿರ್ಮೂಲನೆಗೆ ನಾವು ನಿರಂತರ ಶ್ರಮಿಸುತ್ತಿದ್ದರೂ, ಈ ನೆಲದ ಕಾನೂನನ್ನು ಗೌರವಿಸದ ಪಟ್ಟಭದ್ರ ಹಿತಾಸಕ್ತಿಗಳು ಜಾತಿಪದ್ಧತಿ, ಅಸ್ಪೃಶ್ಯತೆ, ಮೌಢ್ಯ ಕಂದಾಚಾರಗಳನ್ನು ಈಗಲೂ ಜೀವಂತವಾಗಿಡಲು ಕೆಲಸ ಮಾಡುತ್ತಿವೆ. ಇಂತವರು ಸಂವಿಧಾನ ವಿರೋಧಿಗಳು ಮಾತ್ರವಲ್ಲ, ರಾಷ್ಟ್ರವಿರೋಧಿಗಳು ಕೂಡ ಹೌದು. ಅವಕಾಶ ಸಿಕ್ಕಾಗಲೆಲ್ಲ ತಮ್ಮೊಳಗಿನ ಜಾತಿ ಕ್ರೌರ್ಯವನ್ನು ಹೊರಗೆಡವುತ್ತಿದ್ದಾರೆ. ಇದಕ್ಕೆ ಕಾನೂನಿನ ಮೂಲಕ ಅಂತ್ಯ ಹಾಡದೆ ಹೋದರೆ ಮುಂದಿನ ಪೀಳಿಗೆ ಖಂಡಿತಾ ನಮ್ಮನ್ನು ಕ್ಷಮಿಸುವುದಿಲ್ಲ.

ಶುದ್ಧೀಕರಣದ ನೆಪದಲ್ಲಿ ಸಂವಿಧಾನಬಾಹಿರವಾದ ಅಸ್ಪೃಶ್ಯತೆಯನ್ನು ಆಚರಣೆ ಮಾಡಿರುವ, ಆ ಮೂಲಕ ಮಲ್ಲಿಕಾರ್ಜುನ ಖರ್ಗೆ ಅವರ ಘನತೆಗೆ ಚ್ಯುತಿಯುಂಟು ಮಾಡಿರುವ ದುಷ್ಟರ ಮೇಲೆ ಮೊಕದ್ದಮೆಯನ್ನು ದಾಖಲಿಸಿ, ಕಠಿಣ ಶಿಕ್ಷೆಗೆ ಗುರಿಪಡಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರನ್ನು ಒತ್ತಾಯಿಸಿದ್ದಾರೆ. ಇಂದು ಬಿಜೆಪಿ ಪಕ್ಷದಲ್ಲಿರುವ ಶೋಷಿತ, ದಲಿತ, ತಳ ಸಮುದಾಯಗಳ ಜನರು ತಾವು ಎಂಥವರ ಕೈ ಬಲಪಡಿಸುತ್ತಿದ್ದೇವೆ ಎನ್ನುವುದನ್ನು ಒಮ್ಮೆ ಆತ್ಮಾವಲೋಕನ ಮಾಡಿಕೊಳ್ಳಲು ಇದು ಸಕಾಲ ಎಂದು ಡಾ. ಜಿ. ಪರಮೇಶ್ವರ್ ಹೇಳಿದ್ದಾರೆ.

# ಜಲಜೀವನ್ ಮಿಷನ್‌ನ ಪ್ರಗತಿ-ಅನುಷ್ಠಾನದ ಕುರಿತು ಚರ್ಚೆ




ನವದೆಹಲಿ, ಆ.13: ನವದೆಹಲಿಯ ಮಧ್ಯಪ್ರದೇಶ ಭವನದಲ್ಲಿ ಕೇಂದ್ರ ಸಚಿವ ಸಿ.ಆರ್ ಪಾಟೀಲ್ ಅವರ ಅಧ್ಯಕ್ಷತೆಯಲ್ಲಿ ಮಧ್ಯಪ್ರದೇಶದ ಮಾನ್ಯ ಸಂಸದರೊಂದಿಗೆ ನಡೆದ ಜಲಜೀವನ್ ಮಿಷನ್‌ನ ಪ್ರಗತಿ ಮತ್ತು ಅದರ ಅನುಷ್ಠಾನದ ಕುರಿತು ನಡೆದ ಚರ್ಚೆಯಲ್ಲಿ ಪಾಲ್ಗೊಳ್ಳಲಾಯಿತು.

ಈ ಸಭೆಯಲ್ಲಿ, ಸಂಸದರು ತಮ್ಮ ತಮ್ಮ ಸಂಸದೀಯ ಕ್ಷೇತ್ರಗಳಲ್ಲಿ ಜಲಜೀವನ್ ಮಿಷನ್‌ನ ಪ್ರಗತಿ, ಜಲಮೂಲಗಳ ಸ್ಥಿರತೆ, ಯೋಜನೆಗಳ ಗುಣಮಟ್ಟ, ನಿಯಮಿತ ಜಲಪೂರೈಕೆ, ನಿರ್ವಹಣೆ ಹಾಗೂ ಸ್ಥಳೀಯ ಮಟ್ಟದಲ್ಲಿ ಎದುರಾಗುತ್ತಿರುವ ಪ್ರಾಯೋಗಿಕ ಸವಾಲುಗಳಿಗೆ ಸಂಬಂಧಿಸಿದ ಪ್ರಮುಖ ಸಲಹೆಗಳನ್ನು ಹಂಚಿಕೊಂಡರು. ಈ ಸಂದರ್ಭದಲ್ಲಿ, ಕೇಂದ್ರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವ ಡಾ. ವೀರೇಂದ್ರ ಕುಮಾರ್ ಅವರು, ಜಲಶಕ್ತಿ ಇಲಾಖೆಯ ರಾಜ್ಯ ಸಚಿವ ರಾಜ್‌ಭೂಷಣ್ ಚೌಧರಿ ಅವರು ಹಾಗೂ ಕೇಂದ್ರದ ಬುಡಕಟ್ಟು ವ್ಯವಹಾರಗಳ ರಾಜ್ಯ ಸಚಿವ ದುರ್ಗಾದಾಸ್ ಉಯಿಕೆ ಅವರು ಸೇರಿದಂತೆ ಮಧ್ಯಪ್ರದೇಶದ ಪ್ರಮುಖ ಸಂಸದರು ಉಪಸ್ಥಿತರಿದ್ದರು

# ಸೌಜನ್ಯ ಅತ್ಯಾಚಾರ-ಕೊಲೆ ಪ್ರಕರಣ: ಸಂತೋಷ್‌ರಾವ್‌ಗೆ ಸುಪ್ರೀಂನಲ್ಲಿ ಹಿನ್ನಡೆ

**ನವದೆಹಲಿ, ಆ.13:** ಧರ್ಮಸ್ಥಳದ ಸೌಜನ್ಯ ಅತ್ಯಾಚಾರ–ಕೊಲೆ ಪ್ರಕರಣದಲ್ಲಿ ಆರೋಪಿಯಾಗಿದ್ದ ಸಂತೋಷ್ ರಾವ್‌ಗೆ ಸುಪ್ರೀಂ ಕೋರ್ಟ್‌ನಲ್ಲಿ ಹಿನ್ನಡೆಯಾಗಿದೆ. ಪರಿಹಾರ ಧನ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ.

ಹೈಕೋರ್ಟ್ ಆದೇಶ ಪ್ರಶ್ನಿಸಿ ಸಲ್ಲಿಸಿದ್ದ ಮೇಲ್ಮನವಿ ಅರ್ಜಿ ವಿಚಾರಣೆ ನಡೆಸಿದ ನ್ಯಾ. ಸಂಜಯ್ ಕುಮಾರ್ ಹಾಗೂ ನ್ಯಾ. ಸಂಜೀವ್ ಸಚ್‌ದೇವ ಅವರನ್ನೊಳಗೊಂಡ ದ್ವಿಸದಸ್ಯ ಪೀಠವು, ಹೈಕೋರ್ಟ್ ಆದೇಶದಲ್ಲಿ ಮಧ್ಯಪ್ರವೇಶಿಸಲು ಯಾವುದೇ ಸೂಕ್ತ ಕಾರಣಗಳು ಕಂಡುಬರುತ್ತಿಲ್ಲ ಎಂದು ಸ್ಪಷ್ಟಪಡಿಸಿದೆ. ವಿಚಾರಣೆ ವೇಳೆ ಸುಪ್ರೀಂ ಕೋರ್ಟ್, ಹೈಕೋರ್ಟ್‌ನ ಆದೇಶದಲ್ಲಿ ಮಧ್ಯಪ್ರವೇಶಿಸುವ ಅಗತ್ಯವಿಲ್ಲ ಎಂದು ಹೇಳಿ ವಿಶೇಷ ಅನುಮತಿ ಅರ್ಜಿಯನ್ನು ವಜಾಗೊಳಿಸಿತು. ಇದೇ ವೇಳೆ, ಸಂತೋಷ್ ರಾವ್ ಅವರು ಪರಿಹಾರ ಧನಕ್ಕೆ ಅರ್ಹರು ಎಂದು ಭಾವಿಸಿದರೆ, ಸೂಕ್ತ ಪರಿಹಾರಕ್ಕಾಗಿ ಸಂಬಂಧಪಟ್ಟ ಕೆಳ ಹಂತದ ನ್ಯಾಯಾಲಯ ಅಥವಾ ಸೂಕ್ತ ವೇದಿಕೆಯ ಮುಂದೆ ಸ್ವತಂತ್ರವಾಗಿ ಅರ್ಜಿ ಸಲ್ಲಿಸಲು ಅವಕಾಶವಿದೆ ಎಂದು ಸ್ಪಷ್ಟಪಡಿಸಿದೆ.

ಅರ್ಜಿಯಲ್ಲಿದ್ದ ವಿಳಂಬವನ್ನು ಸುಪ್ರೀಂ ಕೋರ್ಟ್ ಮೊದಲು ಕ್ಷಮಿಸಿತು. ಆದರೆ, ಪ್ರಕರಣದ ಮೂಲ ವಿಚಾರದಲ್ಲಿ ಹೈಕೋರ್ಟ್ ಆದೇಶವನ್ನು ಬದಲಾಯಿಸಲು ಯಾವುದೇ ಕಾರಣವಿಲ್ಲ ಎಂದು ಹೇಳಿ ಮೇಲ್ಮನವಿಯನ್ನು ಅಂತಿಮವಾಗಿ ವಜಾಗೊಳಿಸಿತು.

# 6252 ಕೋಟಿ ರೂ. ಮೌಲ್ಯದ 83 ಕೈಗಾರಿಕೆಗಳಿಗೆ ಹೂಡಿಕೆಗೆ ಅನುಮೋದನೆ

**ರಾಜ್ಯಾದ್ಯಂತ 30 ಸಾವಿರಕ್ಕೂ ಹೆಚ್ಚು ಉದ್ಯೋಗಾವಕಾಶ, ಬೆಂಗಳೂರು ಹೊರಭಾಗದಲ್ಲಿ 60 ಯೋಜನೆಗಳ ಸ್ಥಾಪನೆ: ಸಚಿವ ಎಂ.ಬಿ. ಪಾಟೀಲ್**




**ಬೆಂಗಳೂರು, ಆ.13:** ರಾಜ್ಯದಲ್ಲಿ ಕೈಗಾರಿಕಾ ಪ್ರಗತಿ ಮತ್ತು ಉದ್ಯೋಗ ಸೃಷ್ಟಿಗೆ ಭಾರಿ ಉತ್ತೇಜನ ಸಿಕ್ಕಿದೆ. ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ. ಬಿ. ಪಾಟೀಲ್ ಅವರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ (ಎಸ್‌ಎಲ್‌ಎಸ್ ಡಬ್ಲ್ಯುಸಿಸಿ) ಸಭೆಯು ಒಟ್ಟು 6,252.86 ಕೋಟಿ ರೂ. ಮೌಲ್ಯದ 83 ಕೈಗಾರಿಕಾ ಯೋಜನೆಗಳಿಗೆ ಅನುಮೋದನೆ ನೀಡಿದೆ. ಈ ಮಹತ್ತರ ನಿರ್ಧಾರದಿಂದಾಗಿ ರಾಜ್ಯಾದ್ಯಂತ 30,054ಕ್ಕೂ ಹೆಚ್ಚು ಜನರಿಗೆ ಹೊಸದಾಗಿ ಉದ್ಯೋಗಾವಕಾಶಗಳು ಲಭಿಸಲಿವೆ. ಅನುಮೋದನೆ ಪಡೆದ ಯೋಜನೆಗಳ ಪೈಕಿ 69 ಯೋಜನೆಗಳು ಬೆಂಗಳೂರಿನ ಹೊರಭಾಗದಲ್ಲಿ ಸ್ಥಾಪನೆಯಾಗಲಿವೆ. ಈ ಯೋಜನೆಗಳಿಂದ ರಾಜ್ಯಾದ್ಯಂತ 30,054ಕ್ಕೂ ಹೆಚ್ಚು ಉದ್ಯೋಗಾವಕಾಶಗಳು ಸೃಷ್ಟಿಯಾಗುವ ನಿರೀಕ್ಷೆಯಿದೆ.

ಈ ಕುರಿತು ಮಾತನಾಡಿರುವ ಸಚಿವ ಎಂ.ಬಿ. ಪಾಟೀಲ್ ಅವರು, ರೂ.50 ಕೋಟಿಗೂ ಅಧಿಕ ಹೂಡಿಕೆಯ 24 ಯೋಜನೆಗಳು ಒಟ್ಟು ರೂ.4,702.99 ಕೋಟಿ ಹೂಡಿಕೆ ತರಲಿದ್ದು, ಸುಮಾರು 25,170 ಉದ್ಯೋಗಗಳನ್ನು ಸೃಷ್ಟಿಸಲಿವೆ ಎಂದು ಹೇಳಿದ್ದಾರೆ. ಇನ್ನು ರೂ.15 ಕೋಟಿಯಿಂದ ರೂ.50 ಕೋಟಿವರೆಗಿನ ಹೂಡಿಕೆಯ 57 ಯೋಜನೆಗಳಿಗೆ ಅನುಮೋದನೆ ದೊರೆತಿದ್ದು, ಇವುಗಳ ಮೂಲಕ ರೂ.1,291.87 ಕೋಟಿ ಹೂಡಿಕೆ ಬರಲಿದೆ. ಈ ಯೋಜನೆಗಳಿಂದ 4,884 ಉದ್ಯೋಗಗಳು ಸೃಷ್ಟಿಯಾಗುವ ನಿರೀಕ್ಷೆಯಿದೆ ಎಂದಿದ್ದಾರೆ.

**ಎಷ್ಟು ಹೂಡಿಕೆ, ಉದ್ಯೋಗವಕಾಶವೆಷ್ಟು?**

ಅನುಮೋದನೆ ಪಡೆದ ಯೋಜನೆಗಳು ವಿವಿಧ ಕ್ಷೇತ್ರಗಳನ್ನು ಒಳಗೊಂಡಿವೆ. ಸಂಯೋಜಿತ ಕೈಗಾರಿಕಾ ಪಾರ್ಕ್‌ಗಳು, ಏರೋಸ್ಪೇಸ್ ಮತ್ತು ರಕ್ಷಣಾ ಉತ್ಪಾದನೆ, ಆಹಾರ ಸಂಸ್ಕರಣೆ, ಮಾಹಿತಿ ತಂತ್ರಜ್ಞಾನ ಸೇವೆಗಳು ಹಾಗೂ ನವೀಕರಿಸಬಹುದಾದ ಇಂಧನ ಕ್ಷೇತ್ರಗಳಲ್ಲಿ ಪ್ರಮುಖ ಹೂಡಿಕೆಗಳು ಬರಲಿವೆ. ಅನುಮೋದನೆ ಪಡೆದ ಪ್ರಮುಖ ಯೋಜನೆಗಳಲ್ಲಿ ಬೆಂಗಳೂರಿನ ಜಸ್ವಿನ್ ವೆಂಚರ್ಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯ ಯೋಜನೆಯೂ ಸೇರಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲೂಕಿನಲ್ಲಿ ಸಂಯೋಜಿತ ಕೈಗಾರಿಕಾ ಪಾರ್ಕ್ ಮತ್ತು ಮಿಶ್ರ ಬಳಕೆಯ ಟೌನ್‌ಶಿಪ್ ಅಭಿವೃದ್ಧಿಪಡಿಸಲು ಸಂಸ್ಥೆ ರೂ.475 ಕೋಟಿ ಹೂಡಿಕೆ ಮಾಡಲಿದೆ. ಈ ಯೋಜನೆಯಿಂದ 12,000 ಉದ್ಯೋಗಗಳು ಸೃಷ್ಟಿಯಾಗುವ ನಿರೀಕ್ಷೆಯಿದೆ.ಅದೇ ರೀತಿ, ಜಂಪಾನಾ ಕನ್ಸ್‌ಸ್ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯು ದೊಡ್ಡಬಳ್ಳಾಪುರ ತಾಲೂಕಿನಲ್ಲಿ ಗೋದಾಮು, ಸರಕು ಸಾಗಣೆ, ವಸತಿ ಹಾಗೂ ವಾಣಿಜ್ಯ ಸ್ಥಳಗಳನ್ನು ಒಳಗೊಂಡ ಸಂಯೋಜಿತ ಕೈಗಾರಿಕಾ ಪಾರ್ಕ್ ನಿರ್ಮಿಸಲು ಮುಂದಾಗಿದೆ. ಇದಕ್ಕಾಗಿ ರೂ.465 ಕೋಟಿ ಹೂಡಿಕೆ ಮಾಡಲಿದ್ದು, ಸುಮಾರು 2,500 ಉದ್ಯೋಗಗಳು ಸೃಷ್ಟಿಯಾಗಲಿವೆ.

# ಹರ್ ಘರ್ ತಿರಂಗಾ ಅಭಿಯಾನ: ನಾಗ್ಪುರದ ಆರ್‌ಎಸ್‌ಎಸ್ ಕೇಂದ್ರ ಕಚೇರಿಯಿಂದಲೇ ಆರಂಭವಾಗಲಿ

**ಸಚಿವ ಪ್ರಿಯಾಂಕ್ ಖರ್ಗೆ ಆಗ್ರಹ, ಪ್ರಧಾನಿಗೂ ಮನವಿ**



ಬೆಂಗಳೂರು, ಆ.13: ಬಿಜೆಪಿಯ ಹರ್ ಘರ್ ತಿರಂಗಾ ಅಭಿಯಾನದ ವಿರುದ್ಧ ಮತ್ತೊಮ್ಮೆ ವಾಗ್ದಾಳಿ ನಡೆಸಿದ್ದು, ಈ ಅಭಿಯಾನವು ನಾಗ್ಪುರದಲ್ಲಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕೇಂದ್ರ ಕಚೇರಿಯಿಂದಲೇ ಆರಂಭವಾಗಬೇಕು ಎಂದು ಸಚಿವ ಪ್ರಿಯಾಂಕ್ ಖರ್ಗೆ ಆಗ್ರಹಿಸಿದ್ದಾರೆ.

ನಾಗ್ಪುರದಲ್ಲಿರುವ ಆರ್‌ಎಸ್‌ಎಸ್ ಕೇಂದ್ರ ಕಚೇರಿಯಲ್ಲಿ ರಾಷ್ಟ್ರಧ್ವಜ ಹಾರಿಸಿದ ಇತಿಹಾಸವನ್ನು ಪ್ರಶ್ನಿಸಿದ ಅವರು, ಸ್ವಾತಂತ್ರ್ಯ ಬಂದ ನಂತರ ಐದು ದಶಕಗಳಿಗೂ ಹೆಚ್ಚು ಕಾಲ ಆರ್‌ಎಸ್‌ಎಸ್ ತನ್ನ ನಾಗ್ಪುರದ ಕೇಂದ್ರ ಕಚೇರಿಯಲ್ಲಿ ಭಾರತೀಯ ರಾಷ್ಟ್ರಧ್ವಜವನ್ನು ಹಾರಿಸಿರಲಿಲ್ಲ. 2002ರಲ್ಲಷ್ಟೇ ಅಲ್ಲಿ ಅಧಿಕೃತವಾಗಿ ತ್ರಿವರ್ಣ ಧ್ವಜವನ್ನು ಹಾರಿಸಲಾಯಿತು. ಹರ್ ಘರ್ ತಿರಂಗಾ ಅಭಿಯಾನವನ್ನು ಆರ್‌ಎಸ್‌ಎಸ್ ಕೇಂದ್ರ ಕಚೇರಿಯಿಂದಲೇ ಆರಂಭಿಸಬೇಕು ಎಂಬುದು ಪ್ರಧಾನಿಗೆ ನನ್ನ ಮನವಿ ಎಂದಿದ್ದಾರೆ.

ದೇಶಭಕ್ತಿಯ ವಿಚಾರದಲ್ಲಿ ಬಿಜೆಪಿಯ ನಿರೂಪಣೆಯನ್ನು ಪ್ರಶ್ನಿಸಿದ ಖರ್ಗೆ, ಅದರ ವೈಚಾರಿಕ ಮೂಲವಾದ ಆರ್‌ಎಸ್‌ಎಸ್ ತ್ರಿವರ್ಣ ಧ್ವಜದ ಬದಲಿಗೆ ಭಗವಾ ಧ್ವಜವನ್ನು ಏಕೆ ಆಯ್ಕೆ ಮಾಡಿಕೊಂಡಿತ್ತು ಎಂದು ಪ್ರಶ್ನಿಸಿದ್ದಾರೆ. ಅಲ್ಲದೆ, ಆರ್‌ಎಸ್‌ಎಸ್‌ನ ಪಥಸಂಚಲನಗಳಲ್ಲಿ ಸ್ವಯಂಸೇವಕರು ಭಾರತೀಯ ತ್ರಿವರ್ಣ ಧ್ವಜವನ್ನು ಹಿಡಿದು ಸಾಗಿರುವುದನ್ನು ನೋಡಿದ್ದೀರಾ ಎಂದು ಕೇಳಿದರು.

ಪ್ರತಿಯೊಬ್ಬ ಭಾರತೀಯನಿಗೂ ದೇಶಭಕ್ತಿಯ ಪಾಠ ಹೇಳುವ ಮೊದಲು, ಬಿಜೆಪಿಯು ತನ್ನ ವೈಚಾರಿಕ ಮೂಲವಾದ ಆರ್‌ಎಸ್‌ಎಸ್ ತ್ರಿವರ್ಣ ಧ್ವಜದ ಬದಲಿಗೆ ಭಗವಾ ಧ್ವಜವನ್ನು ಏಕೆ ಆಯ್ಕೆ ಮಾಡಿಕೊಂಡಿತ್ತು, ತನ್ನದೇ ಕೇಂದ್ರ ಕಚೇರಿಯಲ್ಲಿ ಇಷ್ಟು ದೀರ್ಘಕಾಲ ರಾಷ್ಟ್ರಧ್ವಜ ಏಕೆ ಇರಲಿಲ್ಲ ಎಂಬುದನ್ನು ಮೊದಲು ವಿವರಿಸಬೇಕು. ಒಂದು ಸರಳ ಪ್ರಶ್ನೆ ಇನ್ನೂ ಉಳಿದಿದೆ, ಪೂರ್ಣ ಸಮವಸ್ತ್ರದಲ್ಲಿ ಸ್ವಯಂಸೇವಕರು ಹೆಮ್ಮೆಯಿಂದ ಭಾರತೀಯ ತ್ರಿವರ್ಣ ಧ್ವಜವನ್ನು ಹಿಡಿದು ಸಾಗುವ ಎಷ್ಟು ಆರ್‌ಎಸ್‌ಎಸ್ ಪಥಸಂಚಲನಗಳನ್ನು ನೀವು ನೋಡಿದ್ದೀರಿ ಯಾವುದೂ ಇಲ್ಲ. ಆದರೆ, ಇದೇ ಮಂದಿ ಎಲ್ಲರಿಗೂ ದೇಶಭಕ್ತ ಪ್ರಮಾಣಪತ್ರ ನೀಡಲು ಸುತ್ತಾಡುತ್ತಾರೆ ಎಂದು ಖರ್ಗೆ ಟೀಕಿಸಿದ್ದಾರೆ.

ಸ್ವಾತಂತ್ರ್ಯ ದಿನಾಚರಣೆಗೆ ಮುನ್ನ ನಡೆಯುತ್ತಿರುವ ಹರ್ ಘರ್ ತಿರಂಗಾ ಅಭಿಯಾನದ ಹಿನ್ನೆಲೆಯಲ್ಲಿ ಖರ್ಗೆ ಅವರ ಈ ಹೇಳಿಕೆಗಳು ಬಂದಿವೆ. ಸ್ವಾತಂತ್ರ್ಯ ದಿನಾಚರಣೆಯ ಸಿದ್ಧತೆಗಳ ಭಾಗವಾಗಿ ಈ ಅಭಿಯಾನವು ಪ್ರಮುಖ ಕಾರ್ಯಕ್ರಮವಾಗಿ ಹೊರಹೊಮ್ಮಿದೆ. ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡ ವಿಡಿಯೊದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ?ಹರ್ ಘರ್ ತಿರಂಗಾ? ಅಭಿಯಾನಕ್ಕೆ ಕರೆ ನೀಡಿದ್ದರು.ನಮ್ಮ ಸ್ವಾತಂತ್ರ್ಯ ಹೋರಾಟಗಾರರಿಗೆ ಗೌರವ ಸಲ್ಲಿಸೋಣ. ಅಭಿವೃದ್ಧಿ ಹೊಂದಿದ ಭಾರತಕ್ಕಾಗಿ ಸಂಕಲ್ಪ ಮಾಡೋಣ. ಹರ್ ಘರ್ ತಿರಂಗಾ, ಘರ್ ಘರ್ ತಿರಂಗಾ, ಹರ್ ಮನ್ ತಿರಂಗಾ (ಪ್ರತಿ ಮನೆಯಲ್ಲೂ ತ್ರಿವರ್ಣ, ಪ್ರತಿಯೊಬ್ಬರ ಹೃದಯದಲ್ಲೂ ತ್ರಿವರ್ಣ). ಬನ್ನಿ, ಪ್ರತಿಯೊಂದು ಮನೆಯಲ್ಲೂ ತ್ರಿವರ್ಣ ಧ್ವಜವನ್ನು ಹಾರಿಸೋಣ ಎಂದು ಅವರು ಹೇಳಿದ್ದರು.

# ಜಾರ್ಖಂಡ್ ವಿದ್ಯಾರ್ಥಿ ಪ್ರತಿಭಟನೆ: 600 ಹೋರಾಟಗಾರರ ವಿರುದ್ಧ ಎಫ್‌ಐಆರ್ ವಿಧಾನಸಭೆಯತ್ತ ಮುನ್ನುಗ್ಗಲು ಯತ್ನ, 500 ಅಪರಿಚಿತರೆಂದು ದೂರಿನಲ್ಲಿ ಉಲ್ಲೇಖ



**ರಾಂಚಿ, ಆ.13:** ಜಾರ್ಖಂಡ್ ರಾಜ್ಯದಲ್ಲಿ ನೇಮಕಾತಿ ಪರೀಕ್ಷೆಗಳ ಅಕ್ರಮಗಳನ್ನು ಖಂಡಿಸಿ ನಡೆಯುತ್ತಿರುವ ವಿದ್ಯಾರ್ಥಿಗಳ ಪ್ರತಿಭಟನೆ ತೀವ್ರ ಸ್ವರೂಪ ಪಡೆದುಕೊಂಡಿದೆ. ಗುರುವಾರ ಶಾಸನಸಭೆ ಮುತ್ತಿಗೆಗೆ ಯತ್ನಿಸಿದ ಘಟನೆಗೆ ಸಂಬಂಧಿಸಿದಂತೆ ಪೊಲೀಸರು ಕಠಿಣ ಕ್ರಮ ಕೈಗೊಂಡಿದ್ದಾರೆ. ವಿಧಾನಸಭೆಯತ್ತ ಮುನ್ನುಗ್ಗಲು ಯತ್ನಿಸಿದ 500 ಅಪರಿಚಿತ ವಿದ್ಯಾರ್ಥಿಗಳನ್ನು ಸೇರಿದಂತೆ ಒಟ್ಟು 600 ಪ್ರತಿಭಟನಾಕಾರರ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ.

100 ಪ್ರತಿಭಟನಾಕಾರರನ್ನು ನಿರ್ದಿಷ್ಟವಾಗಿ ಹೆಸರಿಸಲಾಗಿದ್ದು, ಉಳಿದ 500 ವಿದ್ಯಾರ್ಥಿಗಳನ್ನು ಅಪರಿಚಿತರು ಎಂದು ಉಲ್ಲೇಖಿಸಿ ದೂರು ದಾಖಲಿಸಿದ್ದಾರೆ. ಜಾರ್ಖಂಡ್ ಸರ್ಕಾರದ ವಿವಿಧ ಇಲಾಖೆಗಳ ನೇಮಕಾತಿಗಾಗಿ ಇತ್ತೀಚೆಗೆ ನಡೆಸಲಾದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಭಾರೀ ಪ್ರಮಾಣದ ಅಕ್ರಮಗಳು ಹಾಗೂ ಭ್ರಷ್ಟಾಚಾರ ನಡೆದಿವೆ ಎಂದು ಆರೋಪಿಸಿ ಸಾವಿರಾರು ವಿದ್ಯಾರ್ಥಿಗಳು ಬೀದಿಗಿಳಿದು ಹೋರಾಟ ಮಾಡುತ್ತಿದ್ದಾರೆ. ಈ ನಿರಂತರ ಹೋರಾಟವು ಗುರುವಾರ 20ನೇ ದಿನಕ್ಕೆ ಕಾಲಿಟ್ಟಿದ್ದು, ಬಿಕ್ಕಟ್ಟು ಶಮನಗೊಳ್ಳುವ ಲಕ್ಷಣಗಳು ಕಾಣಿಸುತ್ತಿಲ್ಲ. ತಮ್ಮ ನ್ಯಾಯಯುತ ಬೇಡಿಕೆಗಳು ಸಂಪೂರ್ಣವಾಗಿ ಈಡೇರುವವರೆಗೂ ಯಾವುದೇ ಕಾರಣಕ್ಕೂ ಈ ಧರಣಿಯನ್ನು ಹಿಂಪಡೆಯುವುದಿಲ್ಲ ಎಂದು ಆಂದೋಲನ ನಿರತ ವಿದ್ಯಾರ್ಥಿಗಳು ಸರ್ಕಾರಕ್ಕೆ ಸ್ಪಷ್ಟ ಎಚ್ಚರಿಕೆ ನೀಡಿದ್ದಾರೆ.

ರಾಜಧಾನಿ ರಾಂಚಿಯ ಜೈಪಾಲ್ ಸಿಂಗ್ ಮುಂಡಾ ಕ್ರೀಡಾಂಗಣದಲ್ಲಿ ಜೆಪಿಎಸ್‌ಸಿ-ಜೆಎಸ್‌ಎಸ್‌ಸಿ ಸುಧಾರಣಾ ವೇದಿಕೆ (ನೇತೃತ್ವದಲ್ಲಿ ಈ ಬೃಹತ್ ಪ್ರತಿಭಟನೆ ವ್ಯವಸ್ಥಿತವಾಗಿ ನಡೆಯುತ್ತಿದೆ. ಹಗಲಿರುಳು ಎನ್ನದೆ ಸಾವಿರಾರು ವಿದ್ಯಾರ್ಥಿಗಳು ಮತ್ತು ಉದ್ಯೋಗಾಕಾಂಕ್ಷಿಗಳು ಈ ವೇದಿಕೆಯಡಿ ಒಗ್ಗೂಡಿದ್ದು, ಸರ್ಕಾರದ ವಿಳಂಬ ನೀತಿಯ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಮಳೆ ಹಾಗೂ ಚಳಿಯ ನಡುವೆಯೂ ಕ್ರೀಡಾಂಗಣದಲ್ಲಿ ಜಮಾಯಿಸಿರುವ ವಿದ್ಯಾರ್ಥಿಗಳು ತಮ್ಮ ಭವಿಷ್ಯದ ರಕ್ಷಣೆಗಾಗಿ ಹೋರಾಟ ಮುಂದುವರಿಸಿದ್ದಾರೆ.

ಪ್ರತಿಭಟನಾಕಾರರ ಪ್ರಮುಖ ಬೇಡಿಕೆಗಳು ಅತ್ಯಂತ ಸ್ಪಷ್ಟ ಹಾಗೂ ನೇರವಾಗಿವೆ. ರಾಜ್ಯದಲ್ಲಿ ನಡೆಯುವ ಎಲ್ಲಾ ನೇಮಕಾತಿ ಪರೀಕ್ಷೆಗಳ ಪ್ರಕ್ರಿಯೆಯಲ್ಲಿ ಸರ್ಕಾರ ಸಂಪೂರ್ಣ ಪಾರದರ್ಶಕತೆ ತರಬೇಕು ಎನ್ನುವುದು ಅವರ ಮೊದಲ ಮತ್ತು ಪ್ರಮುಖ ಆಗ್ರಹವಾಗಿದೆ. ಜೊತೆಗೆ, ಈಗಾಗಲೇ ಅಕ್ರಮಗಳು ನಡೆದಿವೆ ಎಂದು ಶಂಕಿಸಲಾಗಿರುವ ಹಲವು ವಿವಾದಾತ್ಮಕ ಪರೀಕ್ಷೆಗಳನ್ನು ತಕ್ಷಣವೇ ರದ್ದುಗೊಳಿಸಬೇಕು ಹಾಗೂ ಅರ್ಹ ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಲು ಹೊಸದಾಗಿ ಪರೀಕ್ಷೆಗಳನ್ನು ನಡೆಸಲು ಶೀಘ್ರವೇ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ವಿದ್ಯಾರ್ಥಿಗಳು ಒತ್ತಾಯಿಸುತ್ತಿದ್ದಾರೆ.

ನೇಮಕಾತಿ ಹಗರಣದ ಹಿಂದಿರುವ ಕಾಣದ ಕೈಗಳು ಹಾಗೂ ಭ್ರಷ್ಟ ಅಧಿಕಾರಿಗಳನ್ನು ಬಯಲಿಗೆಳೆಯಲು ಉನ್ನತ ಮಟ್ಟದ ತನಿಖೆ ನಡೆಯಬೇಕು ಎಂಬುದು ವಿದ್ಯಾರ್ಥಿಗಳ ಅಂತಿಮ ಬೇಡಿಕೆಯಾಗಿದೆ. ಈ ಪ್ರಕರಣವನ್ನು ಕೇಂದ್ರೀಯ ತನಿಖಾ ದಳ (ಸಿಬಿಐ) ಮೂಲಕ ತನಿಖೆ ನಡೆಸಬೇಕು, ಅಥವಾ ಜಾರ್ಖಂಡ್ ರಾಜ್ಯದ ಹೊರಗಿನ ನಿವೃತ್ತ ನ್ಯಾಯಾಧೀಶರನ್ನೊಳಗೊಂಡ ಉನ್ನತ ಮಟ್ಟದ ಸಮಿತಿಯನ್ನು ರಚಿಸಿ ನಿಷ್ಪಕ್ಷಪಾತ ತನಿಖೆ ನಡೆಸಬೇಕು ಎಂದು ಆಗ್ರಹಿಸಿದ್ದಾರೆ. ಈ ಮೂಲಕ ಜಾರ್ಖಂಡ್‌ನಲ್ಲಿ ಉದ್ಯೋಗಾಕಾಂಕ್ಷಿಗಳು ಮತ್ತು ಸರ್ಕಾರದ ನಡುವಿನ ಬಿಕ್ಕಟ್ಟು ಇನ್ನಷ್ಟು ಕಗ್ಗಂಟಾಗಿದೆ.

# ಬಾಲಿವುಡ್ ತಾರೆಯರು ಈಗ್ಯಾಕೆ ಮೊಸಳೆ ಕಣ್ಣೀರು ಸುರಿಸುತ್ತಿಲ್ಲ: ಕಂಗನಾ ರಣಾವತ್



**ನವದೆಹಲಿ, ಆ.13:** ಸರ್ಕಾರಿ ಹುದ್ದೆಗೆ ನೇಮಕಾತಿ ಪರೀಕ್ಷೆಗಳಲ್ಲಿ ಉಂಟಾದ ಅಕ್ರಮ ಖಂಡಿಸಿ ಜಾರ್ಖಂಡ್‌ನಲ್ಲಿ ವಿದ್ಯಾರ್ಥಿಗಳ ಪ್ರತಿಭಟನೆ ಮುಂದುವರೆದಿದೆ. ಈ ಬಗ್ಗೆ ನಟಿ ಮತ್ತು ಬಿಜೆಪಿ ಸಂಸದೆ ಕಂಗನಾ ರಣಾವತ್ ಮಾತನಾಡಿದ್ದು, ಈ ವಿಚಾರದಲ್ಲಿ ಬಾಲಿವುಡ್ ನಟನ ಹಾಗೂ ನಟಿಯರು ತೋರುತ್ತಿರುವ ಮೌನವು ಇಬ್ಬಗೆ ನೀತಿಯನ್ನು ಪಾಲಿಸಿದಂತಿದೆ ಎಂದು ಕಿಡಿಕಾರಿದ್ದಾರೆ.

ಮಾಧ್ಯಮವೊಂದರ ಜೊತೆಗೆ ಮಾತನಾಡಿದ ಕಂಗನಾ ಅವರು, ಬಾಲಿವುಡ್ ಹಿರಿಯ ನಟನಾದ ನಸೀರುದ್ದೀನ್ ಶಾ ಅವರನ್ನು ನರಿ ಎಂದು ಕರೆದಿದ್ದಾರೆ. ಜೊತೆಗೆ ಬಾಲಿವುಡ್ ಸಿನಿಮಾರಂಗದಲ್ಲಿ ಯಾವಾಗಲೂ ಇಂತಹ ಮನೋಭಾವ ಇರುವವರನ್ನು ಕಾಣಬಹುದು. 'ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಯುತ್ತಿದ್ದ ವೇಳೆ, ನಮ್ಮ ಸಂಸತ್ ಸದಸ್ಯರ ಕಾರು ಪುಡಿ ಮಾಡಲಾಗಿತ್ತು, ನಿದ್ದೆ ಮಾಡಲಾಗದೆ, ಮನೆಗಳ ಬಳಿ ಭದ್ರತೆ ಕೇಳಿಕೊಳ್ಳಲಾಗಿತ್ತು. ಅಂತಹ ಪರಿಸ್ಥಿತಿ ಇದ್ದಾಗ, ಕೆಲ ಸೆಲಬ್ರಿಟಿಗಳು ಮೊಸಳೆ ಕಣ್ಣೀರು ಸುರಿಸುತ್ತಿದ್ದರು' ಎಂದು ಹೇಳಿದ್ದಾರೆ.

'ಆದರೆ, ಈಗ ಜಾರ್ಖಂಡ್‌ನಲ್ಲಿ ಮಕ್ಕಳ ಮೇಲೆ ನಡೆಯುತ್ತಿರುವ ದೌರ್ಜನ್ಯ ಜೆನ್ ಜಿಗಳ ಮೇಲಾಗುತ್ತಿರುವ ಸಮಸ್ಯೆ ಅಲ್ಲವೇ, ಜಂತರ್ ಮಂತರ್ ಪ್ರತಿಭಟನೆಗಳ ಬಗ್ಗೆ ಮೊಸಳೆ ಕಣ್ಣೀರು ಸುರಿಸಿದ ಚಲನಚಿತ್ರೋದ್ಯಮದ ಜನರು ಈಗ ಜಾರ್ಖಂಡ್ ಮಕ್ಕಳಿಗೂ ಅದೇ ಕಣ್ಣೀರು ಸುರಿಸಬೇಕು. ಆ ಮಕ್ಕಳೂ ಕೂಡ ಸಂಕಷ್ಟ ಎದುರಿಸುತ್ತಿದ್ದಾರೆ' ಎಂದು ಕಂಗನಾ ಮಾತನಾಡಿದ್ದಾರೆ.

ಸಿನಿಮಾಗಳಾಗಿರಲಿ, ಅವರ ಹೇಳಿಕೆಗಳಾಗಿರಲಿ ಅಥವಾ ಅವರ ಸಂದರ್ಶನಗಳಾಗಿರಲಿ, ಪಾಕಿಸ್ತಾನದ ಮೇಲಿನ ಆ ಪ್ರೇಮಪುರಾಣ ಯಾವಾಗ ಕೊನೆಗೊಳ್ಳುತ್ತದೆ. ಸದಾ ಪಾಕಿಸ್ತಾನದ ಬಗ್ಗೆಯೇ ವ್ಯಾಮೋಹ ಹೊಂದಿರುವಂತೆ ತೋರುತ್ತಿದೆ. ದೇಶ ವಿಭಜನೆಗೊಂಡು ಇಷ್ಟು ವರ್ಷಗಳಾದರೂ, ಈ ಪ್ರೇಮಕಥೆ ಯಾಕೆ ಅಂತ್ಯಗೊಳ್ಳುತ್ತಿಲ್ಲ ಎಂದು ನಾನು ತಿಳಿಯಲು ಬಯಸುತ್ತೇನೆ. ಬಾಲಿವುಡ್‌ನೊಂದಿಗೆ ಪಾಕಿಸ್ತಾನದ ಪ್ರೇಮಕಥೆ ಯಾವಾಗ ಕೊನೆಗೊಳ್ಳುತ್ತದೆ. ಇದಕ್ಕೆ ಅವರು ಉತ್ತರ ನೀಡಬೇಕು" ಎಂದಿದ್ದಾರೆ. ಬಾಲಿವುಡ್ ಅನೇಕ ಸೆಲೆಬ್ರಿಟಿಗಳು ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ವಿನಾಕಾರಣ ಟೀಕೆಗಳನ್ನು ಮಾಡುತ್ತಾರೆ ಮತ್ತು ಪಾಕಿಸ್ತಾನದ ವಿಷಯದಲ್ಲಿ ಹೆಚ್ಚು ಒಲವು ತೋರುತ್ತಾರೆ ಎಂದು ಕಂಗನಾ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಈ ಹಿಂದೆಯೂ ನಟ ನಸೀರುದ್ದೀನ್ ಶಾ ಅವರ ಹೇಳಿಕೆಗಳ ಕುರಿತು ಕಂಗನಾ ತೀವ್ರ ವಾಗ್ದಾಳಿ ನಡೆಸಿದ್ದರು.

# ಜಂತರ್-ರಾಂಚಿ ಪ್ರತಿಭಟನೆ ವೇಳೆ ಆಲ್‌ಗರಿದಮ್ ತಾರತಮ್ಯ

**ನವದೆಹಲಿ, ಆ.13:** ಸಾಮಾಜಿಕ ಜಾಲತಾಣಗಳು ಕೇವಲ ಸುದ್ದಿ ಹಂಚಿಕೊಳ್ಳುವ ವೇದಿಕೆಗಳಷ್ಟೇ ಆಗುಳಿದಿವೆಯೇ ಅಥವಾ ದೇಶದ ಚಳವಳಿಗಳ ಭವಿಷ್ಯ ನಿರ್ಧರಿಸುವ ಹಿನ್ನೆಲೆ ನಿರ್ದೇಶಕನಾಗಿ ಕೆಲಸ ಮಾಡುತ್ತಿವೆಯೇ... ಜಾರ್ಖಂಡ್ ವಿದ್ಯಾರ್ಥಿಗಳ ಹೋರಾಟ ಮತ್ತು ದೆಹಲಿಯ ಜಂತರ್ ಮಂತರ್ ಪ್ರತಿಭಟನೆಯನ್ನು ಇನ್ಸ್ಟಾಗ್ರಾಮ್ ನಡೆಸಿಕೊಂಡ ರೀತಿ ನೋಡಿದರೆ ಈ ಅನುಮಾನ ಬಲವಾಗುತ್ತದೆ. ಒಂದೇ ಸ್ವರೂಪದ ವಿದ್ಯಾರ್ಥಿ ಹೋರಾಟಗಳಾಗಿದ್ದರೂ, ದೆಹಲಿಯ ಪ್ರತಿಭಟನೆ ಇನ್ಸ್ಟಾಗ್ರಾಮ್ ಆಲ್ಗರಿದಮ್‌ನಲ್ಲಿ ಟ್ರೆಂಡಿಂಗ್ ಸೆನ್ಸೇಷನ್ ಆದರೆ, ಜಾರ್ಖಂಡ್‌ನ ರಕ್ತಸಿಕ್ತ ಲಾಠಿಚಾರ್ಜ್ ಡಿಜಿಟಲ್ ಜಗತ್ತಿನಲ್ಲಿ ಕಣ್ಮರೆಯಾಗಿದೆ.

ಎನ್‌ಡಿಟಿವಿಯ ಇಂಡಿಯಾ ಮ್ಯಾಟರ್ಸ್ ನಡೆಸಿದ ದತ್ತಾಂಶ ವಿಶ್ಲೇಷಣೆ, ಸೋಷಿಯಲ್ ಮೀಡಿಯಾ ಆಲ್ಗರಿದಮ್‌ನ ನೈಜ ಮುಖ ಮತ್ತು ಅದರ ಪ್ರಾದೇಶಿಕ ತಾರತಮ್ಯವನ್ನು ಬಿಚ್ಚಿಟ್ಟಿದೆ. ಡೇಟಾಬೀಂಗ್ಸ್ ಸಂಸ್ಥೆಯ ದತ್ತಾಂಶದ ಪ್ರಕಾರ, ದೆಹಲಿಯ ಜಂತರ್ ಮಂತರ್‌ನಲ್ಲಿ ನಡೆದ ವಿದ್ಯಾರ್ಥಿ ಪ್ರತಿಭಟನೆಯ ಸನ್ನಿವೇಶದಲ್ಲಿ ಬರೋಬ್ಬರಿ ಐದು ಸಾವಿರಕ್ಕೂ ಹೆಚ್ಚು ವಿಡಿಯೋಗಳು ಹಂಚಿಕೆಯಾಗಿದ್ದವು. ಆದರೆ ಜಾರ್ಖಂಡ್‌ನ ರಾಂಚಿಯಲ್ಲಿ ನಡೆದ ವಿದ್ಯಾರ್ಥಿ ಪ್ರತಿಭಟನೆ ಹಾಗೂ ಲಾಠಿಚಾರ್ಜ್ ಕುರಿತು ಬಂದಿದ್ದು ಕೇವಲ ಸಾವಿರದಷ್ಟು ಪೋಸ್ಟ್‌ಗಳು ಮಾತ್ರ.

ತಲುಪಿದ ವ್ಯಾಪ್ತಿಯಲ್ಲೂ ಬೃಹತ್ ವ್ಯತ್ಯಾಸ ಕಂಡುಬಂದಿದ್ದು, ದೆಹಲಿ ಪ್ರತಿಭಟನೆಯ ಪೋಸ್ಟ್‌ಗಳು ಇನ್ಸ್ಟಾಗ್ರಾಮ್‌ನಲ್ಲಿ ಬರೋಬ್ಬರಿ 1.8 ಕೋಟಿ ಜನರನ್ನು ತಲುಪಿದರೆ, ಜಾರ್ಖಂಡ್ ಪ್ರತಿಭಟನೆಯ ವೀಡಿಯೋಗಳು ತಲುಪಿದ್ದು ಕೇವಲ 6 ಲಕ್ಷ ಜನರನ್ನು ಮಾತ್ರ!. ಇಷ್ಟೇ ಅಲ್ಲದೆ, ಪ್ರಮುಖ ಪ್ರಭಾವಿಗಳು ಹಾಗೂ ಕ್ರಿಯೇಟರ್‌ಗಳು ಸಹ ದೆಹಲಿಯ ವಿಷಯಕ್ಕೇ ಹೆಚ್ಚಿನ ಪ್ರಾಶಸ್ತ್ಯ ನೀಡಿದ್ದರು. ಇನ್ಸ್ಟಾಗ್ರಾಮ್‌ನ ಟಾಪ್ 100 ಖಾತೆಗಳಲ್ಲಿ ಪ್ರತಿ ಮೂರರಲ್ಲಿ ಒಂದು ವೀಡಿಯೋ ದೆಹಲಿ ಪ್ರತಿಭಟನೆಯದ್ದಾಗಿತ್ತು. ಆದರೆ ಜಾರ್ಖಂಡ್ ವಿಷಯದಲ್ಲಿ ಅವರ ಪಾಲ್ಗೊಳ್ಳುವಿಕೆ ಶೇಕಡಾ ಮೂರಕ್ಕೆ ಸೀಮಿತವಾಗಿತ್ತು.

ದೆಹಲಿ ಪ್ರತಿಭಟನಾಕಾರರು ಟ್ರೆಂಡಿಂಗ್ ಆಡಿಯೋ ಮತ್ತು ಹ್ಯಾಶ್ಟ್ಯಾಗ್ ಬಳಸಿದ್ದರಿಂದ ಆಲ್ಗರಿದಮ್ ಅದನ್ನು ಸುಲಭವಾಗಿ ಪ್ರಚಾರ ಮಾಡಿತು. ಆದರೆ ರಾಂಚಿಯ ವಿದ್ಯಾರ್ಥಿ ಧ್ವನಿ ಈ ಡಿಜಿಟಲ್ ತಂತ್ರಗಳಿಗೆ ಹೊಂದಿಕೊಳ್ಳಲಾಗದೆ ಕಣ್ಮರೆಯಾಯಿತು.

ವರದಿ ಬಳಿಕ ಬಿಜೆಪಿ ನಾಯಕ ಅಮಿತ್ ಮಾಳವಿಯಾ ಮೆಟಾ ಸಂಸ್ಥೆಯ ನೀತಿಯನ್ನು ತೀವ್ರವಾಗಿ ಖಂಡಿಸಿದ್ದು, ರಾಜಧಾನಿಯಲ್ಲಿ ನಡೆಯುವ ಅಭಿಯಾನಗಳಿಗೆ ಆಲ್ಗರಿದಮ್ ಬೂಸ್ಟ್ ನೀಡಿ, ಜಾರ್ಖಂಡ್‌ನಂತಹ ರಾಜ್ಯಗಳ ನೈಜ ವಿದ್ಯಾರ್ಥಿ ಚಳವಳಿಗಳನ್ನು ಮುಚ್ಚಿಹಾಕಲಾಗುತ್ತಿದೆ ಎಂದು ಆರೋಪಿಸಿದ್ದಾರೆ. ಅಂತಿಮವಾಗಿ ಸೋಷಿಯಲ್ ಮೀಡಿಯಾ ಪ್ರಜಾಪ್ರಭುತ್ವದ ಮುಕ್ತ ವೇದಿಕೆಯಾಗಿದೆಯೇ ಅಥವಾ ಆಲ್ಗರಿದಮ್‌ಗಳೇ ದೇಶದ ಚರ್ಚೆಗಳನ್ನು ನಿಯಂತ್ರಿಸುತ್ತಿವೆಯೇ ಎಂಬ ದೊಡ್ಡ ಪ್ರಶ್ನೆ ಈಗ ಮೂಡಿದೆ.

# ನೀಟ್ ಹೋರಾಟದ ಬಳಿಕ 80 ಸಾವಿರ ನವ ಮತದಾರರಿಗೆ ಸಿಎಂ ಪತ್ರ



**ಜೈಪುರ, ಆ. 13:** ದೆಹಲಿಯ ಜಂತರ್ ಮಂತರ್‌ನಲ್ಲಿ 'ಜೆನ್ ಝಿ' ಯುವಪೀಳಿಗೆ ನಡೆಸಿದ ಬೃಹತ್ ಪ್ರತಿಭಟನೆ ಮತ್ತು ನೀಟ್ ಅಕ್ರಮಗಳ ವಿರುದ್ಧದ ಚಳುವಳಿ ನಂತರ ಯುವ ಮತದಾರರನ್ನು ಸೆಳೆಯಲು ಬಿಜೆಪಿ ಹೊಸ ರಾಜಕೀಯ ತಂತ್ರಕ್ಕೆ ಮುಂದಾಗಿದೆ. ರಾಜಸ್ಥಾನ ಸಿಎಂ ಭಜನ್ ಲಾಲ್ ಶರ್ಮಾ, ರಾಜ್ಯದಲ್ಲಿ 18 ವರ್ಷ ತುಂಬಿದ ಪ್ರತಿಯೊಬ್ಬ ಯುವಕ-ಯುವತಿಯರಿಗೆ ವೈಯಕ್ತಿಕವಾಗಿ ಹುಟ್ಟುಹಬ್ಬದ ಶುಭಾಶಯಗಳನ್ನು ಕೋರುತ್ತಾ ಮತದಾನದ ಜಾಗೃತಿ ಮೂಡಿಸಿದ್ದಾರೆ. ರಾಜಸ್ಥಾನ ಸರ್ಕಾರವು ಜುಲೈ ತಿಂಗಳಿನಿಂದ ಈ ವಿಶೇಷ ಯುವ ಜಾಗೃತಿ ಅಭಿಯಾನವನ್ನು ಆರಂಭಿಸಿದ್ದು, ಇಲ್ಲಿಯವರೆಗೆ 18ನೇ ವರ್ಷಕ್ಕೆ ಕಾಲಿಟ್ಟ 80,000 ಯುವಜನರಿಗೆ ಮುಖ್ಯಮಂತ್ರಿಗಳ ಕಚೇರಿಯಿಂದ ನೇರವಾಗಿ ಅಂಚೆ ಪತ್ರಗಳನ್ನು ಕಳುಹಿಸಲಾಗುತ್ತಿದೆ. ಹಿಂದಿ ಭಾಷೆಯಲ್ಲಿರುವ ಈ ಅಧಿಕೃತ ಪತ್ರದಲ್ಲಿ, ಯುವಕರಿಗೆ 18 ವರ್ಷ ತುಂಬಿದ್ದರೆ ಅವರಿಗೆ ಅಭಿನಂದನೆ ಸಲ್ಲಿಸಲಾಗುತ್ತದೆ. ಜೊತೆಗೆ ತಕ್ಷಣವೇ ಮತದಾರರ ಪಟ್ಟಿಗೆ ಹೆಸರು ಸೇರ್ಪಡೆಗೊಳಿಸಿ, ಚುನಾವಣಾ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಕೋರಲಾಗುತ್ತಿದೆ. ಸಿಎಂ ಕಚೇರಿಯಿಂದ ಕಳುಹಿಸಲಾಗುತ್ತಿರುವ ಈ ವಿಶೇಷ ಪತ್ರದಲ್ಲಿ ಪ್ರಧಾನಿ ಮೋದಿಯವರ ಸಂದೇಶವನ್ನು ಉಲ್ಲೇಖಿಸಲಾಗಿದೆ. "ಸಮರ್ಥ ಹಾಗೂ ಸಶಕ್ತ ಯುವಜನತೆಯೇ ಸಮೃದ್ಧ ದೇಶದ ಬುನಾದಿ" ಎಂಬ ಪ್ರಧಾನಿಯವರ ಮಾತನ್ನು ಉಲ್ಲೇಖಿಸಿರುವ ಸಿಎಂ ಶರ್ಮಾ, 'ವಿಕಸಿತ ಭಾರತ' ಹಾಗೂ 'ವಿಕಸಿತ ರಾಜಸ್ಥಾನ' ಕಟ್ಟಲು ನವ ಮತದಾರರ ಆಲೋಚನೆ ಮತ್ತು ಶಕ್ತಿ ಅತ್ಯಗತ್ಯ ಎಂದಿದ್ದಾರೆ.

ರಾಜಸ್ಥಾನ ಸರ್ಕಾರದ ಅಧಿಕೃತ ಲಾಂಛನ, ಪ್ರಧಾನಿ ಮೋದಿ ಮತ್ತು ಸಿಎಂ ಭಜನ್‌ಲಾಲ್ ಶರ್ಮಾ ಅವರ ಭಾವಚಿತ್ರವಿರುವ ಈ ಪತ್ರದಲ್ಲಿ, ಮುಂದಿನ ದಿನಗಳಲ್ಲಿ ನವ ಮತದಾರರನ್ನು ಖುದ್ದಾಗಿ ಭೇಟಿಯಾಗುವುದಾಗಿಯೂ ಮುಖ್ಯಮಂತ್ರಿಗಳು ಭರವಸೆ ನೀಡಿದ್ದಾರೆ.ಕೆಲವು ದಿನಗಳ ಹಿಂದಷ್ಟೇ ದೆಹಲಿಯ ಜಂತರ್ ಮಂತರ್‌ನಲ್ಲಿ ನೀಟ್-ಯುಜಿ ಪರೀಕ್ಷಾ ಅಕ್ರಮ ಹಾಗೂ ಪ್ರಶ್ನೆಪತ್ರಿಕೆ ಸೋರಿಕೆ ಖಂಡಿಸಿ ಸಾವಿರಾರು ವಿದ್ಯಾರ್ಥಿಗಳು ಸೋಶಿಯಲ್ ಮೀಡಿಯಾ, ಮೀಮ್ಸ್ ಮತ್ತು ರೀಲ್ಸ್‌ಗಳ ಮೂಲಕ ದೇಶಾದ್ಯಂತ ಸದ್ದು ಮಾಡಿದ್ದರು. ಆದಾಗ್ಯೂ, ಯುವಕರ ತೀವ್ರ ಆಕ್ರೋಶದ ಪರಿಣಾಮ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಬೇಕಾಯಿತು. ವಿದ್ಯಾರ್ಥಿಗಳ ಪ್ರತಿಭಟನೆ ತೀವ್ರಗೊಳ್ಳುತ್ತಿದ್ದಂತೆ ಪ್ರಧಾನಿ ಮೋದಿ ಸ್ವತಃ ತಡರಾತ್ರಿ ಸೆಲ್ಫಿ ವಿಡಿಯೋ ಹಂಚಿಕೊಂಡು, ಯುವಕರನ್ನು 'ಸ್ನೇಹಿತರು' ಎಂದು ಸಂಬೋಧಿಸಿ, ಪೇಪರ್ ಲೀಕ್ ವಿರುದ್ಧ ಕಠಿಣ ಕಾನೂನು ತೆಗೆದುಕೊಳ್ಳುವುದಾಗಿ ಭರವಸೆ ನೀಡಿದ್ದರು. ದೇಶದಲ್ಲಿ ನಿರ್ಣಾಯಕ ಶಕ್ತಿಯಾಗುತ್ತಿರುವ ಯುವ ಪೀಳಿಗೆಯನ್ನು ತನ್ನತ್ತ ಸೆಳೆದುಕೊಳ್ಳಲು ಬಿಜೆಪಿ ಈ 'ಪರ್ಸನಲ್ ಟಚ್' ತಂತ್ರ ರೂಪಿಸಿದೆ.

# ಚಿನ್ನದ ಬೆಲೆ ಮತ್ತೆ ಏರಿಕೆ: ಅಪರಂಜಿ ಚಿನ್ನ ಗ್ರಾಂಗೆ 15513 ರೂ.



**ನವದೆಹಲಿ, ಆ.13:** ದೇಶದಲ್ಲಿ ಚಿನ್ನದ ಬೆಲೆ ಮತ್ತೆ ಏರಿಕೆ ಕಂಡಿದೆ. ಇಂದು (ಆ.13) 24 ಕ್ಯಾರೆಟ್ ಚಿನ್ನದ ಬೆಲೆ ಪ್ರತಿ ಗ್ರಾಂಗೆ 15,513 ರೂ. ಇದ್ದರೆ, 22 ಕ್ಯಾರೆಟ್ ಚಿನ್ನದ ದರ 14,220 ರೂ. ಹಾಗೂ 18 ಕ್ಯಾರೆಟ್ ಚಿನ್ನದ ಬೆಲೆ 11,635 ರೂ.ಗೆ ತಲುಪಿದೆ ಎಂದು ವರದಿಯಾಗಿದೆ. ಆಗಸ್ಟ್ 12ಕ್ಕೆ ಹೋಲಿಸಿದರೆ 24 ಕ್ಯಾರೆಟ್ ಚಿನ್ನದ ದರ ಪ್ರತಿ ಗ್ರಾಂಗೆ 27 ರೂ. ಏರಿಕೆಯಾಗಿದೆ. ಇದೇ ವೇಳೆ 22 ಕ್ಯಾರೆಟ್ ಚಿನ್ನದ ಬೆಲೆಯಲ್ಲಿ 25 ಹಾಗೂ 18 ಕ್ಯಾರೆಟ್ ಚಿನ್ನದ ದರದಲ್ಲಿ 21 ರೂ.ಹೆಚ್ಚಳವಾಗಿದೆ.

ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಉಂಟಾಗುತ್ತಿರುವ ಏರಿಳಿತ, ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷ ಹಾಗೂ ಜಾಗತಿಕ ಆರ್ಥಿಕ ಅನಿಶ್ಚಿತತೆಯ ಪರಿಣಾಮವಾಗಿ ಚಿನ್ನದ ಬೆಲೆಯಲ್ಲಿ ದಿನದಿಂದ ದಿನಕ್ಕೆ ಬದಲಾವಣೆ ಕಂಡುಬರುತ್ತಿದೆ. ಸುರಕ್ಷಿತ ಹೂಡಿಕೆಯ ಆಯ್ಕೆಯಾಗಿ ಹೂಡಿಕೆದಾರರು ಚಿನ್ನದತ್ತ ಮುಖ ಮಾಡುತ್ತಿರುವುದು ಕೂಡ ಬೆಲೆ ಏರಿಕೆಗೆ ಪ್ರಮುಖ ಕಾರಣವಾಗಿದೆ.

ಪಶ್ಚಿಮ ಏಷ್ಯಾದಲ್ಲಿ ಮುಂದುವರಿದಿರುವ ಉದ್ವಿಗ್ನತೆ ಜಾಗತಿಕ ಮಾರುಕಟ್ಟೆಗಳ ಮೇಲೆ ಪರಿಣಾಮ ಬೀರುತ್ತಿದೆ. ಹೋರ್ಮುಜ್ ಜಲಸಂಧಿಯ ಮೇಲಿನ ಅಮೆರಿಕದ ಹಿಡಿತದ ಕುರಿತು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತೊಮ್ಮೆ ಹೇಳಿಕೆ ನೀಡಿದ್ದು, ಇರಾನ್‌ನೊಂದಿಗಿನ ಸಂಘರ್ಷ ತೀವ್ರಗೊಂಡಿರುವ ಹಿನ್ನೆಲೆಯಲ್ಲಿ ಈ ಪ್ರಮುಖ ಜಲಮಾರ್ಗದಲ್ಲಿ ಹಡಗುಗಳ ಸಂಚಾರವೂ ಕುಸಿದಿದೆ. ಇತ್ತ, ಅಮೆರಿಕದ ವಿರುದ್ಧದ ಪ್ರತಿರೋಧವನ್ನು ಮುಂದುವರಿಸುವುದಾಗಿ ಇರಾನ್ ಸ್ಪಷ್ಟಪಡಿಸಿದೆ. ಇಸ್ರೇಲ್‌ನ ಸೇನಾ ಕಾರ್ಯಾಚರಣೆಗಳಿಗೆ ಫ್ರಾನ್ಸ್ ಸೇರಿದಂತೆ ಹಲವು ಪಾಶ್ಚಿಮಾತ್ಯ ರಾಷ್ಟ್ರಗಳು ನೀಡುತ್ತಿರುವ ಬೆಂಬಲವನ್ನೂ ಇರಾನ್ನ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಟೀಕಿಸಿದ್ದಾರೆ.

ಪಶ್ಚಿಮ ಏಷ್ಯಾದ ಸಂಘರ್ಷದ ಪರಿಣಾಮ ಕಚ್ಚಾ ತೈಲದ ಬೆಲೆಯ ಮೇಲೂ ಒತ್ತಡ ಮುಂದುವರಿದಿದೆ. ಬ್ರೆಂಟ್ ಕಚ್ಚಾ ತೈಲದ ಬೆಲೆ ಬಾರಲ್‌ಗೆ 87.80 ಡಾಲರ್ ಹಾಗೂ ಡಬ್ಲ್ಯೂಟಿಐ ಕಚ್ಚಾ ತೈಲದ ಬೆಲೆ ಸುಮಾರು 82.22 ಡಾಲರ್ ಮಟ್ಟದಲ್ಲಿದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚುತ್ತಿರುವ ಭೌಗೋಳಿಕ ರಾಜಕೀಯ ಉದ್ವಿಗ್ನತೆ ಮತ್ತು ಮಾರುಕಟ್ಟೆಯಲ್ಲಿನ ಅನಿಶ್ಚಿತತೆಯಿಂದ ಹೂಡಿಕೆದಾರರು ಸುರಕ್ಷಿತ ಹೂಡಿಕೆಯಾಗಿ ಚಿನ್ನದತ್ತ ಹೆಚ್ಚಿನ ಆಸಕ್ತಿ ತೋರುತ್ತಿದ್ದಾರೆ. ಇದರ ಪರಿಣಾಮವಾಗಿ ಜಾಗತಿಕ ಚಿನ್ನದ ಬೆಲೆಯಲ್ಲಿ ಏರಿಳಿತ ಮುಂದುವರಿದಿದ್ದು, ಅದರ ನೇರ ಪರಿಣಾಮ ಭಾರತದ ಮಾರುಕಟ್ಟೆಯ ಮೇಲೂ ಬೀರುತ್ತಿದೆ.

ದೇಶೀಯ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆ ಅಂತಾರಾಷ್ಟ್ರೀಯ ಸ್ಪಾಟ್ ದರ, ಆಮದು ಸುಂಕ, ರೂಪಾಯಿ-ಡಾಲರ್ ವಿನಿಮಯ ದರ ಸೇರಿದಂತೆ ಹಲವು ಅಂಶಗಳ ಮೇಲೆ ಅವಲಂಬಿತವಾಗಿರುವುದರಿಂದ ಪ್ರತಿದಿನ ದರದಲ್ಲಿ ಬದಲಾವಣೆ ಕಂಡುಬರುತ್ತದೆ.

# 4ನೇ ಹೆರಿಗೆಗೆ ಮಾತೃತ್ವ ರಜೆ ನೀಡಲು ಕೋರ್ಟ್ ನಕಾರ: ಉತ್ತರ ಪ್ರದೇಶದ ಮಹಿಳಾ ನೌಕರರ ಅರ್ಜಿ ವಜಾಗೊಳಿಸಿದ ನ್ಯಾಯಾಲಯ



**ಅಲಹಾಬಾದ್, ಆ.13:** ನಾಲ್ಕನೇ ಮಗುವಿನ ಹೆರಿಗೆಗಾಗಿ ಆರು ತಿಂಗಳ ಮಾತೃತ್ವ ರಜೆ ನೀಡುವಂತೆ ಕೋರಿ ಉತ್ತರ ಪ್ರದೇಶದ ಮಹಿಳಾ ಸರ್ಕಾರಿ ನೌಕರರೊಬ್ಬರು ಸಲ್ಲಿಸಿದ್ದ ಅರ್ಜಿಯನ್ನು ಅಲಹಾಬಾದ್ ಹೈಕೋರ್ಟ್ ವಜಾಗೊಳಿಸಿದೆ.


ನ್ಯಾಯಮೂರ್ತಿ ಮಂಜು ರಾಣಿ ಚೌಹಾಣ್ ಅವರು ಈ ಆದೇಶ ಹೊರಡಿಸಿದ್ದಾರೆ. ನಾಲ್ಕನೇ ಮಗುವಿನ ಹೆರಿಗೆಗೆ ಮಾತೃತ್ವ ರಜೆ ನೀಡುವಂತೆ ಮಾಡಿದ್ದ ಮನವಿಯನ್ನು ಜೂನ್ 19ರಂದು ಸರ್ಕಾರಿ ಅಧಿಕಾರಿಗಳು ತಿರಸ್ಕರಿಸಿದ್ದರು. ಇದನ್ನು ಪ್ರಶ್ನಿಸಿ ಮಹಿಳೆ ಹೈಕೋರ್ಟ್ ಮೆಟ್ಟಿಲೇರಿದ್ದರು. ತಮ್ಮ ಮೊದಲ ಮೂರು ಮಕ್ಕಳ ಜನನದ ಸಂದರ್ಭದಲ್ಲಿ ತಾವು ಮಾತೃತ್ವ ರಜೆ ಪಡೆದಿರಲಿಲ್ಲ. ಹೀಗಾಗಿ ಇದೇ ಮೊದಲ ಬಾರಿಗೆ ಮಾತೃತ್ವ ರಜೆ ಪಡೆಯುತ್ತಿರುವುದರಿಂದ ನಾಲ್ಕನೇ ಮಗುವಿಗೆ ರಜೆ ನೀಡಬೇಕು ಎಂದು ಅರ್ಜಿದಾರರು ನ್ಯಾಯಾಲಯದಲ್ಲಿ ವಾದಿಸಿದ್ದರು.

ಆದರೆ, ಸರ್ಕಾರ ಇದನ್ನು ವಿರೋಧಿಸಿದ್ದು, ಹಣಕಾಸು ಕೈಪಿಡಿಯಲ್ಲಿರುವ ನಿಯಮಗಳನ್ನು ಉಲ್ಲೇಖಿಸಿದೆ. ಅದರಂತೆ, ಖಾಯಂ ಅಥವಾ ತಾತ್ಕಾಲಿಕ ಮಹಿಳಾ ಸರ್ಕಾರಿ ನೌಕರರಿಗೆ ಗರಿಷ್ಠ ಎರಡು ಸಂದರ್ಭಗಳಲ್ಲಿ ಮಾತ್ರ ಮಾತೃತ್ವ ರಜೆ ಪಡೆಯಲು ಅವಕಾಶವಿದೆ. ಅಲ್ಲದೆ, ಇಬ್ಬರು ಅಥವಾ ಅದಕ್ಕಿಂತ ಹೆಚ್ಚು ಜೀವಂತ ಮಕ್ಕಳನ್ನು ಹೊಂದಿರುವ ಮಹಿಳಾ ಸರ್ಕಾರಿ ನೌಕರರಿಗೆ ಮಾತೃತ್ವ ರಜೆ ನೀಡುವಂತಿಲ್ಲ ಎಂದು ನಿಯಮದಲ್ಲಿ ಸ್ಪಷ್ಟಪಡಿಸಲಾಗಿದೆ ಎಂದು ಸರ್ಕಾರ ನ್ಯಾಯಾಲಯಕ್ಕೆ ತಿಳಿಸಿತು.

ಈ ವಾದವನ್ನು ಪರಿಗಣಿಸಿದ ನ್ಯಾಯಾಲಯ, ಅರ್ಜಿದಾರರ ನಾಲ್ಕನೇ ಮಗುವಿಗೆ ಮಾತೃತ್ವ ರಜೆ ನಿರಾಕರಿಸಿರುವ ಸರ್ಕಾರಿ ಅಧಿಕಾರಿಗಳ ನಿರ್ಧಾರದಲ್ಲಿ ಮಧ್ಯಪ್ರವೇಶಿಸಲು ಯಾವುದೇ ಕಾರಣವಿಲ್ಲ ಎಂದು ಹೇಳಿ ಅರ್ಜಿಯನ್ನು ವಜಾಗೊಳಿಸಿತು. ಇದೇ ವೇಳೆ, ಪ್ರಕರಣದ ದಾಖಲೆಗಳಿಗೆ ಸಂಬಂಧಿಸಿದ ಮತ್ತೊಂದು ವಿಚಾರದ ಬಗ್ಗೆಯೂ ಹೈಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ. ಅರ್ಜಿಯೊಂದಿಗೆ ಮೂಲ ದಾಖಲೆಗಳ ಫೋಟೋಕಾಪಿಗಳನ್ನು ಸಲ್ಲಿಸುವ ಬದಲು ಕೇವಲ ಟೈಪ್ ಮಾಡಲಾದ ಪ್ರತಿಗಳನ್ನು ಲಗತ್ತಿಸಲಾಗಿತ್ತು.

ಟೈಪ್ ಮಾಡಿದ ದಾಖಲೆಗಳಲ್ಲಿ ಮುದ್ರಣ ಅಥವಾ ಟೈಪಿಂಗ್ ದೋಷಗಳು ಇರುವ ಸಾಧ್ಯತೆಯಿದ್ದು, ಅವುಗಳನ್ನು ಮೂಲ ದಾಖಲೆಗಳೊಂದಿಗೆ ಪರಿಶೀಲಿಸಬೇಕಾಗುತ್ತದೆ. ಹೀಗಾಗಿ ಇಂತಹ ಪ್ರತಿಗಳ ಆಧಾರದ ಮೇಲೆ ಪ್ರಕರಣದ ವಿಚಾರಗಳನ್ನು ನಿರ್ಧರಿಸುವುದು ಕಷ್ಟ ಎಂದು ನ್ಯಾಯಾಲಯ ತಿಳಿಸಿದೆ. ಮುಂದೆ ಇಂತಹ ಪ್ರಕರಣಗಳಲ್ಲಿ ದಾಖಲೆಗಳ ಸೂಕ್ತ ಪ್ರತಿಗಳನ್ನು ಸಲ್ಲಿಸುವಂತೆ ನೋಡಿಕೊಳ್ಳಬೇಕು ಎಂದು ಹೈಕೋರ್ಟ್‌ನ ವರದಿ ವಿಭಾಗಕ್ಕೆ ಸೂಚಿಸಿದೆ. ಮೂಲ ದಾಖಲೆಗಳ ಸರಿಯಾದ ಫೋಟೋಕಾಪಿಗಳನ್ನು ಅರ್ಜಿಯೊಂದಿಗೆ ಕಡ್ಡಾಯವಾಗಿ ಲಗತ್ತಿಸಿರುವುದನ್ನು ಖಚಿತಪಡಿಸಿಕೊಳ್ಳಬೇಕು ಎಂದು ನಿರ್ದೇಶನ ನೀಡಿದೆ. ಅರ್ಜಿದಾರರ ಪರ ವಕೀಲೆ ಅಂಚಲ್ ಓಜಾ ವಾದ ಮಂಡಿಸಿದರೆ, ಉತ್ತರ ಪ್ರದೇಶ ಸರ್ಕಾರದ ಪರ ಹೆಚ್ಚುವರಿ ಮುಖ್ಯ ಸ್ಥಾಯಿ ವಕೀಲೆ ಅನುರಾಧಾ ಸುಂದರಂ ಹಾಜರಾಗಿದ್ದರು. ಇತರೆ ಪ್ರತಿವಾದಿಗಳ ಪರ ವಕೀಲ ನಾಗೇಂದ್ರ ಕುಮಾರ್ ಪಾಂಡೆ ವಾದ ಮಂಡಿಸಿದರು.

# ಚಾಟ್ ಜಿಪಿಟಿ ಬಳಸಿ ತಾಯಿ, ತಮ್ಮನ ಹತ್ಯೆ



**ನವದೆಹಲಿ, ಆ.13:** ಅಮೆರಿಕದ ಮೆಸಾಸ್ಯುಯೇಟ್ಸ್‌ನಲ್ಲಿ ಭಾರತೀಯ ಮೂಲದ ಯುವಕನೊಬ್ಬ ಎಐ ಬಳಸಿ ತನ್ನ ತಾಯಿ ಹಾಗೂ ಅಪ್ರಾಪ್ತ ವಯಸ್ಸಿನ ತಮ್ಮನನ್ನು ಹತ್ಯೆ ಮಾಡಿರುವ ಆರೋಪ ಕೇಳಿಬಂದಿದೆ. ಕುಟುಂಬದ ಇಬ್ಬರನ್ನು ಕೊಲೆಗೈದ ಬಳಿಕ ಆರೋಪಿ ಪರಾರಿಯಾಗಿದ್ದು, ಪೊಲೀಸರು ಆತನನ್ನು ಕಾರಿನ ಸಮೇತ ವಶಕ್ಕೆ ಪಡೆದಿದ್ದಾರೆ. ತನಿಖೆ ವೇಳೆ ಆತ ಇಂಟರ್ನೆಟ್ ಹಾಗೂ ಚಾಟ್ ಜಿಪಿಟಿಯನ್ನು ಬಳಸಿದ್ದ ಎಂಬ ಮಾಹಿತಿ ಹೊರಬಂದಿದೆ.

ಬೋಸ್ಟನ್‌ನಿಂದ ಸುಮಾರು 48 ಕಿಲೋಮೀಟರ್ ದೂರದಲ್ಲಿರುವ ಆಕ್ಟನ್‌ನ ಮಾರ್ತಾ ಲೇನ್‌ನಲ್ಲಿರುವ ನಿವಾಸದಲ್ಲಿ ಆಗಸ್ಟ್ 11ರಂದು ಈ ದುರ್ಘಟನೆ ನಡೆದಿದೆ. ಆಕ್ಟನ್ ನಿವಾಸಿ ಅರ್ಜುನ್ ಅರವಿಂದ್ ಆರೋಪಿಯಾಗಿದ್ದು, ಆತನ ತಾಯಿ ಸುಧಾ ವೆಂಕಟೇಶನ್ (45) ಹಾಗೂ ತಮ್ಮ ಸಿದ್ಧಾರ್ಥ್

ಅರವಿಂದ್ (14) ಮೃತಪಟ್ಟವರು. ಪೊಲೀಸರ ಪ್ರಕಾರ, ಆಕ್ಟನ್‌ನ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದ ಅರ್ಜುನ್ ಮನೆಯಲ್ಲೇ ತನ್ನ ತಾಯಿ ಮತ್ತು ತಮ್ಮನ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ್ದಾನೆ.

ಇಬ್ಬರೂ ಮೃತಪಟ್ಟ ಬಳಿಕ ಆತ ತಾಯಿಯ ಕಾರನ್ನು ತೆಗೆದುಕೊಂಡು ಅಲ್ಲಿಂದ ಪರಾರಿಯಾಗಿದ್ದಾನೆ ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ. ಸಂಜೆ ಸುಮಾರು 6.30ರ ವೇಳೆಗೆ ಟ್ಯೂಷನ್ ಶಿಕ್ಷಕರೊಬ್ಬರು ಮನೆಗೆ ಬಂದಾಗ ಬಾಗಿಲು ತೆರೆಯಲಿಲ್ಲ. ಅನುಮಾನಗೊಂಡ ಅವರು ಅರ್ಜುನ್‌ನ ತಂದೆಗೆ ಮಾಹಿತಿ ನೀಡಿದ್ದಾರೆ. ಕುಟುಂಬಸ್ಥರನ್ನು ಸಂಪರ್ಕಿಸಲು ನಡೆಸಿದ ಪ್ರಯತ್ನವೂ ವಿಫಲವಾದ ಬಳಿಕ ಅವರು ಪೊಲೀಸರಿಗೆ ಮಾಹಿತಿ ನೀಡಿದ್ದರು.

ಮಾಹಿತಿ ದೊರೆತ ತಕ್ಷಣ ಸ್ಥಳಕ್ಕೆ ತೆರಳಿದ ಆಕ್ಟನ್ ಪೊಲೀಸರು ಮನೆಯನ್ನು ಪರಿಶೀಲಿಸಿದಾಗ, ನೆಲಮಾಳಿಗೆಯಲ್ಲಿ ಸುಧಾ ವೆಂಕಟೇಶನ್ ಅವರ ಮೃತದೇಹ ಹಾಗೂ ಮೊದಲ ಮಹಡಿಯಲ್ಲಿ ಸಿದ್ಧಾರ್ಥ್ ಅವರ ಮೃತದೇಹ ಪತ್ತೆಯಾಗಿದೆ. ಇಬ್ಬರ ದೇಹಗಳ ಮೇಲೂ ಗಾಯದ ಗುರುತುಗಳು ಕಂಡುಬಂದಿದ್ದವು ಎಂದು ಪೊಲೀಸರು ತಿಳಿಸಿದ್ದಾರೆ.

ಈ ನಡುವೆ ಘಟನೆ ಬಳಿಕ ಅರ್ಜುನ್ ನಾಪತ್ತೆಯಾಗಿದ್ದರಿಂದ ಆತನಿಗಾಗಿ ಪೊಲೀಸರು ವ್ಯಾಪಕ ಶೋಧ ನಡೆಸಿದ್ದರು. ಬುಧವಾರ ಮುಂಜಾನೆ ವೇಲ್ಯಾಂಡ್‌ನ ಪಾರ್ಕಿಂಗ್ ಪ್ರದೇಶವೊಂದರಲ್ಲಿ ತಾಯಿಯ ಕಾರು ಪತ್ತೆಯಾಗಿದ್ದು, ಅದರೊಳಗಿದ್ದ ಅರ್ಜುನ್‌ನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ತನಿಖೆಯ ಮತ್ತೊಂದು ಪ್ರಮುಖ ಅಂಶವೆಂದರೆ, ಕುಟುಂಬದ ಸದಸ್ಯರನ್ನು ಹತ್ಯೆ ಮಾಡುವ ಮೊದಲು ಅರ್ಜುನ್ ಇಂಟರ್ನೆಟ್‌ನಲ್ಲಿ ಮಾಹಿತಿ ಹುಡುಕಿದ್ದ ಎನ್ನುವುದು. ಇದೇ ವೇಳೆ ಆತ ಚಾಟ್‌ಜಿಪಿಟಿಯನ್ನೂ ಬಳಸಿದ್ದ ಎಂಬ ಮಾಹಿತಿ ತನಿಖಾಧಿಕಾರಿಗಳಿಗೆ ಲಭ್ಯವಾಗಿದೆ ಎಂದು ವರದಿಯಾಗಿದೆ. ಸದ್ಯ ಅರ್ಜುನ್ ವಿರುದ್ಧ ಎರಡು ಕೊಲೆ ಪ್ರಕರಣಗಳು ಸೇರಿದಂತೆ ವಿವಿಧ ಆರೋಪಗಳಡಿ ಪ್ರಕರಣ ದಾಖಲಿಸಲಾಗಿದೆ. ಆತನನ್ನು ಸ್ಥಳೀಯ ನ್ಯಾಯಾಲಯದ ಮುಂದೆ ಹಾಜರುಪಡಿಸಿ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ.

# ಪೊಲೀಸ್ ಠಾಣೆಯಲ್ಲಿ 5ನೇ ತರಗತಿ ಬಾಲಕನ ಹುಟ್ಟುಹಬ್ಬ ಆಚರಣೆ



**ನವದೆಹಲಿ, ಆ.13:** ಇಲ್ಲಿನ ಬಂಕರ್ ಕಾಲೋನಿಯ 9 ವರ್ಷದ ಬಾಲಕ ತನ್ನ ಹುಟ್ಟುಹಬ್ಬವನ್ನು ಪೊಲೀಸ್ ಠಾಣೆಯಲ್ಲೇ ಆಚರಿಸಿಕೊಳ್ಳಬೇಕು ಎಂಬ ಆಸೆ ವ್ಯಕ್ತಪಡಿಸಿದ. ಬಾಲಕನ ಕನಸನ್ನು ಗೌರವಿಸಿದ ನವದೆಹಲಿಯ 'ಭಾರತ್ ನಗರ ಪೊಲೀಸ್ ಠಾಣೆ'ಯ ಸಿಬ್ಬಂದಿ, ಆತನ ವಿಶೇಷ ದಿನವನ್ನು ನಿಜಕ್ಕೂ ನೆನಪಿನಲ್ಲಿ ಉಳಿಯುವಂತೆ ಸಂಭ್ರಮದಿಂದ ಆಚರಿಸಿದ್ದಾರೆ.

ಠಾಣೆಯಲ್ಲಿ ಸಮವಸ್ತ್ರ ಧರಿಸಿದ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯ ನಡುವೆ ನಿಂತು ಕೇಕ್ ಕತ್ತರಿಸಿದ ಆಯುಷ್, ಸೀಮಿತ ಗಡಿಗಳನ್ನು ಮರೆತು ಖುಷಿ ಮತ್ತು ಅತಿಯಾದ ಉತ್ಸಾಹದಿಂದ ತನ್ನ ಹುಟ್ಟುಹಬ್ಬವನ್ನು ಆಚರಿಸಿಕೊಂಡನು. ದಿನವಿಡೀ ಅಪರಾಧ, ತನಿಖೆ ಮತ್ತು ಕರ್ತವ್ಯದ ಒತ್ತಡದಲ್ಲೇ ಕಾಲಕಳೆಯುವ ಪೊಲೀಸರು, ಮಗುವಿನ ಸಣ್ಣ ಆಸೆಯನ್ನು ಈಡೇರಿಸಲು ಒಂದಾಗಿ ನಿಂತಿದ್ದು, ಈ ನಡೆ ಪೊಲೀಸ್ ಇಲಾಖೆಯ ಅತ್ಯಂತ ಮಾನವೀಯ, ಮಕ್ಕಳ ಸ್ನೇಹಿ ಹಾಗೂ ಕಾಳಜಿಯುಕ್ತ ಮುಖವನ್ನು ಎತ್ತಿ ತೋರಿಸಿದೆ. ಸಾಮಾನ್ಯವಾಗಿ ಸಾರ್ವಜನಿಕರು ಮತ್ತು ಮಕ್ಕಳು ತಲುಪಲು ಹಿಂಜರಿಯುವ ಪೊಲೀಸ್ ಠಾಣೆಯು ಅಂದು ಆಯುಷ್ಗೆ ಅತ್ಯಂತ ಸಂತಸ ಮತ್ತು ಭದ್ರತೆ ನೀಡಿದ ಸ್ಥಳವಾಗಿ ಮಾರ್ಪಟ್ಟಿತ್ತು. ಪೊಲೀಸರು ಮತ್ತು ಮಕ್ಕಳ ನಡುವಿನ ನಂಬಿಕೆ, ಭಯಮುಕ್ತ ವಾತಾವರಣ ಹಾಗೂ ಆತ್ಮೀಯತೆಯ ಬಂಧವನ್ನು ಬಲಪಡಿಸಿದ ಈ ಅಪರೂಪದ ಘಟನೆ, ಬಾಲಕ ಆಯುಷ್‌ಗೆ ತನ್ನ ಜೀವನಪೂರ್ತಿ ನೆನಪಿನಲ್ಲಿ ಇಟ್ಟುಕೊಳ್ಳುವಂತಹ ಸುಂದರ ಸಿಹಿನೆನಪನ್ನು ಕಟ್ಟಿಕೊಟ್ಟಿದೆ. ದೆಹಲಿ ಪೊಲೀಸರ ಈ ಭಾವನಾತ್ಮಕ ಹಾಗೂ ಸ್ನೇಹಪರ ಕಾರ್ಯಕ್ಕೆ ಜಾಲತಾಣಗಳಲ್ಲಿ ವ್ಯಾಪಕ ಶ್ಲಾಘನೆ ವ್ಯಕ್ತವಾಗುತ್ತಿದೆ.

# ಗುಜರಾತ್ ಬಿಲ್ಲವರ ಸಂಘ ಬರೋಡ ಶಾಖೆಯಿಂದ ಆಟಿಡೊಂಜಿ ದಿನ




**ಮುಂಬಯಿ, ಆ.12:** ಗುಜರಾತ್ ಬಿಲ್ಲವರ ಸಂಘ, ವಡೋದರ (ಬರೋಡ) ಶಾಖೆಯ ವತಿಯಿಂದ, ನಮ್ಮ ಸಂಘದ ಗೌರವಾಧ್ಯಕ್ಷ ದಯಾನಂದ ಬೋಂಟ್ರಾ ಅವರ ಮಾರ್ಗದರ್ಶನದಲ್ಲಿ ಕಳೆದ ರವಿವಾರ ಆಟಿಡೊಂಜಿ ದಿನ ಕಾರ್ಯಕ್ರಮವನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಂಘದ ಪದಾಧಿಕಾರಿಗಳು, ಸದಸ್ಯರು ಹಾಗೂ ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

### ಸರ್ಕಾರ ತಕ್ಷಣವೇ ರೈತರ ನೆರವಿಗೆ ಧಾವಿಸಬೇಕು: ಮಾಜಿ ಸಚಿವ ಆರಗ ಜ್ಞಾನೇಂದ್ರ ಒತ್ತಾಯ

## ಗುಟ್ಕಾ, ಪಾನ್‌ಮಸಾಲ ಉತ್ಪನ್ನಗಳ ಮೇಲೆ ನಿಷೇಧ, ಅಡಕೆ ಬೆಳೆಗಾರರಲ್ಲಿ ಹೆಚ್ಚಿದ ಆತಂಕ

**ಬೆಂಗಳೂರು, ಆ.13:** ರಾಜ್ಯ ಸರ್ಕಾರವು ಅಡಕೆ ಬಳಸಿ ತಯಾರಿಸುವ ಗುಟ್ಕಾ ಹಾಗೂ ಪಾನ್ ಮಸಾಲ ಉತ್ಪನ್ನಗಳ ಮೇಲೆ ನಿಷೇಧ ಹೇರಲು ಮುಂದಾಗಿರುವುದು ರಾಜ್ಯದ ಅಡಕೆ ಬೆಳೆಗಾರರಲ್ಲಿ ತೀವ್ರ ಕಳವಳ ಮೂಡಿಸಿದೆ. ಈ ನಿರ್ಧಾರದಿಂದ ಅಡಕೆ ಮಾರುಕಟ್ಟೆ ಕುಸಿಯುವ ಭೀತಿ ಎದುರಾಗಿದ್ದು, ಸರ್ಕಾರ ತಕ್ಷಣವೇ ರೈತರ ನೆರವಿಗೆ ಧಾವಿಸಬೇಕು ಎಂದು ಮಾಜಿ ಸಚಿವ ಹಾಗೂ ಶಾಸಕ ಆರಗ ಜ್ಞಾನೇಂದ್ರ ಒತ್ತಾಯಿಸಿದ್ದಾರೆ.

ದೇಶದಲ್ಲಿ ಉತ್ಪಾದನೆಯಾಗುವ ಒಟ್ಟು ಅಡಕೆಯಲ್ಲಿ ಶೇಕಡಾ 60ಕ್ಕಿಂತ ಹೆಚ್ಚಿನ ಪಾಲು ಕರ್ನಾಟಕದ್ದೇ ಆಗಿದೆ. ರಾಜ್ಯದ ಸುಮಾರು 12ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ಅಡಕೆ ಬೆಳೆಯಲಾಗುತ್ತಿದ್ದು, 5 ಲಕ್ಷಕ್ಕೂ ಅಧಿಕ ಕುಟುಂಬಗಳು ನೇರವಾಗಿ ಹಾಗೂ 10 ಲಕ್ಷಕ್ಕೂ ಹೆಚ್ಚು ಕುಟುಂಬಗಳು ಪರೋಕ್ಷವಾಗಿ ಈ ಉದ್ಯಮವನ್ನೇ ನೆಚ್ಚಿಕೊಂಡಿವೆ. ಅಷ್ಟೇ ಅಲ್ಲದೆ, ಅಡಕೆ ವಹಿವಾಟಿನಿಂದ ಸರ್ಕಾರಕ್ಕೆ ಸುಮಾರು 375 ಕೋಟಿ ಜಿಎಸ್ಟಿ ಆದಾಯ ಹರಿದುಬರುತ್ತಿದೆ. ಗುಟ್ಕಾ ಉದ್ಯಮಕ್ಕೆ ಅಡಕೆಯ ಬಳಕೆ ಹೆಚ್ಚಿದ್ದರಿಂದಲೇ ರಾಜ್ಯದಲ್ಲಿ ಬೆಳೆಯ ವಿಸ್ತೀರ್ಣವೂ ಹೆಚ್ಚಾಗಿತ್ತು. ಹೀಗಿರುವಾಗ ರೈತರಿಗೆ ಪರ್ಯಾಯ ಮಾರುಕಟ್ಟೆ ಅಥವಾ ಸೂಕ್ತ ಬೆಲೆ ಬೆಂಬಲ ವ್ಯವಸ್ಥೆ ರೂಪಿಸುವ ಮುನ್ನವೇ ಏಕಾಏಕಿ ಸಂಪೂರ್ಣ ನಿಷೇಧ ಹೇರಿದರೆ ಅಡಕೆ ಬೆಳೆಗಾರರು ಬೀದಿಗೆ ಬೀಳಲಿದ್ದಾರೆ ಎಂದು ಅವರು ಕಳವಳ ವ್ಯಕ್ತಪಡಿಸಿದ್ದಾರೆ.



ಅಡಕೆ ಬೆಳೆಗಾರರ ಭವಿಷ್ಯ ಹಾಗೂ ಮಾರುಕಟ್ಟೆ ರಕ್ಷಣೆಯ ಕುರಿತು ಮಲೆನಾಡು ಭಾಗದ ವಿವಿಧ ಪಕ್ಷಗಳ ಶಾಸಕರ ನಿಯೋಗವು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದೆ. ಬೆಳೆಗಾರರ ಹಿತರಕ್ಷಣೆಗೆ ಧಕ್ಕೆಯಾಗದಂತೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸಿಎಂಗೆ ಮನವಿ ಮಾಡಲಾಗಿದ್ದು, ರೈತರಿಗೆ ಯಾವುದೇ ರೀತಿಯ ತೊಂದರೆಯಾಗಲು ಬಿಡುವುದಿಲ್ಲ ಎಂದು ಮುಖ್ಯಮಂತ್ರಿಗಳು ಭರವಸೆ ನೀಡಿದ್ದಾರೆ. ಜೊತೆಗೆ ಈ ವಿಷಯವನ್ನು ವಿಧಾನಸಭೆ ಅಧಿವೇಶನದಲ್ಲೇ ಪ್ರಸ್ತಾಪಿಸಿ ಇತ್ಯರ್ಥಪಡಿಸುವುದಾಗಿ ಸಿಎಂ ತಿಳಿಸಿದ್ದಾರೆ ಎಂದು ಆರಗ ಜ್ಞಾನೇಂದ್ರ ಹೇಳಿದ್ದಾರೆ.

ಇದೇ ವೇಳೆ ಪಶ್ಚಿಮ ಘಟ್ಟಗಳ ಸಂರಕ್ಷಣೆಗೆ ಸಂಬಂಧಿಸಿದ 'ಕಸ್ತೂರಿರಂಗನ್ ವರದಿ' ಜಾರಿ ವಿಚಾರವಾಗಿಯೂ ಆರಗ ಜ್ಞಾನೇಂದ್ರ ಪ್ರತಿಕ್ರಿಯಿಸಿದ್ದಾರೆ. ಸೋಮವಾರ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಈ ವರದಿಗೆ ತಕರಾರು ಅರ್ಜಿ ಸಲ್ಲಿಸುವಂತೆ ಕೋರಲಾಗುವುದು. ಈ ಹಿಂದೆ ಅಧಿಕಾರದಲ್ಲಿದ್ದ ಎಲ್ಲಾ ಸರ್ಕಾರಗಳೂ ಕಸ್ತೂರಿ ರಂಗನ್ ವರದಿಯನ್ನು ನಿರಾಕರಿಸಿದ್ದವು. ಕಸ್ತೂರಿ ರಂಗನ್ ವರದಿ ಜಾರಿಯಾದರೆ ಪಶ್ಚಿಮ ಘಟ್ಟ ವ್ಯಾಪ್ತಿಯ ಮಲೆನಾಡಿನ ಜನ ಜೀವನ ತೀವ್ರ ಸಂಕಷ್ಟಕ್ಕೆ ಸಿಲುಕಲಿದ್ದು, ಹಾಲಿ ಸರ್ಕಾರವೂ ಅದೇ ಹಳೆಯ ನಿಲುವನ್ನು ಕಾಯ್ದುಕೊಂಡು ಜನರ ಹಿತ ಕಾಯಬೇಕು ಎಂದು ಆಗ್ರಹಿಸಿದ್ದಾರೆ.



ಬೆಂಗಳೂರಿನ ವಿಧಾನಸೌಧದಲ್ಲಿ ಗುರುವಾರ ನಡೆದ ವಿಧಾನಸಭಾ ಅಧಿವೇಶನದ ಒಂದು ನೋಟ.

## ಕ್ಲೀನ್ ಆಂಡ್ ಗ್ರೀನ್ ಹಂಪಿ ಅಭಿಯಾನಕ್ಕೆ ಕಾರ್ಯಯೋಜನೆ ಸಿದ್ಧಪಡಿಸಿ: ಡಾ.ರಾಮ್‌ಪ್ರಸಾತ್ ಮನೋಹರ್

**ಬೆಂಗಳೂರು, ಆ.13:** ಇಂಧನ ಮತ್ತು ಪ್ರವಾಸೋದ್ಯಮ ಸಚಿವ ಕೆ.ಜೆ.ಜಾರ್ಜ್ ಅವರ ನಿರ್ದೇಶನದಂತೆ, ವಿಶ್ವ ಪಾರಂಪರಿಕ ತಾಣವಾಗಿರುವ ಹಂಪಿಯನ್ನು ಮತ್ತಷ್ಟು ಸ್ವಚ್ಛ, ಹಸಿರು ಹಾಗೂ ಪ್ರವಾಸಿಗರಿಗೆ ಅನುಕೂಲಕರ ತಾಣವನ್ನಾಗಿ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಕ್ಲೀನ್ ಅಂಡ್ ಗ್ರೀನ್ ಹಂಪಿ ಅಭಿಯಾನ ರೂಪಿಸಲು ಪ್ರವಾಸೋದ್ಯಮ ಇಲಾಖೆಯ ಕಾರ್ಯದರ್ಶಿಗಳಾದ ಡಾ. ರಾಮ್ ಪ್ರಸಾತ್ ಮನೋಹರ್, ಅವರು ಹಂಪಿ ಅಭಿವೃದ್ಧಿ ಪ್ರಾಧಿಕಾರ ಹಾಗೂ ವಿಜಯನಗರ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದರು.

ಇಂದು ವಿಡಿಯೋ ಕಾನ್ಫರೆನ್ಸ್ ಮೂಲಕ ಹಂಪಿಯ ಸ್ವಚ್ಛತೆ, ಪ್ರವಾಸಿಗರಿಗೆ ಲಭ್ಯವಿರುವ ಮೂಲಸೌಕರ್ಯ ಹಾಗೂ ಪರಿಸರ ಸಂರಕ್ಷಣೆಗೆ ಸಂಬಂಧಿಸಿದಂತೆ ಸಭೆ ನಡೆಸಿದ ಕಾರ್ಯದರ್ಶಿಗಳು, ಸಾರ್ವಜನಿಕರು ಹಾಗೂ ಪ್ರವಾಸಿಗರನ್ನು ಒಳಗೊಳ್ಳುವ ರೀತಿಯಲ್ಲಿ ಕ್ಲೀನ್ ಅಂಡ್ ಗ್ರೀನ್ ಹಂಪಿ ಅಭಿಯಾನಕ್ಕೆ ಸಮಗ್ರ ಕಾರ್ಯಯೋಜನೆ ಸಿದ್ಧಪಡಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.



> "ಹಂಪಿ ಕರ್ನಾಟಕದ ಹೆಮ್ಮೆಯ ಪಾರಂಪರಿಕ ತಾಣವಾಗಿದ್ದು, ಇಲ್ಲಿನ ಸ್ವಚ್ಛತೆ ಮತ್ತು ಪರಿಸರ ಸಂರಕ್ಷಣೆ ಅತ್ಯಂತ ಪ್ರಮುಖವಾಗಿದೆ. ಕ್ಲೀನ್ ಆಂಡ್ ಗ್ರೀನ್ ಹಂಪಿಯನ್ನು ಕೇವಲ ಸರ್ಕಾರಿ ಇಲಾಖೆಗಳ ಅಭಿಯಾನವನ್ನಾಗಿ ಮಾಡದೆ, ಪ್ರವಾಸೋದ್ಯಮ ಸಚಿವರ ನಿರ್ದೇಶನದಂತೆ ಸಾರ್ವಜನಿಕರು ಮತ್ತು ಪ್ರವಾಸಿಗರು ಸಕ್ರಿಯವಾಗಿ ಭಾಗವಹಿಸುವ ಜನಾಭಿಯಾನವಾಗಿ ರೂಪಿಸಲು ಸೂಚಿಸಲಾಗಿದೆ. ಸ್ವಚ್ಛತೆ, ಪ್ಲಾಸ್ಟಿಕ್ ನಿಯಂತ್ರಣ ಹಾಗೂ ಮೂಲಸೌಕರ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಸಮಗ್ರ ಕಾರ್ಯಯೋಜನೆ ರೂಪಿಸಿ ಅನುಷ್ಠಾನಗೊಳಿಸಲಾಗುವುದು." – ಡಾ.ರಾಮ್ ಪ್ರಸಾತ್ ಮನೋಹರ್, ಕಾರ್ಯದರ್ಶಿ, ಪ್ರವಾಸೋದ್ಯಮ ಇಲಾಖೆ

ವಿಶ್ವವಿಖ್ಯಾತ ಹಂಪಿಯನ್ನು ಸ್ವಚ್ಛವಾಗಿಡುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತೆ ಮಾನ್ಯ ಪ್ರವಾಸೋದ್ಯಮ ಮತ್ತು ಇಂಧನ ಸಚಿವರು ಸೂಚನೆ ನೀಡಿದ್ದಾರೆ. ಹಂಪಿಯಂತಹ ವಿಶ್ವಪ್ರಸಿದ್ಧ ಪಾರಂಪರಿಕ ತಾಣದ ಸ್ವಚ್ಛತೆ ಕೇವಲ ಇಲಾಖೆಗಳ ಜವಾಬ್ದಾರಿಯಾಗದೆ, ಅಲ್ಲಿಗೆ ಭೇಟಿ ನೀಡುವ ಪ್ರತಿಯೊಬ್ಬ ಪ್ರವಾಸಿಗ ಹಾಗೂ ಸಾರ್ವಜನಿಕರ ಸಹಭಾಗಿತ್ವದೊಂದಿಗೆ ನಡೆಯಬೇಕಿದೆ. ಈ ಹಿನ್ನೆಲೆಯಲ್ಲಿ ಸ್ವಚ್ಛತೆ ಕುರಿತು ಜಾಗೃತಿ ಮೂಡಿಸುವುದರ ಜೊತೆಗೆ, ಪ್ರವಾಸಿಗರನ್ನು ಅಭಿಯಾನದ ಭಾಗವಾಗಿಸುವ ಕಾರ್ಯಕ್ರಮಗಳನ್ನು ರೂಪಿಸುವಂತೆ ಕಾರ್ಯದರ್ಶಿ ರಾಮ್ ಪ್ರಸಾತ್ ಮನೋಹರ್ ಸೂಚಿಸಿದರು.

ಹಂಪಿಯ ಸಮಗ್ರ ಸ್ವಚ್ಛತಾ ನಿರ್ವಹಣೆಗಾಗಿ ಸಮಗ್ರ ಏಜೆನ್ಸಿಯನ್ನು ನೇಮಕ ಮಾಡಲು ಟೆಂಡರ್ ಪ್ರಕ್ರಿಯೆ ಕೈಗೊಳ್ಳುವಂತೆ ಹಂಪಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೂಚನೆ ನೀಡಲಾಯಿತು. ಆಯ್ಕೆಯಾಗುವ ಏಜೆನ್ಸಿಯ ಮೂಲಕ ಹಂಪಿಯ ವಿವಿಧ ಪ್ರದೇಶಗಳ ಸ್ವಚ್ಛತೆ ಮತ್ತು ನಿರ್ವಹಣೆಯನ್ನು ವ್ಯವಸ್ಥಿತವಾಗಿ ಕೈಗೊಳ್ಳುವ ಉದ್ದೇಶ ಹೊಂದಲಾಗಿದೆ.

ಇದರ ಜೊತೆಗೆ, HWHAMA ವ್ಯಾಪ್ತಿಯಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಸುವ ಕುರಿತು ಅಗತ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ಹಂಪಿಯ ಪಾರಂಪರಿಕ ಹಾಗೂ ನೈಸರ್ಗಿಕ ಪರಿಸರದ ಸಂರಕ್ಷಣೆಗೆ ಪ್ಲಾಸ್ಟಿಕ್ ಮುಕ್ತ ವಾತಾವರಣ ನಿರ್ಮಿಸುವುದು ಪ್ರಮುಖ ಹೆಜ್ಜೆಯಾಗಲಿದೆ.



> "ವಿಶ್ವ ಪಾರಂಪರಿಕ ತಾಣವಾಗಿರುವ ಹಂಪಿಯ ಸಂರಕ್ಷಣೆ ಮತ್ತು ಸ್ವಚ್ಛತೆ ನಮ್ಮ ಸರ್ಕಾರದ ಪ್ರಮುಖ ಆದ್ಯತೆಯಾಗಿದೆ. ಹಂಪಿಯನ್ನು ಕೇವಲ ಪ್ರವಾಸಿ ತಾಣವಾಗಿ ನೋಡುವುದಕ್ಕಿಂತ, ಅದರ ಪಾರಂಪರಿಕ ಮಹತ್ವವನ್ನು ಕಾಪಾಡಿಕೊಂಡು ಸ್ವಚ್ಛ, ಹಸಿರು ಹಾಗೂ ಪ್ರವಾಸಿಗರಿಗೆ ಉತ್ತಮ ಅನುಭವ ನೀಡುವ ತಾಣವನ್ನಾಗಿ ಅಭಿವೃದ್ಧಿಪಡಿಸುವುದು ನಮ್ಮ ಉದ್ದೇಶ. ಕ್ಲೀನ್ ಆಂಡ್ ಗ್ರೀನ್ ಹಂಪಿ ಅಭಿಯಾನದಲ್ಲಿ ಸಾರ್ವಜನಿಕರು ಮತ್ತು ಪ್ರವಾಸಿಗರ ಸಹಭಾಗಿತ್ವವನ್ನು ಖಚಿತಪಡಿಸಿಕೊಂಡು, ಹಂಪಿಯ ಸೌಂದರ್ಯ ಮತ್ತು ಪರಂಪರೆಯನ್ನು ಮುಂದಿನ ಪೀಳಿಗೆಗೂ ಉಳಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು." – ಕೆ.ಜೆ. ಜಾರ್ಜ್, ಇಂಧನ ಹಾಗೂ ಪ್ರವಾಸೋದ್ಯಮ ಸಚಿವ

ಹಂಪಿಯ ವಿರೂಪಾಕ್ಷ ದೇವಸ್ಥಾನದ ಸಮೀಪದ ಶೌಚಾಲಯ ಸಂಕೀರ್ಣದ ಸ್ವಚ್ಛತೆ ಹಾಗೂ ನಿರ್ವಹಣೆಯನ್ನು ನಿಯಮಿತವಾಗಿ ಖಚಿತಪಡಿಸಿಕೊಳ್ಳುವಂತೆ ವಿಜಯನಗರ ಜಿಲ್ಲಾಧಿಕಾರಿ ಹಾಗೂ HWHAMA ಅಧ್ಯಕ್ಷರಿಗೆ ಕಾರ್ಯದರ್ಶಿಗಳು ಸೂಚಿಸಿದ್ದಾರೆ. ಪ್ರವಾಸಿಗರ ಬಳಕೆಯಲ್ಲಿರುವ ಶೌಚಾಲಯಗಳ ಸ್ವಚ್ಛತೆ ಹಾಗೂ ನಿರ್ವಹಣೆಗೆ ವಿಶೇಷ ಗಮನ ನೀಡುವಂತೆ ನಿರ್ದೇಶಿಸಲಾಯಿತು.

ಇದೇ ವೇಳೆ, ಹಂಪಿ ನೂಕ್ ಯೋಜನೆಯಡಿ ಹೊಸ ಶೌಚಾಲಯ ಸಂಕೀರ್ಣವನ್ನು ಪುನರ್‌ನಿರ್ಮಿಸಲು ಪ್ರಸ್ತಾವನೆ ಸಲ್ಲಿಸುವಂತೆ ವಿಜಯನಗರ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಯಿತು. ಪ್ರವಾಸಿಗರ ಹೆಚ್ಚುತ್ತಿರುವ ಅಗತ್ಯತೆಗಳನ್ನು ಗಮನದಲ್ಲಿಟ್ಟುಕೊಂಡು ಮೂಲಸೌಕರ್ಯವನ್ನು ಸುಧಾರಿಸುವ ನಿಟ್ಟಿನಲ್ಲಿ ಈ ಕ್ರಮ ಕೈಗೊಳ್ಳಲಾಗುತ್ತಿದೆ.

ಕ್ಲೀನ್ ಮತ್ತು ಗ್ರೀನ್ ಹಂಪಿ ಅಭಿಯಾನದ ಮೂಲಕ ಹಂಪಿಯ ಪಾರಂಪರಿಕ ಸ್ವರೂಪವನ್ನು ಕಾಪಾಡುವುದರ ಜೊತೆಗೆ, ಸ್ವಚ್ಛತೆ, ಪರಿಸರ ಸಂರಕ್ಷಣೆ ಹಾಗೂ ಉತ್ತಮ ಪ್ರವಾಸಿಗರ ಅನುಭವಕ್ಕೆ ಆದ್ಯತೆ ನೀಡುವ ಉದ್ದೇಶವನ್ನು ಇಲಾಖೆ ಹೊಂದಿದೆ.

ಸಭೆಯಲ್ಲಿ ಪ್ರವಾಸೋದ್ಯಮ ಇಲಾಖೆ ಆಯುಕ್ತ ಶಿವಪ್ರಸಾದ್ ಪಿ.ಆರ್, ವಿಡಿಯೋ ಕಾನ್ಫರೆನ್ಸ್ ಮೂಲಕ ವಿಜಯನಗರ ಜಿಲ್ಲಾಧಿಕಾರಿ ಕವಿತಾ ಎಸ್ ಮಣಿಕೆರೆ, ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರದ ಅಧಿಕಾರಿಗಳು, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ಅಧಿಕಾರಿಗಳು ಭಾಗವಹಿಸಿದ್ದರು.

### ಸಾರ್ವಜನಿಕರ ದೂರು ಆಧರಿಸಿ ಖಜಾನೆ ಇಲಾಖೆ ವಿವಿಧ ಕಚೇರಿಗಳ ಮೇಲೆ ಲೋಕಾ ದಾಳಿ

## ಬಿಲ್ ವಿಲೇವಾರಿಯಲ್ಲಿ ವಿಳಂಬ, ಹಣ ಮಂಜೂರಾತಿಯಲ್ಲಿ ಭ್ರಷ್ಟಾಚಾರ

**ಬೆಂಗಳೂರು, ಆ.13:** ಬಿಲ್ ವಿಲೇವಾರಿಯಲ್ಲಿ ವಿಳಂಬ, ಹಣ ಮಂಜೂರಾತಿಯಲ್ಲಿ ಭ್ರಷ್ಟಾಚಾರ ನಡೆಯುತ್ತಿರುವುದಾಗಿ ಆರೋಪಿಸಿ ಸಾರ್ವಜನಿಕರಿಂದ ಬಂದ ದೂರಿನ ಮೇರೆಗೆ ಖಜಾನೆ ಇಲಾಖೆಯ ವಿವಿಧ ಕಚೇರಿಗಳ ಮೇಲೆ ಲೋಕಾಯುಕ್ತ ತಂಡ ಏಕಾಏಕಿ ದಾಳಿ ನಡೆಸಿ ಪರಿಶೀಲನೆ ನಡೆಸಿದೆ.

ಕೆ.ಆರ್.ವೃತ್ತದಲ್ಲಿರುವ ರಾಜ್ಯ ಹುಜೂರ್ ಖಜಾನೆ ಕಚೇರಿಗೆ ಲೋಕಾಯುಕ್ತ ಬಿ.ಎಸ್.ಪಾಟೀಲ್ ಅವರು, ಕೆಜಿಐಡಿ, ವಿ.ವಿ.ಟವರ್ ಇತರೆ ಖಜಾನೆಗಳ ಮೇಲೆ ಉಪಲೋಕಾಯುಕ್ತ ಕೆ.ಎನ್.ಫಣೀಂದ್ರ, ಬೆಂಗಳೂರು ಉತ್ತರ ಖಜಾನೆ ಮಲ್ಲೇಶ್ವರ, ಯಲಹಂಕ ಸೇರಿದಂತೆ ಖಜಾನೆಗಳ ಮೇಲೆ ಬಿ.ವೀರಪ್ಪ, ಲೋಕಾಯುಕ್ತ ಎಡಿಜಿಪಿ ಮನೀಶ್ ಖರ್ಬೀಕರ್ ನೇತೃತ್ವದ ತಂಡವು ನಗರದ ಕಂದಾಯ ಭವನದಲ್ಲಿರುವ ಖಜಾನೆ ಕಚೇರಿ ಮೇಲೆ ದಾಳಿ ನಡೆಸಿದೆ. ದಾಳಿಯ ವೇಳೆ ಲೋಕಾಯುಕ್ತರ ಕಾರು ಚಾಲಕರ ಬೆಂಗಾವಲು ಪಡೆ ಚಾಲಕರ ಬಳಿಯೂ ಲಂಚ ಪಡೆದಿರುವುದು ಗೊತ್ತಾಗಿದೆ.

ಹುಜೂರ್ ಖಜಾನೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಪ್ರಥಮ ದರ್ಜೆ ಸಹಾಯಕ ಕೃಷ್ಣ, ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ್ ಅವರ ಪೈಲಟ್ ವಾಹನದ ಚಾಲಕನಿಂದ 3,000 ರೂ. ಲಂಚ ಪಡೆದಿರುವುದು ಬೆಳಕಿಗೆ ಬಂದಿದೆ.ಆರೋಪಿ ಕೃಷ್ಣ ಅವರ ಡಿಜಿಟಲ್ ವ್ಯಾಲೆಟ್ ಅನ್ನು ಪರಿಶೀಲಿಸಿದಾಗ ಲೋಕಾಯುಕ್ತ ನ್ಯಾಯಮೂರ್ತಿ ಪಾಟೀಲ್ ನೇತೃತ್ವದ ಅಧಿಕಾರಿಗಳ ತಂಡವು ಆತನನ್ನು ಬಂಧಿಸಿತು. ಅವರು





ಫೋನ್‌ಪೇ ಮೂಲಕ ನಗರ ಸಶಸ್ತ್ರ ಮೀಸಲು ಪಡೆಯ ಲೋಕಾಯುಕ್ತ ಪೈಲಟ್ ವಾಹನದ ಚಾಲಕನಿಂದ 3,000 ರೂ. ಪಡೆದಿದ್ದಾರೆ ಎಂದು ಆರೋಪಿಸಲಾಗಿದೆ.

ರಾಷ್ಟ್ರೀಯ ಪಿಂಚಣಿ ಯೋಜನೆ ಯಡಿ ಚಾಲಕ ಸಲ್ಲಿಸಿದ ಸಾಲ ಅರ್ಜಿಯನ್ನು ಅನುಮೋದಿಸಲು ಲಂಚ ಪಡೆಯಲಾಗಿದೆ. ಭೇಟಿಯ ಸಮಯದಲ್ಲಿ, ಲೋಕಾಯುಕ್ತರು ಜಂಟಿ ನಿರ್ದೇಶಕ ಮುನಿರೆಡ್ಡಿ ಬಿ.ಎಂ., ಸಹಾಯಕ ನಿರ್ದೇಶಕ ಶಿವರಾಮ್, ಎಫ್‌ಡಿಎಗಳಾದ ಕೃಷ್ಣ, ಆದಿತ್ಯ ಎ., ಸತ್ಯಪ್ಪ ನಡುವಿನಕೇರಿ ಮತ್ತು ವರ್ಷಿಣಿ ಅವರ ಡಿಜಿಟಲ್ ವ್ಯಾಲೆಟ್‌ಗಳಲ್ಲಿ ಹಲವಾರು ಹಣದ ವಹಿವಾಟುಗಳನ್ನು ಪತ್ತೆಹಚ್ಚಿದರು.

ಅದಕ್ಕೆ ಅವರು ಸರಿಯಾದ ವಿವರಣೆಯನ್ನು ನೀಡಿಲ್ಲ. ಬ್ಯಾಂಕ್ ಖಾತೆಗಳನ್ನು ಪರಿಶೀಲಿಸಿದ ನಂತರ ವಿವರವಾದ ವರದಿಯನ್ನು ನೀಡುವಂತೆ ಲೋಕಾಯುಕ್ತರು ಪೊಲೀಸ್ ಇನ್ಸ್‌ಪೆಕ್ಟರ್‌ಗೆ ಸೂಚಿಸಿದರು.

ನ್ಯಾಯಮೂರ್ತಿ ಪಾಟೀಲ್ ಅವರಲ್ಲದೆ, ಉಪ ಲೋಕಾಯುಕ್ತರಾದ ನ್ಯಾ.ಕೆ.ಎನ್.ಫಣೀಂದ್ರ ಮತ್ತು ನ್ಯಾ.ಬಿ. ವೀರಪ್ಪ ಕೂಡ ಬೆಂಗಳೂರಿನ ನಗರ ಮತ್ತು ಗ್ರಾಮಾಂತರ ಜಿಲ್ಲೆಗಳ ಹಲವಾರು ಖಜಾನೆ ಕಚೇರಿಗಳಿಗೆ ಭೇಟಿ ನೀಡಿದರು.

## ಮಾಫಿ ಸಾಕ್ಷಿಗೆ ಆಕ್ಷೇಪ ಸಲ್ಲ: ನಟ ದರ್ಶನ್ ಅರ್ಜಿ ವಜಾಗೊಳಿಸಿದ ಹೈಕೋರ್ಟ್

**ಬೆಂಗಳೂರು,ಆ.13:** ರೇಣುಕಾ ಸ್ವಾಮಿ ಕೊಲೆ ಪ್ರಕರಣದಲ್ಲಿ ಸಹ ಆರೋಪಿ ಮಾಫಿ ಸಾಕ್ಷಿ ಆಗುವುದನ್ನು ಆಕ್ಷೇಪಿಸಿ ಹೈಕೋರ್ಟ್ ಮೆಟ್ಟಿಲೇರಿದ್ದ ನಟ ದರ್ಶನ್‌ಗೆ ಹಿನ್ನಡೆಯಾಗಿದೆ. ಮಾಫಿ ಸಾಕ್ಷಿ ವಿರುದ್ಧ ಆಕ್ಷೇಪಕ್ಕೆ ಸಹ ಆರೋಪಿಗೆ ಅವಕಾಶವಿಲ್ಲ? ಎಂದು ಹೈಕೋರ್ಟ್ ಕೂಡ ಹೇಳಿದೆ. ನ್ಯಾಯಮೂರ್ತಿ ಎಂ ನಾಗಪ್ರಸನ್ನ ಅವರ ಏಕಸದಸ್ಯ ಪೀಠ ವಿಚಾರಣೆ ನಡೆಸಿದೆ. ದರ್ಶನ್ ಪರವಾಗಿ ವಕೀಲ ಹಷ್ಮತ್ ಪಾಷಾ ವಾದ ಮಂಡಿಸಿದರು.

ಪ್ರಕರಣದ 14ನೇ ಆರೋಪಿ ಪ್ರದೋಷ್‌ರಾವ್ ಮಾಫಿ ಸಾಕ್ಷಿಯಾಗಲು ಸಲ್ಲಿಸಿದ್ದ ಅರ್ಜಿಗೆ ಆಕ್ಷೇಪಣೆ ಸಲ್ಲಿಸಲು ತಮಗೆ ಅವಕಾಶ ನೀಡಬೇಕು ಎಂದು ದರ್ಶನ್ ಪರ ವಕೀಲರು ವಾದಿಸಿದರು. ಈ ವೇಳೆ ಪೀಠವು, ಪ್ರದೋಷ್‌ಗೆ ಕ್ಷಮೆ ನೀಡಿದ ಮೇಲೆ ನೀವು ವಿಚಾರಗಳನ್ನು ಎತ್ತಬೇಕು. ಇಲ್ಲಿ ಇನ್ನೂ ಕ್ಷಮೆ ನೀಡಿಲ್ಲ. ಸಹ ಆರೋಪಿ ಮಾಫಿ ಸಾಕ್ಷಿಯಾಗುವ ವಿಚಾರದಲ್ಲಿ ಇತರೆ ಆರೋಪಿಗಳಿಗೆ ಯಾವುದೇ ವಾದ ಮಂಡಿಸುವ ಅಧಿಕಾರವಿಲ್ಲ ಎಂದು ಸ್ಪಷ್ಟಪಡಿಸಿದೆ.





ಸಹ ಆರೋಪಿ ಮಾಫಿ ಸಾಕ್ಷಿ ಆಗುವುದನ್ನು ಆಕ್ಷೇಪಿಸಲು ಇತರ ಆರೋಪಿಗಳಿಗೆ ಕಾನೂನಿನಲ್ಲಿ ಅವಕಾಶವಿಲ್ಲ ಎಂದು ಬೆಂಗಳೂರಿನ ಸಿಸಿಎಚ್ 59ನೇ ಸೆಷನ್ಸ್ ನ್ಯಾಯಾಲಯವು ಸ್ಪಷ್ಟಪಡಿಸಿತ್ತು.

ಆದರೆ ಈ ಆದೇಶವನ್ನು ಪ್ರಶ್ನಿಸಿ ನಟ ದರ್ಶನ್ ಪರ ವಕೀಲರು ಕರ್ನಾಟಕ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಹೈಕೋರ್ಟ್ ಬೆಂಗಳೂರಿನ ಸಿಸಿಎಚ್ 59ನೇ ಸೆಷನ್ಸ್ ನ್ಯಾಯಾಲಯದ ಆದೇಶವನ್ನು ಎತ್ತಿಹಿಡಿದಿದೆ. ದರ್ಶನ್ ಅರ್ಜಿ ವಜಾಗೊಳಿಸಿದೆ.

### ಕಂದಾಯ ದಾಖಲೆ ಬದಲಾವಣೆ, ಅರಣ್ಯಭೂಮಿಯನ್ನು ಅರಣ್ಯೇತರ ಎಂದು

## ಘೋಷಿಸುವ ಅಧಿಕಾರ ಎಸ್‌ಸಿ/ಎಸ್‌ಟಿ ಆಯೋಗಕ್ಕಿಲ್ಲ: ಹೈಕೋರ್ಟ್ ಸ್ಪಷ್ಟನೆ

**ಬೆಂಗಳೂರು, ಆ.13:** ಸ್ಥಿರಾಸ್ತಿಗಳಿಗೆ ಸಂಬಂಧಿಸಿದ ವಿವಾದಗಳನ್ನು ಇತ್ಯರ್ಥಪಡಿಸುವುದು, ಕಂದಾಯ ದಾಖಲೆಗಳ ಬದಲಾವಣೆ ಮಾಡುವುದು ಅಥವಾ ಅರಣ್ಯ ಭೂಮಿಯನ್ನು ಅರಣ್ಯೇತರ ಎಂದು ಘೋಷಿಸುವ ಯಾವುದೇ ಅಧಿಕಾರ ರಾಜ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆಯೋಗಕ್ಕೆ ಇಲ್ಲ ಎಂದು ಕರ್ನಾಟಕ ಹೈಕೋರ್ಟ್ ಸ್ಪಷ್ಟಪಡಿಸಿದೆ.

ಅರಣ್ಯ ಇಲಾಖೆ (ರಾಜ್ಯ ಸರ್ಕಾರ) ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ಪೀಠವು ಈ ಮಹತ್ವದ ತೀರ್ಪನ್ನು ನೀಡಿದೆ. ಆಯೋಗಕ್ಕೆ ತನಿಖೆ ಮತ್ತು ಶಿಫಾರಸಿನ ಅಧಿಕಾರ ಮಾತ್ರವಿದೆ'2002ರ ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆಯೋಗದ ಕಾಯ್ದೆಯನ್ನು ಉಲ್ಲೇಖಿಸಿದ ನ್ಯಾಯಪೀಠ, ಆಯೋಗದ ಕಾರ್ಯವ್ಯಾಪ್ತಿ ಕೇವಲ ತನಿಖೆ ನಡೆಸುವುದು, ಸಲಹೆ ನೀಡುವುದು, ಮೇಲ್ವಿಚಾರಣೆ ಮಾಡುವುದು ಮತ್ತು ಸರ್ಕಾರಕ್ಕೆ ಶಿಫಾರಸು ಮಾಡುವುದಕ್ಕೆ ಮಾತ್ರ ಸೀಮಿತವಾಗಿದೆ. ಸಿವಿಲ್ ನ್ಯಾಯಾಲಯಗಳಂತೆ ಆಸ್ತಿಯ ಹಕ್ಕುಗಳ ವಿಚಾರಣೆ ನಡೆಸಿ ಅಂತಿಮ ತೀರ್ಪು ನೀಡುವ ನ್ಯಾಯಿಕ ಅಧಿಕಾರ ಆಯೋಗಕ್ಕಿಲ್ಲ ಎಂದು ಸ್ಪಷ್ಟಪಡಿಸಿತು.

ದೂರುದಾರರು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದವರೆಂಬ ಕಾರಣಕ್ಕಷ್ಟೇ ಆಸ್ತಿ ಮತ್ತು ಕಂದಾಯ ಸಂಬಂಧಿತ ವಿವಾದಗಳಲ್ಲಿ ಆಯೋಗ ಮಧ್ಯಪ್ರವೇಶಿಸಲು ಸಾಧ್ಯವಿಲ್ಲ. ಜಮೀನು ಅರಣ್ಯ ಭೂಮಿಯೇ ಅಥವಾ ಅಲ್ಲವೇ ಎಂಬುದನ್ನು ನಿರ್ಧರಿಸುವ ಗಂಭೀರ ವಿಷಯಗಳನ್ನು ಸಿವಿಲ್ ನ್ಯಾಯಾಲಯಗಳು ಅಥವಾ ಸಂಬಂಧಪಟ್ಟ ಸಮರ್ಥ ಪ್ರಾಧಿಕಾರಗಳು ಮಾತ್ರ ತೀರ್ಮಾನಿಸಬೇಕು ಎಂದು ತಿಳಿಸಿದ ಹೈಕೋರ್ಟ್, ಈ ಹಿಂದೆ ಆಯೋಗ ಹೊರಡಿಸಿದ್ದ ಆದೇಶವನ್ನು ರದ್ದುಗೊಳಿಸಿತು. ತುಮಕೂರು ಜಿಲ್ಲೆಯ ಸಿರಾ ತಾಲೂಕಿನ ಕಳ್ಳಂಬೆಳ್ಳ ಹೋಬಳಿಯ ಸೀಬಿ ಗ್ರಾಮದ ಕೆಲವು ಸರ್ವೆ ನಂಬರ್‌ಗಳ ಜಮೀನಿನ ಖಾತೆ ಮತ್ತು ಹಕ್ಕುಸ್ವಾಧೀನದ ಕುರಿತು ಆಯೋಗಕ್ಕೆ ದೂರು ಸಲ್ಲಿಕೆಯಾಗಿತ್ತು. ವಿಚಾರಣೆ ನಡೆಸಿದ್ದ ರಾಜ್ಯ ಎಸ್ಸಿ/ಎಸ್ಟಿ ಆಯೋಗವು 2023ರ ಮೇ 18ರಂದು ಆದೇಶವೊಂದನ್ನು ಹೊರಡಿಸಿ, ಈ ಜಮೀನುಗಳನ್ನು ಅರಣ್ಯ ಇಲಾಖೆಯ ದಾಖಲೆಗಳಿಂದ ತೆರವುಗೊಳಿಸಿ ಅರ್ಜಿದಾರರ ಹೆಸರಿಗೆ ಖಾತೆ ಬದಲಾಯಿಸಿಕೊಡುವಂತೆ ನಿರ್ದೇಶಿಸಿತ್ತು. ಆಯೋಗದ ಈ ನಿರ್ಧಾರವನ್ನು ಪ್ರಶ್ನಿಸಿ ಕಂದಾಯ ಹಾಗೂ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳು ಹೈಕೋರ್ಟ್ ಮೆಟ್ಟಿಲೇರಿದ್ದರು. ಇದೀಗ ಹೈಕೋರ್ಟ್ ಆಯೋಗದ ಆದೇಶವನ್ನು ವಜಾಗೊಳಿಸಿ ಆದೇಶಿಸಿದೆ.

## ಹೊರರಾಜ್ಯದವರಿಂದ ಕನ್ನಡಿಗರ ಮೇಲೆ ಬೆದರಿಕೆ, ದೌರ್ಜನ್ಯ ಆತಂಕಕಾರಿ: ನಾರಾಯಣಗೌಡ ಖಂಡನೆ

**ಬೆಂಗಳೂರು, ಆ.13:** ಕರ್ನಾಟಕದಲ್ಲಿ ಇತ್ತೀಚಿನ ದಿನಗಳಲ್ಲಿ ಹೊರ ರಾಜ್ಯಗಳಿಂದ ಬಂದ ಕೆಲವರಿಂದ ಕನ್ನಡಿಗರ ಮೇಲೆ ಹಲ್ಲೆ, ಬೆದರಿಕೆ ಹಾಗೂ ದೌರ್ಜನ್ಯ ನಡೆಯುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ ಎಂದು ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಟಿ.ಎ.ನಾರಾಯಣಗೌಡ ಹೇಳಿದ್ದಾರೆ.

ಕನ್ನಡಿಗರ ಸುರಕ್ಷತೆ, ಸ್ವಾಭಿಮಾನ, ಉದ್ಯೋಗ ಹಾಗೂ ಸ್ಥಳೀಯರ ಹಕ್ಕುಗಳ ರಕ್ಷಣೆಗಾಗಿ ರಾಜ್ಯಾದ್ಯಂತ ಜನಜಾಗೃತಿ ಮತ್ತು ಹೋರಾಟದ ಅಭಿಯಾನ ಹಮ್ಮಿಕೊಳ್ಳಲಾಗುವುದು. ಉದ್ಯೋಗ, ವ್ಯಾಪಾರ ಹಾಗೂ ಉತ್ತಮ ಬದುಕಿನ ಉದ್ದೇಶದಿಂದ ಕರ್ನಾಟಕಕ್ಕೆ ಬರುವವರನ್ನು ಕನ್ನಡಿಗರು ಸದಾ ಸ್ವಾಗತಿಸಿದ್ದಾರೆ. ಆದರೆ ಇಲ್ಲಿನ ಕಾನೂನು ಉಲ್ಲಂಘಿಸುವುದು, ಸ್ಥಳೀಯರನ್ನು ಬೆದರಿಸುವುದು, ಕನ್ನಡ ಭಾಷೆ ಮತ್ತು ಸಂಸ್ಕೃತಿಗೆ ಅಗೌರವ ತೋರುವುದನ್ನು ಯಾವುದೇ ಕಾರಣಕ್ಕೂ ಸಹಿಸಲು ಸಾಧ್ಯವಿಲ್ಲ ಎಂದರು.

ಹೊರರಾಜ್ಯಗಳಿಂದ ಹೆಚ್ಚುತ್ತಿರುವ ವಲಸೆಯಿಂದ ಬೆಂಗಳೂರಿನಂತಹ ನಗರಗಳಲ್ಲಿ ಉದ್ಯೋಗದ ಸ್ಪರ್ಧೆ, ವಸತಿ ಹಾಗೂ ಬಾಡಿಗೆ



ದರಗಳ ಏರಿಕೆ, ಸಂಚಾರ ದಟ್ಟಣೆ ಮತ್ತು ಮೂಲಸೌಕರ್ಯದ ಮೇಲಿನ ಒತ್ತಡ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಸರ್ಕಾರ ಸಮಗ್ರ ವಲಸೆ ನೀತಿ ರೂಪಿಸಬೇಕು ಎಂದು ಆಗ್ರಹಿಸಿದರು.

ಕರ್ನಾಟಕದಲ್ಲಿ ಉದ್ಯೋಗ ಸೃಷ್ಟಿ ಯಾದಾಗ ಸ್ಥಳೀಯ ಕನ್ನಡಿಗರಿಗೆ ಆದ್ಯತೆ ನೀಡಬೇಕು. ಖಾಸಗಿ ಕ್ಷೇತ್ರದಲ್ಲಿಯೂ ಕನ್ನಡಿಗರಿಗೆ ಹೆಚ್ಚಿನ ಉದ್ಯೋಗಾವಕಾಶ ಕಲ್ಪಿಸಲು ಪರಿಣಾಮಕಾರಿ ಕಾನೂನು ಹಾಗೂ ಅನುಷ್ಠಾನ ವ್ಯವಸ್ಥೆ ಜಾರಿಗೊಳಿಸಬೇಕು.

ಸರ್ಕಾರಿ ಕಚೇರಿಗಳು, ಸಾರ್ವಜನಿಕ ಸೇವೆಗಳು ಹಾಗೂ ವ್ಯಾಪಾರ–ವಹಿವಾಟುಗಳಲ್ಲಿ ಕನ್ನಡ ಭಾಷೆಯ ಬಳಕೆಯನ್ನು ಖಚಿತಪಡಿಸಬೇಕು ಎಂದು ಒತ್ತಾಯಿಸಿದರು.

ಕರ್ನಾಟಕಕ್ಕೆ ಬರುವ ಪ್ರತಿಯೊಬ್ಬರೂ ಇಲ್ಲಿನ ಕಾನೂನು, ಭಾಷೆ ಮತ್ತು ಸಂಸ್ಕೃತಿಯನ್ನು ಗೌರವಿಸಬೇಕು. ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗುವವರು ಯಾರೇ ಆಗಿರಲಿ, ಯಾವುದೇ ಒತ್ತಡಕ್ಕೆ ಮಣಿಯದೆ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಸರ್ಕಾರವನ್ನು ಆಗ್ರಹಿಸಿದರು.

ಕರ್ನಾಟಕ ರಕ್ಷಣಾ ವೇದಿಕೆಯ ಅಭಿಯಾನ ಯಾವುದೇ ಭಾಷೆ, ರಾಜ್ಯ ಅಥವಾ ಸಮುದಾಯದ ವಿರುದ್ಧದ ದ್ವೇಷದ ಅಭಿಯಾನವಲ್ಲ. ಕನ್ನಡಿಗರ ಸುರಕ್ಷತೆ, ಸ್ಥಳೀಯರ ಉದ್ಯೋಗ ಹಕ್ಕು, ಕನ್ನಡ ಭಾಷೆಯ ಗೌರವ, ಕಾನೂನು ಸುವ್ಯವಸ್ಥೆ ಹಾಗೂ ಕರ್ನಾಟಕದ ಸಾಮಾಜಿಕ–ಆರ್ಥಿಕ ಹಿತಾಸಕ್ತಿಗಳ ರಕ್ಷಣೆಯ ಉದ್ದೇಶ ಹೊಂದಿದೆ ಎಂದು ನಾರಾಯಣಗೌಡ ಸ್ಪಷ್ಟಪಡಿಸಿದರು.

ಈ ಎಲ್ಲ ವಿಚಾರಗಳ ಕುರಿತು ರಾಜ್ಯಾದ್ಯಂತ ಜನಜಾಗೃತಿ ಮೂಡಿಸುವುದರ ಜೊತೆಗೆ, ಸರ್ಕಾರದ ಮುಂದೆ ಸಮಗ್ರ ಬೇಡಿಕೆಗಳನ್ನು ಮಂಡಿಸಲಾಗುವುದು. ಅಗತ್ಯವಿದ್ದಲ್ಲಿ ಪ್ರಜಾಸತ್ತಾತ್ಮಕ ರೀತಿಯಲ್ಲಿ ಹೋರಾಟವನ್ನು ತೀವ್ರಗೊಳಿಸಲಾಗುವುದು ಎಂದು ಅವರು ಎಚ್ಚರಿಸಿದರು.

### ಗೆಜೆಟೆಡ್ ಪ್ರೊಬೆಷನರಿ ಗ್ರೂಪ್ ಎ ಮತ್ತು ಬಿ ವೃಂದ ಹುದ್ದೆಗಳ ಭರ್ತಿ:

## ಅಭ್ಯರ್ಥಿಗಳಿಗೆ ವಯೋಮಿತಿ 5 ವರ್ಷ ಸಡಿಲಿಕೆ

**ಬೆಂಗಳೂರು, ಆ.13:** ಕರ್ನಾಟಕ ಲೋಕಸೇವಾ ಆಯೋಗವು (ಕೆಪಿಎಸ್‌ಸಿ) 2026–27ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ ಗ್ರೂಪ್ 'ಎ' ಮತ್ತು ಗ್ರೂಪ್ 'ಬಿ' ವೃಂದದ ಒಟ್ಟು 319 ಹುದ್ದೆಗಳ ಭರ್ತಿಗೆ ಸಂಬಂಧಿಸಿದಂತೆ ಅಭ್ಯರ್ಥಿಗಳಿಗೆ ಸಿಹಿಸುದ್ದಿ ನೀಡಿದೆ. ಸರ್ಕಾರವು ನಿಗದಿಪಡಿಸಿದ್ದ ವಯೋಮಿತಿಗೆ ಹೆಚ್ಚುವರಿಯಾಗಿ 5 ವರ್ಷಗಳ ವಯೋಮಿತಿ ಸಡಿಲಿಕೆಯನ್ನು ಅಳವಡಿಸಿಕೊಂಡು ಪಟ್ಟಿ ಪ್ರಕಟಿಸಿದೆ .ಈ ಕುರಿತು ಕೆಪಿಎಸ್ಸಿ ಕಾರ್ಯದರ್ಶಿ ಕೆ. ಜ್ಯೋತಿ ಅವರು ಆ.13ರಂದು ಅಧಿಕೃತ ಪ್ರಕಟಣೆ ಹೊರಡಿಸಿದ್ದಾರೆ.

ಉಳಿಕೆ ಮೂಲ ವೃಂದದ 297 ಹಾಗೂ ಹೈದರಾಬಾದ್–ಕರ್ನಾಟಕ (ಕಲ್ಯಾಣ ಕರ್ನಾಟಕ) ವೃಂದದ 22 ಹುದ್ದೆಗಳು ಸೇರಿದಂತೆ ಒಟ್ಟು 319 ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಆಹ್ವಾನಿಸಿ ಜು.31ರಂದು ಅಧಿಸೂಚನೆ ಹೊರಡಿಸಿತ್ತು. ಪರಿಷ್ಕೃತ ಗರಿಷ್ಠ ವಯೋಮಿತಿ ವಿವರ ಹೀಗಿದೆ: ಕನಿಷ್ಠ ವಯೋಮಿತಿ: 21 ವರ್ಷಗಳು, ಸಾಮಾನ್ಯ ಅರ್ಹತೆ ಅಭ್ಯರ್ಥಿಗಳಿಗೆ: ಸರ್ಕಾರದ ಈ ನಿರ್ಧಾರದಿಂದಾಗಿ ವಯೋಮಿತಿ ಮೀರುತ್ತಿದ್ದ ಸಾವಿರಾರು ಉದ್ಯೋಗಾ ಕಾಂಕ್ಷಿಗಳಿಗೆ ಕೆಪಿಎಸ್ಸಿ ಪರೀಕ್ಷೆ ಬರೆಯಲು ಮತ್ತೊಂದು ಸುವರ್ಣ ಅವಕಾಶ ಲಭಿಸಿದಂತಾಗಿದೆ.

## ರಾಜ್ಯ ಮಹಿಳಾ ನಿಲಯಗಳ ವ್ಯವಸ್ಥೆಯಲ್ಲಿ ಮಹತ್ವದ ಸುಧಾರಣೆ: ಡಾ. ನಾಗಲಕ್ಷ್ಮಿ ಚೌಧರಿ

**ಬೆಂಗಳೂರು, ಆ.13:** ರಾಜ್ಯದ ಮಹಿಳಾ ನಿಲಯಗಳು ಮತ್ತು ಸ್ವೀಕಾರ ಕೇಂದ್ರಗಳಲ್ಲಿ ಮೂಲಸೌಲಭ್ಯಗಳನ್ನು ಕಲ್ಪಿಸಲು ಹಾಗೂ ನಿವಾಸಿಗಳ ಸುರಕ್ಷತೆ ಮತ್ತು ಆರೋಗ್ಯ ಕಾಪಾಡಲು ರಾಜ್ಯ ಮಹಿಳಾ ಆಯೋಗ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದು ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮೀ ಚೌಧರಿ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾವೇ ಸ್ವತಃ ರಾಜ್ಯ ಮಹಿಳಾ ನಿಲಯಕ್ಕೆ ಮೂರನೇ ಬಾರಿ ಭೇಟಿ ನೀಡಿ ಅಲ್ಲಿನ ವಾಸ್ತವ ಪರಿಸ್ಥಿತಿಯನ್ನು ಪರಿಶೀಲಿಸಿದ್ದೇನೆ. ಹಿಂದಿನ ಭೇಟಿಗಳ ಸಂದರ್ಭದಲ್ಲಿ ನಿಲಯದಲ್ಲಿ ಕುಡಿಯುವ ನೀರು, ಬಿಸಿನೀರು ಮತ್ತು ಟೆಲಿವಿಷನ್ ಸೌಲಭ್ಯದ ಕೊರತೆ ಹಾಗೂ



ಸಿಬ್ಬಂದಿಯಿಂದ ಕಿರುಕುಳದ ದೂರುಗಳು ಕೇಳಿಬಂದಿದ್ದವು. ಈ ಕುರಿತು ಸಂಬಂಧಪಟ್ಟ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿತ್ತು. ಇದೀಗ ಮತ್ತೊಮ್ಮೆ ಪರಿಶೀಲನೆ ನಡೆಸಿದಾಗ ನಿಲಯದ ವ್ಯವಸ್ಥೆಯಲ್ಲಿ ಸ್ಪಷ್ಟ ಸುಧಾರಣೆ ಕಂಡುಬಂದಿರುವುದು ಸಂತೋಷದ ಸಂಗತಿ ಎಂದರು.

ಪ್ರಸ್ತುತ ಈ ಕೇಂದ್ರದಲ್ಲಿ ಒಟ್ಟು 39 ಮಂದಿ ನಿವಾಸಿಗಳಿದ್ದು, ಇವರಲ್ಲಿ 31 ಮಂದಿ ಮಾನಸಿಕ ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.

ನಿವಾಸಿಗಳ ಆರೋಗ್ಯ ಮತ್ತು ಪೌಷ್ಟಿಕಾಂಶದ ಕಡೆಗೆ ವಿಶೇಷ ಗಮನಹರಿಸುವಂತೆ ಸೂಚಿಸಲಾಗಿದೆ. ಜುಲೈನಿಂದ ನಿವಾಸಿಗಳಿಗೆ ವಾರಕ್ಕೊಮ್ಮೆ ಮಾಂಸಾಹಾರ ನೀಡಲಾಗುತ್ತಿದೆ. ಅಪೌಷ್ಟಿಕತೆ ಮತ್ತು ರಕ್ತಹೀನತೆ ತಡೆಗಟ್ಟಲು ಪ್ರತಿದಿನ ಮೊಟ್ಟೆ ಹಾಗೂ ಕಬ್ಬಿಣಾಂಶದ ಪೂರಕ ಮಾತ್ರೆಗಳನ್ನು ನೀಡಲು ಸೂಚಿಸಲಾಗಿದೆ ಎಂದರು.

ಪ್ರತಿ ಮೂರು ತಿಂಗಳಿಗೊಮ್ಮೆ ಕಡ್ಡಾಯವಾಗಿ ವೈದ್ಯಕೀಯ ತಪಾಸಣೆ ನಡೆಸಲಾಗುತ್ತಿದೆ. ನಿವಾಸಿಗಳನ್ನು ತುರ್ತಾಗಿ ಆಸ್ಪತ್ರೆಗೆ ಕರೆದೊಯ್ಯಲು ವಾಹನ ಸೌಲಭ್ಯ ಕಲ್ಪಿಸುವಂತೆ ಸರ್ಕಾರಕ್ಕೆ ಶಿಫಾರಸು ಮಾಡಲಾಗುವುದು.

### ಕಾರಾಗೃಹದಲ್ಲಿ ದೊರೆತ ಎಂಟು 5ಜಿ ಮೊಬೈಲ್‌ಗಳು ಆಕ್ಟಿವೇಟ್ ಆಗಿದ್ದು ಆಂಧ್ರದಲ್ಲಿ

## ಜಾಮರ್ ಅಳವಡಿಸಿದ್ದರೂ ಫೋನ್‌ಗಳ ಬಳಕೆ: ಡಿಜಿಪಿ ಅಲೋಕ್ ಕುಮಾರ್ ಅಚ್ಚರಿ

**ಬೆಂಗಳೂರು, ಆ.13:** ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಸಿಸಿಬಿ ಪೊಲೀಸರು ದಾಳಿ ಮಾಡಿದ ಸಂದರ್ಭದಲ್ಲಿ ದೊರೆತ ಎಂಟು ಮೊಬೈಲ್‌ಗಳ ಸಿಮ್‌ಗಳು ಆಂಧ್ರದಲ್ಲಿ ಖರೀದಿಸಿರುವುದು ತನಿಖೆಯಿಂದ ಗೊತ್ತಾಗಿದೆ. ಈ ಎಂಟು ಮೊಬೈಲ್‌ಗಳು 5ಜಿ ಎಂಬುವುದು ವಿಶೇಷವಾಗಿದ್ದು, ಆಂಧ್ರದಲ್ಲಿ ಆಕ್ಟಿವ್ ಆಗಿರುವುದು ಪೊಲೀಸರ ಇದುವರೆಗಿನ ತನಿಖೆಯಿಂದ ತಿಳಿದುಬಂದಿದೆ. ಈ ಕಾರಾಗೃಹದಲ್ಲಿ ತಪಾಸಣೆ ಕಟ್ಟುನಿಟ್ಟಾಗಿ ನಡೆಯುತ್ತಿದ್ದರೂ ಸಹ ನಿಷೇಧಿತ ವಸ್ತುಗಳು ಬ್ಯಾರಕ್‌ಗಳೊಳಗೆ ಹೇಗೆ



ಹೋದವು ಎಂದು ಕಾರಾಗೃಹಗಳ ಡಿಜಿಪಿ ಅಲೋಕ್‌ಕುಮಾರ್ ಆಶ್ಚರ್ಯ ವ್ಯಕ್ತಪಡಿಸಿದ್ದಾರೆ.

ಜೈಲಿನೊಳಗೆ ಜಾಮರ್ ಅಳವಡಿಸಿದ್ದರೂ ಸಹ ಮೊಬೈಲ್‌ಗಳನ್ನು ಹೇಗೆ ಬಳಸುತ್ತಿದ್ದರು ಎಂಬ ಬಗ್ಗೆ ಮಾಹಿತಿಗಳನ್ನು ಕಲೆ ಹಾಕಲಾಗುತ್ತಿದೆ. ಅಷ್ಟೇ ಅಲ್ಲದೇ ಈ ಮೊಬೈಲ್ ಯಾರು ತಂದು ಕೊಟ್ಟಿದ್ದಾರೆ ಎಲ್ಲಿಂದ ತಂದು ಕೊಟ್ಟಿದ್ದಾರೆ ಎಂಬುವುದರ ಬಗ್ಗೆಯೂ ತನಿಖೆ ಮುಂದುವರೆದಿದೆ. ಈ ಹಿನ್ನೆಲೆಯಲ್ಲಿ ತನಿಖೆಗೆ ಡಿಐಜಿ ಜಿನೇಂದ್ರ ಕಣಗಲಿ ನೇತೃತ್ವದಲ್ಲಿ ವಿಶೇಷ ತಂಡ ರಚಿಸಲಾಗಿದ್ದು ತನಿಖೆ ಆರಂಭಿಸಿದ್ದಾರೆ.



ಬಾಗಲಕೋಟೆ ಬಳಿಯ ಘಟಪ್ರಭಾ ನದಿಯಲ್ಲಿ ಗುರುವಾರ ಬಿಜೆಪಿ ಕಾರ್ಯಕರ್ತರು ತ್ರಿವರ್ಣದಿಂದ ಹರ್ ಘರ್ ತಿರಂಗಾ ಆಚರಿಸಿದರು.

# ಬರಗಾಲ ಎದುರಿಸಲು ಸರ್ಕಾರ ಸಂಪೂರ್ಣ ಸಜ್ಜಾಗಿದೆ

## ಬೆಳೆಹಾನಿ ಆತಂಕದ ನಡುವೆ ಸಚಿವ ಈಶ್ವರ ಖಂಡ್ರೆ ಭರವಸೆ

**ಬೀದರ್, ಆ. 13:** ಜಿಲ್ಲೆಯಲ್ಲಿ ಜೂನ್, ಜುಲೈ ತಿಂಗಳಲ್ಲಿ ಮಳೆಯ ಅಭಾವದಿಂದಾಗಿ ಉದ್ದು, ಹೆಸರು ಬೆಳೆಗಳು ಶೇ. 95 ರಷ್ಟು ಹಾಯಾಗಿದೆ. ಸೋಯಾಬೀನ್ ಹಾಗೂ ತೊಗರಿ ಬೆಳೆಗಳು ಶೇ. 50ರಷ್ಟು ಹಾಳಾಗಿವೆ. ಜಿಲ್ಲೆಯಲ್ಲಿ ಬರದ ಪರಿಸ್ಥಿತಿ ಇದ್ದು, ಸರ್ಕಾರವು ಬರ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಲು ಸಿದ್ಧವಾಗಿದೆ ಎಂದು ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಹಾಗೂ ಜಿಲ್ಲಾ ಪ್ರಕೃತಿ ವಿಕೋಪ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರು ತಿಳಿಸಿದರು.



ಜಿಲ್ಲೆಯಲ್ಲಿ ವಿವಿಧ ಭಾಗಗಳಿಗೆ ತೆರಳಿ ಬರದ ಪರಿಸ್ಥಿತಿ ಪರಿಶೀಲನೆ ನಡೆಸಿದ ನಂತರ ಸುದ್ದಿಗಾರರೊಂದಿಗೆ ಮಾನಾಡಿದ ಅವರು, ಬೀದರ್ ತಾಲೂಕಿನ ಅಷ್ಟೂರ, ಚೋಂಡಿ, ಚೌಳಿ, ಭಾಲ್ಕಿ ತಾಲೂಕಿನ ಅಹಮದಾ ಬಾದ್, ಕಮಲನಗರದ ಸಂಗಮ, ಹೋಳಸಮುದ್ರ ಹಾಗೂ ಡಿಗ್ಗಿ ಗ್ರಾಮಗಳ ರೈತರ ಹೊಲಗಳಿಗೆ ತೆರಳಿ ರೈತರಿಗೆ ಉಂಟಾದ ಸಂಕಷ್ಟದ ಮಾಹಿತಿ ಪಡೆದಿರುವುದಾಗಿ ತಿಳಿಸಿದರು.

ರೈತರಿಂದ ನೇರವಾಗಿ ಸಮಸ್ಯೆಗಳನ್ನು ಆಲಿಸಿದ ಸಚಿವರು ಯಾವುದೇ ರೈತರು ಆತಂಕ ಪಡುವ ಅಗತ್ಯವಿಲ್ಲ ಸರ್ಕಾರವು ರೈತರ ಪರವಾಗಿ ನಿಂತಿದೆ ರೈತರ ಎಲ್ಲಾ ಸಂಕಷ್ಟಗಳನ್ನು ಸಮರ್ಥವಾಗಿ ಎದುರಿಸಲಿದೆ ಎಂದರು. ಬೆಳೆಹಾನಿ ಕುರಿತು ಸ್ಥಳದಲ್ಲಿ ಅಧಿಕಾರಿಗಳಿಂದ ಮಾಹಿತಿ ಪಡೆದ ಸಚಿವರು ರೈತರಿಗೆ ಅಗತ್ಯ ನೆರವು ನೀಡುವ ಕುರಿತು ಚರ್ಚಿಸಿದರು. ಹಾನಿಗೊಳಗಾದ ಬೆಳೆಗಳ ಸಮೀಕ್ಷೆ ನಡೆಸುವಂತೆ ಹಾಗೂ ಬೆಳೆ ಕಟಾವು ಪ್ರಯೋಗ ಕೈಗೊಳ್ಳುವಂತೆ ಸೂಚಿಸಿದರು.

ಬರ ಪರಿಹಾರ ಕುರಿತು ಕ್ರಮಗಳ ಬಗ್ಗೆ ಕೃಷಿ ಅಧಿಕಾರಿಗಳು ರೈತರಿಗೆ ಸೂಕ್ತ ಮಾರ್ಗದರ್ಶನ ನೀಡುವಂತೆ ಸಚಿವರು ಸೂಚಿಸಿದರು. ಚೋಂಡಿ ಗ್ರಾಮದ ರೈತ ಸಿದ್ದಪ್ಪ 3 ಎಕ್ಕರೆ ಹೊಲದಲ್ಲಿ ಬೆಳೆದ ಹೆಸರು ಮಳೆಯ ಭಾವದಿಂದ ಕುಂಠಿತಗೊಂಡಿದ್ದನ್ನು ವೀಕ್ಷಿಸಿದ ಸಚಿವರು ಪರಿಶಿಷ್ಟ ಜಾತಿಯ ಅಭಿವೃದ್ಧಿ ನಿಗಮದ ಕೊಳವೆ ಭಾವಿ ಮಂಜೂರು ಮಾಡುವದಾಗಿ ಭರವಸೆ ನೀಡಿದರು. ನಂತರ ಸಚಿವರು ಸುಭಾಷ್ ಹಾಗೂ ಗುರುಪಾದಯ್ಯ ರೈತರ ಜಮೀನಿನಲ್ಲಿ ಕುಂಠಿತಗೊಂಡ ಹೆಸರು ಮತ್ತು ಉದ್ದು ಬೆಳೆಗಳನ್ನು ವೀಕ್ಷಿಸಿದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಈಶ್ವರ ಖಂಡ್ರೆ ಅವರು, ಜಿಲ್ಲೆಯಲ್ಲಿ ಮಳೆಯ ಅಭಾವದಿಂದ ಈಗಾಗಲೇ ಹೆಸರು ಉದ್ದು ಶೇ. 95 ರಷ್ಟು ಹಾನಿಯಾಗಿದ್ದು, ಸೋಯಾಬಿನ್ ಹಾಗೂ ತೊಗರಿ ಬೆಳೆಗಳು ಸ್ವಲ್ಪ ಮಟ್ಟಿಗೆ ಹಾಳಾಗಿವೆ ಎಂದು ಹೇಳಿದರು.

ಜಿಲ್ಲೆಯಲ್ಲಿ ಬರದ ಪರಿಸ್ಥಿತಿ ಇದೆ ಸರ್ಕಾರವು ಬರ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಲು ಸಿದ್ಧವಿದೆ. ಕಳೆದ ವರ್ಷ ರೈತರಿಗೆ 246 ಕೋಟಿ ಹಣ ನೇರವಾಗಿ ಜಮೆಯಾಗಿದ್ದು, 270 ಕೋಟಿ ರೂ. ಎಸ್.ಡಿ.ಆರ್.ಎಫ್ ಹಾಗೂ ಎನ್.ಡಿ.ಆರ್.ಎಫ್ ಹಣ ರೈತರಿಗೆ ನೀಡಲಾಗಿದೆ. ಈ ವರ್ಷ ಬೆಳೆ ಹಾನಿಗೆ ಸರ್ಕಾರವು ಪರಿಹಾರ ನೀಡಲಿದೆ. ಬರ ಘೋಷಣೆ ಕುರಿತು ಸರ್ಕಾರದ ಮಾನದಂಡಗಳಿವೆ. ಈ ಬಗ್ಗೆ ಅಧಿವೇಶನದಲ್ಲಿ ಚರ್ಚಿಸ ಲಾಗುವುದು. ಕುಡಿಯುವ ನೀರಿನ ಸಮಸ್ಯೆ ಇದ್ದಲ್ಲಿ ತಕ್ಷಣವೇ ಪರಿಹರಿಸಲಾಗುವುದು. ಕಳೆದ ವರ್ಷ 4 ಕೋಟಿ ರೂ. ಅನುದಾನ ಮಂಜೂರಾಗಿದೆ. ಈ ವರ್ಷ 6 ಕೋಟಿ ರೂ. ಹಣ ನೀಡಲಾಗುವುದು. ಜಿಲ್ಲಾಧಿಕಾರಿಗಳ ಖಾತೆಯಲ್ಲಿ ಅನುದಾನವಿದೆ ಎಂದು ತಿಳಿಸಿದರು. ಬೀದರ್ ಜಿಲ್ಲೆಯಲ್ಲಿ ವಿ.ಬಿ.ಜಿ. ರಾಮ್ ಜಿ ಯೋಜನೆ ಅಡಿ ಒಟ್ಟು 30,000 ಜನಕ್ಕೆ ಉದ್ಯೋಗ ನೀಡಲಾಗುತ್ತಿದೆ ಅವರವರ ಗ್ರಾಮದಲ್ಲಿ ದುಡಿಯುವ ಕೈಗಳಿಗೆ ಉದ್ಯೋಗ ನೀಡಲಾಗುವುದು. ಯಾರು ಬೇರೆ ಜಿಲ್ಲೆಗಳಿಗೆ ರಾಜ್ಯಗಳಿಗೆ ವಲಸೆ ಹೋಗಬಾರದು ಉದ್ಯೋಗ ಖಾತ್ರಿ ಅಡಿ ಜಿಲ್ಲೆಯಲ್ಲಿ ಈವರೆಗೆ 48 ಕೋಟಿ ರೂ ಕಾಮಗಾರಿ ಆಗಿದ್ದು ಶೀಘ್ರವೇ ಅನುದಾನ ಬಿಡುಗಡೆ ಆಗಲಿದೆ ಎಂದರು.

### ಮಾಸಾಂತ್ಯಕ್ಕೆ ಬರ ಘೋಷಣೆ

ಬರಪೀಡಿತ ಪ್ರದೇಶಗಳ ಘೋಷಣೆಗೆ ಕೇಂದ್ರ ಸರ್ಕಾರದ ಕೆಲವು ನಿಯಮಗಳಿದ್ದು ಅವುಗಳನ್ನು ಗಮನಿಸಿ ಮಾಸಾಂತ್ಯಕ್ಕೆ ಬರ ಜಿಲ್ಲೆಗಳ ಘೋಷಣೆ ಮಾಡಲಾಗುವುದು. ಈಗಾಗಲೇ ಎಲ್ಲ ಜಿಲ್ಲೆಗಳಿಗೆ ಸಚಿವರನ್ನು ನೇಮಕ ಮಾಡಿ ಮುಖ್ಯಮಂತ್ರಿಗಳು ಬರ ಅಧ್ಯಯನಕ್ಕೆ ಕಳಿಸಿದ್ದರು. ಅದರಂತೆ ಎಲ್ಲ ಸಚಿವರುಗಳು ಜಿಲ್ಲೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ರಾಜ್ಯ ಸರ್ಕಾರಕ್ಕೆ ವರದಿ ಸಲ್ಲಿಸಿದ್ದಾರೆ. ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ಪರಿಹಾರಕ್ಕಿಂತ 2 ಪಟ್ಟು ಬರ ಪರಿಹಾರ ಸರ್ಕಾರ ನೀಡಲಿದೆ ಮಳೆ ಕೊರತೆಯಿಂದಾಗಿ ಎದುರಾಗಿರುವ ಬರ ಪರಿಸ್ಥಿತಿ ಎದುರಿಸಲು ಸರ್ಕಾರ ಸಿದ್ಧವಿದೆ. ಸರ್ಕಾರ ರೈತರ ಪರವಿದೆ. ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್ ಅಡಿ ಪರಿಹಾರ ಸಿಗಲಿದೆ. ಅದರ 2 ಪಟ್ಟು ಬರ ಪರಿಹಾರ ಸರ್ಕಾರ ನೀಡಲಿದೆ. ಬರ ಹಿನ್ನೆಲೆಯಲ್ಲಿ ಜನರು ಗುಳೆ ಹೋಗೋದನ್ನು ತಡೆಗಟ್ಟಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರ್ ಖಂಡ್ರೆ ಹೇಳಿದರು.

# ಕಲ್ಯಾಣ ಕರ್ನಾಟಕ ಸಾರಿಗೆ ನಿಗಮಕ್ಕೆ 400 ಹೊಸ ಬಸ್ ಖರೀದಿಗೆ ಸಂಪುಟ ಒಪ್ಪಿಗೆ: ಪ್ರಿಯಾಂಕ್ ಖರ್ಗೆ

**ಕಲಬುರಗಿ/ಬೆಂಗಳೂರು, ಆ.13:** ಕಲ್ಯಾಣ ಕರ್ನಾಟಕ ಪ್ರದೇಶದ ಸಾರ್ವಜನಿಕರಿಗೆ ಗುಣಮಟ್ಟದ ಹಾಗೂ ವಿಶ್ವಾಸಾರ್ಹ ಸಾರಿಗೆ ಸೇವೆ ಒದಗಿಸುವ ಉದ್ದೇಶದಿಂದ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಕ್ಕೆ (ಕೆಕೆಆರ್‌ಟಿಸಿ) 400 ಹೊಸ ಬಸ್‌ಗಳನ್ನು ಖರೀದಿಸಲು ಸಚಿವ ಸಂಪುಟ ಅನುಮೋದನೆ ನೀಡಿದೆ ಎಂದು ಗೃಹ, ಮಾಹಿತಿ ಜಾಗೂ ಜೈವಿಕ ತಂತ್ರಜ್ಞಾನ ಮತ್ತು ಇ–ಆಡಳಿತ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.



2025–26ನೇ ಸಾಲಿನ ಆಯ ವ್ಯಯ ಭಾಷಣದ ಕಂಡಿಕೆ 469(ಋ)ರ ಘೋಷಣೆಯಂತೆ ಕೆಕೆಆರ್‌ಟಿಸಿಗೆ ಹಂಚಿಕೆಯಾಗಿರುವ 400 ಬಸ್‌ಗಳನ್ನು ಖರೀದಿಸಲು ಪ್ರತಿ ಬಸ್‌ಗೆ ಅಂದಾಜು ರೂ.38 ಲಕ್ಷ ರೂ.ಗಳಂತೆ ಅಂದಾಜು ರೂ.152 ಕೋಟಿ ವೆಚ್ಚವಾಗಲಿದೆ ಎಂದು ಸಚಿವರು ಹೇಳಿದ್ದಾರೆ.

**ಪ್ರಯಾಣಿಕರ ಹೆಚ್ಚುತ್ತಿರುವ ಬೇಡಿಕೆ**

ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಸಾರ್ವಜನಿಕ ಸಾರಿಗೆಗೆ ಬೇಡಿಕೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಅದರಲ್ಲೂ ರಾಜ್ಯ ಸರ್ಕಾರದ ಶಕ್ತಿ ಯೋಜನೆ ಜಾರಿಯಾದ ನಂತರ ಮಹಿಳಾ ಪ್ರಯಾಣಿಕರ ಸಂಖ್ಯೆ ಹೆಚ್ಚಳವಾಗಿದ್ದು, ನಿಗಮದ ಮೇಲೆ ಸಾರಿಗೆ ಸೇವೆಯ ಒತ್ತಡವೂ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಹೊಸ ಬಸ್‌ಗಳ ಸೇರ್ಪಡೆ ಅಗತ್ಯವಾಗಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಮಾಹಿತಿ ನೀಡಿದ್ದಾರೆ.

400 ಬಸ್‌ಗಳ ಖರೀದಿಗೆ ಅಗತ್ಯವಿರುವ ರೂ.152 ಕೋಟಿ ವೆಚ್ಚದಲ್ಲಿ ಶೇ.50ರಷ್ಟು ಮೊತ್ತವನ್ನು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ) ಹಾಗೂ ಉಳಿದ ಶೇ.50ರಷ್ಟು ಮೊತ್ತವನ್ನು ರಾಜ್ಯ ಸರ್ಕಾರ ಭರಿಸುವ ಉದ್ದೇಶ ಹೊಂದಲಾಗಿದೆ, ಕೆಕೆಆರ್‌ಡಿಬಿಯಿಂದ ಲಭ್ಯವಾಗುವ ಅನುದಾನ ಹಾಗೂ ರಾಜ್ಯ ಸರ್ಕಾರದ ಅನುದಾನವನ್ನು ಬಳಸಿಕೊಂಡು ಹಂತ ಹಂತವಾಗಿ ಬಸ್‌ಗಳನ್ನು ಖರೀದಿಸಲು ಉದ್ದೇಶಿಸಲಾಗಿದೆ ಎಂದೂ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ

ಹೊಸ ಬಸ್‌ಗಳ ಸೇರ್ಪಡೆಯಿಂದ ಕಲ್ಯಾಣ ಕರ್ನಾಟಕದ ವಿವಿಧ ಜಿಲ್ಲೆಗಳು ಹಾಗೂ ಗ್ರಾಮೀಣ ಪ್ರದೇಶಗಳಿಗೆ ಸಾರ್ವಜನಿಕ ಸಾರಿಗೆ ಸಂಪರ್ಕವನ್ನು ಮತ್ತಷ್ಟು ಸುಧಾರಿಸಲು ಸಾಧ್ಯವಾಗಲಿದೆ. ಪ್ರಯಾಣಿಕರ ಹೆಚ್ಚುತ್ತಿರುವ ಬೇಡಿಕೆಗೆ ಅನುಗುಣವಾಗಿ ಹೊಸ ಅನುಸೂಚಿಗಳನ್ನು ಕಾರ್ಯಾಚರಣೆಗೊಳಿಸಲು, ಹಳೆಯ ಬಸ್‌ಗಳನ್ನು ಬದಲಾಯಿಸಲು ಹಾಗೂ ಸಾರಿಗೆ ಸೇವೆಯನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಒದಗಿಸಲು ಈ ಕ್ರಮ ನೆರವಾಗಲಿದೆ ಎಂದು ಹೇಳಿರುವ ಸಚಿವ ಪ್ರಿಯಾಂಕ್ ಖರ್ಗೆ ಕಲ್ಯಾಣ ಕರ್ನಾಟಕ ಭಾಗದ ಸಾರ್ವಜನಿಕರಿಗೆ ಕೈಗೆಟುಕುವ ದರದಲ್ಲಿ ಸುರಕ್ಷಿತ, ವಿಶ್ವಾಸಾರ್ಹ ಹಾಗೂ ಉತ್ತಮ ಗುಣಮಟ್ಟದ ಸಾರಿಗೆ ಸೇವೆ ಒದಗಿಸುವ ಸರ್ಕಾರದ ಉದ್ದೇಶಕ್ಕೆ ಈ ಹೊಸ ಬಸ್‌ಗಳ ಸೇರ್ಪಡೆ ಪೂರಕವಾಗಲಿದೆ ಎಂದಿದ್ದಾರೆ.

# ಪ್ರತಿಭಟನೆ ನಡುವೆಯೂ ಕಬಿನಿ, ಕೆಆರ್‌ಎಸ್‌ನಿಂದ 12 ಸಾವಿರ ಕ್ಯೂಸೆಕ್ ನೀರು ಬಿಡುಗಡೆ

**ಮಂಡ್ಯ, ಆ.13:** ಕಾವೇರಿ ನೀರು ಬಿಡುಗಡೆ ಆದೇಶ ವಿರೋಧಿಸಿ ರಾಜ್ಯದ ವಿವಿಧೆಡೆ ಪ್ರತಿಭಟನೆಗಳು ನಡೆಯುತ್ತಿರುವ ನಡುವೆಯೇ, ಕಾವೇರಿ ಕೊಳ್ಳದ ಪ್ರಮುಖ ಜಲಾಶಯ ಗಳಾದ ಕಬಿನಿ ಹಾಗೂ ಕೃಷ್ಣರಾಜಸಾಗರ ಜಲಾಶಯಗಳಿಂದ ಒಟ್ಟು ಸುಮಾರು 12 ಸಾವಿರ ಕ್ಯೂಸೆಕ್ ನೀರನ್ನು ನದಿಗೆ ಹರಿಸಲಾಗುತ್ತಿದೆ. ಮೈಸೂರು ಜಿಲ್ಲೆ ಎಚ್.ಡಿ.ಕೋಟೆ ತಾಲ್ಲೂಕಿನ ಬೀಚನಹಳ್ಳಿಯಲ್ಲಿರುವ ಕಬಿನಿ ಜಲಾಶಯವು ಕಳೆದ ತಿಂಗಳೇ ಭರ್ತಿಯಾಗಿದೆ. ಪ್ರಸ್ತುತ ಕೇರಳದ ವಯನಾಡಿನಲ್ಲಿ ಮಳೆ ಮುಂದುವರಿದಿರುವು ದರಿಂದ ಜಲಾಶಯಕ್ಕೆ ಒಳಹರಿವು ಹೆಚ್ಚಾಗಿದೆ. ಗುರುವಾರ ಬೆಳಗ್ಗೆ ವೇಳೆಗೆ ಜಲಾಶಯಕ್ಕೆ 8,448 ಕ್ಯೂಸೆಕ್ ನೀರು ಹರಿದು ಬರುತ್ತಿದ್ದು, ಸುರಕ್ಷತೆಯ ದೃಷ್ಟಿಯಿಂದ ಕಪಿಲಾ ನದಿ ಮೂಲಕ 10 ಸಾವಿರ ಕ್ಯೂಸೆಕ್ ನೀರನ್ನು ಹೊರಬಿಡಲಾಗುತ್ತಿದೆ. 2284 ಅಡಿ ಗರಿಷ್ಠ ಸಾಮರ್ಥ್ಯದ ಕಬಿನಿಯಲ್ಲಿ ಪ್ರಸ್ತುತ 2282.36 ಅಡಿ ನೀರಿದ್ದು, ಶೇ 90ಕ್ಕೂ ಹೆಚ್ಚು (19 ಟಿಎಂಸಿ) ನೀರು ಸಂಗ್ರಹವಾಗಿದೆ. ಕಳೆದ 20 ದಿನಗಳಲ್ಲಿ 16 ಟಿಎಂಸಿಗೂ ಅಧಿಕ ನೀರು ಹರಿದು ಹೋಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಮಂಡ್ಯ ಜಿಲ್ಲೆಯ ಕೆಆರ್‌ಎಸ್ ಜಲಾಶಯಕ್ಕೆ ಒಳಹರಿವು ಕೊಂಚ ಕಡಿಮೆಯಾಗಿದ್ದು, ಪ್ರಸ್ತುತ 4,875 ಕ್ಯೂಸೆಕ್ ನೀರು ಹರಿದು ಬರುತ್ತಿದೆ. ಜಲಾಶಯದಿಂದ ಕುಡಿಯುವ ನೀರು ಹಾಗೂ ಕೆರೆಗಳನ್ನು ತುಂಬಿಸಲು 2,310 ಕ್ಯೂಸೆಕ್ ನೀರು ಬಿಡಲಾಗುತ್ತಿದೆ. 124.80 ಅಡಿ ಗರಿಷ್ಠ ಮಟ್ಟದ ಕೆಆರ್‌ಎಸ್ನಲ್ಲಿ ಪ್ರಸ್ತುತ 109.74 ಅಡಿ ನೀರಿದ್ದು, ಭರ್ತಿಯಾಗಲು ಇನ್ನೂ 15 ಅಡಿ ನೀರು ಬಾಕಿ ಇದೆ. ಮತ್ತೊಂದೆಡೆ ಕೊಡಗಿನ ಹಾರಂಗಿ ಜಲಾಶಯ ಸಂಪೂರ್ಣ ಭರ್ತಿಯಾಗಿದ್ದು (2,858.07 ಅಡಿ), ಜಲಾಶಯಕ್ಕೆ 4,133 ಕ್ಯೂಸೆಕ್ ಒಳಹರಿವಿದೆ. ಇಲ್ಲಿಂದ ಹೊರಹರಿವಿನ ಪ್ರಮಾಣವನ್ನು 5 ಸಾವಿರ ಕ್ಯೂಸೆಕ್‌ಗೆ ತಗ್ಗಿಸಲಾಗಿದೆ.

**ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ ಅಭಿಮತ**

# ಮೀಸಲಾತಿ ದುರುಪಯೋಗ ತಡೆಗೆ ಜಾತಿಗಿಂತ ಆರ್ಥಿಕತೆ ಮಾನದಂಡವಾಗಬೇಕು

**ಮೈಸೂರು, ಆ.13:** ಮೀಸಲಾತಿ ದುರುಪಯೋಗವಾಗುವುದನ್ನು ತಪ್ಪಿಸಲು ಜಾತಿಗಿಂತ ಆರ್ಥಿಕತೆ ಮಾನದಂಡವಾಗಬೇಕು ಎಂದು ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ ಅಭಿಪ್ರಾಯ ಪಟ್ಟರು.



ಕನ್ನಡ ಸಾಹಿತ್ಯ ಪರಿಷತ್ತಿನ ಮೈಸೂರು ತಾಲೂಕು ಘಟಕದಿಂದ ಮಹಾರಾಣಿ ಮಹಿಳಾ ಕಲಾ ಕಾಲೇಜಿನಲ್ಲಿ ಆಯೋಜಿಸಿದ್ದ 'ಸಾರ್ವತ್ರಿಕ ಚುನಾವಣೆಯಲ್ಲಿ ಮಹಿಳಾ ಮೀಸಲಾತಿ' ಕುರಿತ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು.ಜಾತಿಯ ಕಾರಣಕ್ಕೆ ಪ್ರಭಾವಿ ರಾಜಕಾರಣಿಗಳ ಮಕ್ಕಳು, ರಾಷ್ಟ್ರಪತಿ ಮಕ್ಕಳಿಗೆ, ನ್ಯಾಯಾಧೀಶರ ಮಕ್ಕಳಿಗೆ ಮೀಸಲಾತಿ ಬೇಕಾ. ಅದೇ ಜಾತಿಯಲ್ಲಿರುವ ಆರ್ಥಿಕವಾಗಿ ಹಿಂದುಳಿದವರಿಗೆ ಮೀಸಲಾತಿ ಸಿಗಬೇಡವೇ ಎಂದು ಪ್ರಶ್ನಿಸಿದರು. ಶೇ.75 ಜನ ಆರ್ಥಿಕವಾಗಿ ಸಬಲರಾಗಿರುವವರೇ ಮೀಸಲಾತಿ ಪಡೆಯುತ್ತಿದ್ದಾರೆ. ಇದು ತಪ್ಪು, ಆಯಾ ಜಾತಿಯಲ್ಲಿರುವ ಆರ್ಥಿಕವಾಗಿ ಹಿಂದುಳಿದವರಿಗೆ ಈ ಸೌಲಭ್ಯ ಸಿಗಬೇಕು ಎಂದು ಹೇಳಿದರು.

ಸಮಾಜದಲ್ಲಿ ತಾರತಮ್ಯ ಇರಬಾರದು. ಪುರುಷ, ಮಹಿಳೆ, ಮೇಲು, ಕೀಳು ಎನ್ನುವುದು ಹೋಗಬೇಕು. ಯಾವುದೇ ಮೀಸಲಾತಿ ಇಲ್ಲದೇ ಮಹಿಳೆಯೊಬ್ಬರು 16 ವರ್ಷ ಪ್ರಧಾನಿಯಾಗಿ ದೇಶವನ್ನು ಆಳಿದ್ದಾರೆ. ಆದರೂ ಮಹಿಳೆಯರಿಗೆ ಸಿಗಬೇಕಾದ ಅವಕಾಶ ಇನ್ನೂ ಸಿಕ್ಕಿಲ್ಲ. ಆದ್ದರಿಂದ ಮಹಿಳೆಯರಿಗೂ ಅವಕಾಶ ನೀಡಬೇಕು ಎಂದರು.

ಶಾಸಕ ಕೆ.ಹರೀಶ್ ಗೌಡ, ರಾಜಕೀಯ ಮೀಸಲಾತಿ ಇಲ್ಲದಿದ್ದರೆ ಯಾವುದೇ ಪುರುಷರು, ಮಹಿಳೆಯರನ್ನು ಚುನಾವಣೆಗೆ ಸ್ಪರ್ಧಿಸಲು ಬಿಡುವುದಿಲ್ಲ. ಆದ್ದರಿಂದ ಮೀಸಲಾತಿ ಮೂಲಕವೇ ಅವರಿಗೆ ಅವಕಾಶ ನೀಡಬೇಕು ಎಂದರು.ಮಹಿಳೆಯರಿಗೆ ಮೀಸಲಾತಿ ನೀಡಿದರೆ ಆಡಳಿತದಲ್ಲಿ ಭ್ರಷ್ಟಾಚಾರ ಕಡಿಮೆಯಾಗ ಬಹುದು. ಆದ್ದರಿಂದ ಸಮಾಜ ಸುಧಾರಣೆ, ಸ್ವಚ್ಛ ಆಡಳಿತಕ್ಕೆ ಮಹಿಳೆಯರಿಗೆ ರಾಜಕೀಯ ಮೀಸಲಾತಿ ನೀಡಬೇಕು ಎಂದು ಹೇಳಿದರು. ಮಹಾರಾಣಿ ಮಹಿಳಾ ಕಲಾ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ.ಕಾವ್ಯಶ್ರೀ, 'ಮಹಿಳೆಯರಿಗೆ ಅವಕಾಶ ಮತ್ತು ಅರ್ಹತೆ ಸಿಗಬೇಕಾದರೆ ಮೀಸಲಾತಿ ಬೇಕು' ಎಂಬ ವಿಷಯ ಮಂಡಿಸಿದರು.

# ಸಾರ್ವಜನಿಕ ಸೇವೆ, ಶುಚಿತ್ವಕ್ಕೆ ಆದ್ಯತೆ ನೀಡಲು ಡಿ.ಸಿ ಡಾ.ಕೆ.ಆನಂದ ಸೂಚನೆ

**ಉಪ ನೋಂದಣಾಧಿಕಾರಿಗಳ ಕಚೇರಿಗೆ ದಿಢೀರ್ ಭೇಟಿ ಪರಿಶೀಲನೆ**

**ವಿಜಯಪುರ,ಆ.13,** ನಗರದ ಸೊಲ್ಲಾಪುರ ರಸ್ತೆಯಲ್ಲಿರುವ ಉಪ ನೋಂದಣಾಧಿಕಾರಿಗಳ ಕಚೇರಿಗೆ ಗುರುವಾರ ಜಿಲ್ಲಾಧಿಕಾರಿಗಳಾದ ಡಾ. ಆನಂದ ಕೆ. ಅವರು ದಿಢೀರ್ ಭೇಟಿ ನೀಡಿ, ಕಚೇರಿಯ ದೈನಂದಿನ ಆಡಳಿತ ಕಾರ್ಯವೈಖರಿ ಹಾಗೂ ಹಾಲಿ ವ್ಯವಸ್ಥೆಗಳ ಕುರಿತು ಸಮಗ್ರವಾಗಿ ಪರಿಶೀಲನೆ ನಡೆಸಿದರು. ಕಚೇರಿ ಭೇಟಿಯ ವೇಳೆ ಕಚೇರಿಯ ಪರಿಸರ ಪರಿಶೀಲಿಸಿದ ಜಿಲ್ಲಾಧಿಕಾರಿಗಳು, ಇಡೀ ಕಚೇರಿಯ ಆವರಣದಲ್ಲಿ ಸಂಪೂರ್ಣ ಶುಚಿತ್ವ, ಶಿಸ್ತು ಹಾಗೂ ಚೊಕ್ಕಟವಾಗಿರುವಂತೆ ನೋಡಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಹಾಗೂ ಸಿಬ್ಬಂದಿಗೆ ಚುರುಕು ಮುಟ್ಟಿಸುವ ಮೂಲಕ ಕಟ್ಟು–ನಿಟ್ಟಿನ ಸೂಚನೆ ನೀಡಿದರು.

ಕಚೇರಿಗೆ ಆಗಮಿಸುವ ಸಾರ್ವಜನಿಕರ ಹಿತಾಸಕ್ತಿಗೆ ಮೊದಲ ಆದ್ಯತೆ ನೀಡಬೇಕು ಎಂದು ಸಲಹೆ ಮಾಡಿದರು.

**ನೀರಾವರಿ ಸಲಹಾ ಸಮಿತಿ ಸಭೆ ನಿರ್ಣಯ**

# ತುಂಗಭದ್ರಾ ಕಾಲುವೆಗಳಿಗೆ ೯೦ ದಿನಗಳವರೆಗೆ ಮಾತ್ರ ನೀರು

**ರಾಯಚೂರು, ಆ. 13:** ತುಂಗಭದ್ರಾ ಜಲಾಶಯದಲ್ಲಿ ಸದ್ಯ 82 ಟಿಎಂಸಿ ನೀರು ಲಭ್ಯವಿದ್ದು, ಈ ಲಭ್ಯತೆ ಆಧರಿಸಿ ಕಾಲುವೆಗಳಿಗೆ 90 ದಿನಗಳ ಅವಧಿವರೆಗೆ ಮಾತ್ರ ನೀರು ಹರಿಸಲು ತುಂಗಭದ್ರಾ ಯೋಜನೆ ಮತ್ತು ವಿಜಯನಗರ ಕಾಲುವೆಗಳ 126ನೇ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ನಿರ್ಣಯಿಸಲಾಗಿದೆ.



ಮುನಿರಾಬಾದ್‌ನ ಕಾಡಾ ಟಿ.ಬಿ.ಪಿ. ಸಭಾಂಗಣದಲ್ಲಿ ನಡೆದ ಸಭೆಯ ಬಳಿಕ ಮಾಹಿತಿ ನೀಡಿದ ಸಚಿವ ಶಿವರಾಜ ತಂಗಡಗಿ, ಸದ್ಯ ಈಗ ಜಲಾಶಯದಲ್ಲಿ 82 ಟಿಎಂಸಿ ನೀರು ಮಾತ್ರ ಇದೆ. 120 ದಿನಗಳವರೆಗೆ ನೀರು ಹರಿಸಲು ಜಲಾಶಯದಲ್ಲಿ 16 ಟಿಎಂಸಿ ನೀರಿನ ಕೊರತೆಯಿದೆ. ಮುಂದಿನ ದಿನಗಳಲ್ಲಿ ಇನ್ನು 16 ಟಿಎಂಸಿ ನೀರು ಬರುತ್ತದೆ ಎಂದು ನಿರೀಕ್ಷಿಸಲಾಗಿದೆ. ಕುಡಿಯುವ ನೀರಿಗಾಗಿ ಜಲಾಶಯದಲ್ಲಿ 10 ಟಿಎಂಸಿ ನೀರು ಬೇಕಾಗಲಿದೆ ಎಂದರು.

ರೈತರ ಬೇಡಿಕೆಯಂತೆ 120 ಗಳವರೆಗೂ ಸದ್ಯ ಕಾಲುವೆಗಳಿಗೆ ನೀರು ಹರಿಸುವುದು ತುಂಬಾ ಅಗತ್ಯವಿದೆ ಎಂದು ಸಚಿವ ಬಿ ನಾಗೇಂದ್ರ ಹಾಗೂ ಶಾಸಕ ಜೆ ಎನ್ ಗಣೇಶ ಮತ್ತು ಬಿ ಎಂ ನಾಗರಾಜ ಅವರು ಸಲಹೆ ಮಾಡಿದರು. ರಾಯಚೂರು, ಕೊಪ್ಪಳ, ವಿಜಯನಗರ, ಬಳ್ಳಾರಿ ಜಿಲ್ಲೆಗಳ ಶಾಸಕರು ಸಹ ಕಾಲುವೆಗಳಿಗೆ ತುರ್ತಾಗಿ ನೀರು ಬಿಡಲು ಸಲಹೆ ಮಾಡಿದ್ದಾರೆ. ಕಾಲುವೆಗಳಿಗೆ ಸದ್ಯ ನೀರು ಹರಿಸಲೇಬೇಕು ಎಂದು ಬೆಳಗ್ಗೆ ರೈತ ಮುಖಂಡರು ಸಹ ಹಕ್ಕೋತ್ತಾಯ ಮಾಡಿದ್ದಾರೆ. ಎಲ್ಲರ ಸಲಹೆಯಂತೆ ನೀರಿನ ಲಭ್ಯತೆ ಆಧರಿಸಿ ಸದ್ಯ 90 ದಿನಗಳ ಅವಧಿವರೆಗೆ ಮಾತ್ರ ಕಾಲುವೆಗಳಿಗೆ ನೀರು ಹರಿಸುವುದು ಸೂಕ್ತ ಎಂದು ಸಭೆಯಲ್ಲಿ ಒಮ್ಮತದಿಂದ ನಿರ್ಣಯಿಸಲಾಯಿತು ಎಂದು ಸಭೆಯ ನಂತರ ಮಾಧ್ಯಮಗಳಿಗೆ ತಿಳಿಸಿದರು.

**ಸೆಪ್ಟೆಂಬರ್ 11ಕ್ಕೆ ಮತ್ತೆ ಸಭೆ:** ಕಾಲುವೆಗೆ ನೀರು ಹರಿಸುವ ಸಂಬಂಧ ಬೆಳಗ್ಗೆ ರೈತರ ಸಲಹೆ ಪಡೆಯಲಾಗಿದೆ. ಬಳಿಕ ಈ ಭಾಗದ ಎಲ್ಲ ಜನ ಪ್ರತಿನಿಧಿಗಳ ಸಭೆ ನಡೆಸಿ ಅವರ ಸಲಹೆ ಪಡೆಯಲಾಗಿದೆ. ಎಲ್ಲರ ಸಲಹೆ ಪಡೆದುಕೊಂಡೇ ಸದ್ಯ 90 ದಿನಗಳವರೆಗೆ ಮಾತ್ರ ಕಾಲುವೆ ನೀರು ಹರಿಸಲು ನಿರ್ಣಯಿಸಲಾಗಿದೆ. ಸದ್ಯ ಜಲಾಶಯದಲ್ಲಿ ಇರುವ ನೀರಿನ ಲಭ್ಯತೆ ಆಧರಿಸಿಯೇ ಈಗ 90 ದಿನಗಳಿಗೆ ಮಾತ್ರ ನೀರು ಹರಿಸಲು ರೈತರಿಗೆ ಗ್ಯಾರಂಟಿ ಕೊಡುತ್ತೇವೆ. ಮುಂದಿನ ದಿನಗಳಲ್ಲಿ ನೀರು ಹರಿಸುವುದನ್ನು ಮಳೆ ಆಧರಿಸಿಯೇ ನಿರ್ಧರಿಸುತ್ತೇವೆ. ಈ ಬಗ್ಗೆ ಚರ್ಚಿಸಲು ಮುಂದಿನ ತಿಂಗಳು ಸೆಪ್ಟೆಂಬರ್ 11ಕ್ಕೆ ಪುನಃ ಸಭೆ ನಡೆಸಿ ಚರ್ಚಿಸಿ ಅಂದಿನ ಪರಿಸ್ಥಿತಿಗೆ ಅನುಗುಣವಾಗಿ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು.

# ಕಳಪೆ ಕೊಕಪೀಟ್‌ನಿಂದ 400 ಎಕರೆ ಮೆಣಸಿನಕಾಯಿ ಸಸಿ ಮಣ್ಣುಪಾಲು ಸಂಕಷ್ಟದಲ್ಲಿ ರೈತರು, ಮೋಸಹೋದ ನರ್ಸರಿ ಮಾಲೀಕರು

**ಬಳ್ಳಾರಿ ಆ 13.** ನಗರದ ಗ್ರಾಮೀಣ ಕ್ಷೇತ್ರ ವ್ಯಾಪ್ತಿಯ ವೈ. ಬೂದಿಹಾಳ್ ಗ್ರಾಮದಲ್ಲಿ ಕಳಪೆ ಗುಣಮಟ್ಟದ ಕೊಕೊಪೀಟ್ ಬಳಕೆಯಿಂದ ಸುಮಾರು 400 ಎಕರೆ ಪ್ರದೇಶದಲ್ಲಿ ಬೆಳೆಸಲು ಸಿದ್ಧಪಡಿಸಿದ್ದ ಮೆಣಸಿನಕಾಯಿ ಸಸಿಗಳು ಹಾನಿಗೊಳಗಾಗಿದ್ದು, ರೈತರು ಹಾಗೂ ನರ್ಸರಿ ಮಾಲೀಕರು ಸಂಕಷ್ಟಕ್ಕೆ ಸಿಲುಕಿದ್ದಾರೆ.



ವೈ.ಬದಿಹಾಳ್ ಗ್ರಾಮದ ಬಸರಕೋಡು ಎರ್ರೆಪ್ಪ ಅನ್ನುವ ರೈತರ ಮಕ್ಕಳು ಬಸವರಾಜ್ ರಾಮಾಂಜಿನಿ. ಕೆಲ ವರ್ಷಗಳದಿಂದ,ನರ್ಸರಿ ಮಾಡುತ್ತ ಬಂದಿದ್ದಾರೆ. ಈ ನರ್ಸರಿ ಮೇಲೆ ಸುತ್ತ ಮುತ್ತು ರೈತರ ಗೆ ನಂಬಿಕೆ ಇದೇ, ಎಂದು ಕೂಡ ಈರೀತಿ ಆಗಿಲ್ಲ,ಇವರು ಬೇರೆ ನರ್ಸರಿ ಗಳಲ್ಲಿ ಸಸಿ ಬೆಳಿಸಿ ಕೊಡಲು, ಒಂದು ಸಸಿ ಗೆ, 50.60 ಪೈಸೆ ತಗದು ಕೊಂಡರೆ, ಇವರು ಮಾತ್ರ 40 ಪೈಸೆ ನಲ್ಲಿ ಬೆಳಿಸಿ ಕೊಡುತ್ತಾರೆ. ಪ್ರತಿ ವರ್ಷ ಮೈಸೂರ್ ಮೂಲದಿಂದ, ನರ್ಸರಿಗೆ ಬೇಕು ಆಗಿರುವ, ಕೋಕೋಪಿಟ್, ಖರೀದಿ ಮಾಡುತ ಇದ್ದರು, ಆದರೇ ಈ ವರ್ಷಅದು ಸರಿಯಾಗಿ ಸಿಗದೇ ಪರಿಚಯ ಇರುವ ಅವರ ಬಳಿ ಖರೀದಿ ಮಾಡಿದ್ದಾರೆ, ಮೋಸ ಹೋಗಿದ್ದಾರೆ.

ಕಾರಣ ನರ್ಸರಿಗಳಲ್ಲಿ ಮೆಣಸಿನಕಾಯಿ ಸಸಿಗಳನ್ನು ಬೆಳೆಸಲು ಬಳಸಿದ ಕೊಕೊಪೀಟ್ ಗುಣಮಟ್ಟದ ಬಗ್ಗೆ ರೈತರು ಹಾಗೂ ನರ್ಸರಿ ಮಾಲೀಕರು ಅನುಮಾನ ವ್ಯಕ್ತಪಡಿಸಿದ್ದಾರೆ. ಸಾಮಾನ್ಯವಾಗಿ ಸುಮಾರು 60 ದಿನಗಳಲ್ಲಿ ಬೆಳೆಯಬೇಕಿದ್ದ ಸಸಿಗಳು ಕೇವಲ 20 ದಿನಗಳಲ್ಲೇ ಬೆಳವಣಿಗೆ ಕುಂಠಿತಗೊಂಡು ಹಾಳಾಗಿರುವುದು ಆತಂಕಕ್ಕೆ ಕಾರಣವಾಗಿದೆ.

ನರ್ಸರಿ ಮಾಲೀಕರ ಪ್ರಕಾರ, ಕಳೆದ ವರ್ಷ ಸುಮಾರು 5,400ಕ್ಕೆ ದೊರೆಯುತ್ತಿದ್ದ ಕೊಕೊಪೀಟ್ ಈ ವರ್ಷ 9,400ಕ್ಕೆ ಖರೀದಿಸಲಾಗಿದ್ದು, ಹೆಚ್ಚಿನ ಬೆಲೆ ನೀಡಿ ತರಿಸಲಾದ ಕೊಕೊಪೀಟ್ ನಿರೀಕ್ಷಿತ ಗುಣಮಟ್ಟ ಹೊಂದಿಲ್ಲ ಎಂಬ ಆರೋಪ ಕೇಳಿಬಂದಿದೆ. ಸುಮಾರು 3ರಿಂದ 4 ಎಕರೆ ಪ್ರದೇಶದ ವ್ಯಾಪ್ತಿಯಲ್ಲಿ ನರ್ಸರಿ ಮಾಲೀಕರು ದೊಡ್ಡ ಪ್ರಮಾಣದಲ್ಲಿ ಕೊಕೊಪೀಟ್ ಬಳಕೆ ಮಾಡಿದ್ದು, ಒಟ್ಟಾರೆ ಸುಮಾರು 60 ಟನ್‌ಗಳಷ್ಟು ಕೊಕೊಪೀಟ್ ಬಳಕೆಯಾಗಿರುವುದಾಗಿ ತಿಳಿದುಬಂದಿದೆ.

ಈ ಕೊಕೊಪೀಟ್ ಅನ್ನು ಸುಧಾಕರ್ ಮತ್ತು ಪ್ರಸಾದ್ ಎಂಬವರು ಸರಬರಾಜು ಮಾಡಿದ್ದು, ಯುಪಿಐ ಡಿಜಿಟಲ್ ಪಾವತಿ ಮೂಲಕ ಹಣ ಪಾವತಿಸಿ ಖರೀದಿಸಲಾಗಿದೆ ಎಂದು ನರ್ಸರಿ ಮಾಲೀಕರು ತಿಳಿಸಿದ್ದಾರೆ.

ಸುಧಾಕರ್ ಬಳ್ಳಾರಿ ಸುತ್ತು ಮುತ್ತು ನರ್ಸರಿ ಗಳು ಹಾಕಿ, ಜನ ಪರಿಚಯ ಇರುವ ಅವರು. ಸುಧಾಕರ್ ಮೇಲೆ ಈ ಹಿಂದೆ ಕೂಡ ಕೆಲ ಆರೋಪ ಗಳು ಬಂದಿವೆ. ಆದರೇ ಇಷ್ಟು ಮೋಸ ಆಗುತ್ತೆ ಅನ್ನುವ ಆಲೋಚನೆ ಇರಲಿಲ್ಲ.

**ನರ್ಸರಿ ಮಾಲೀಕರ ತಪ್ಪಿಲ್ಲ; ರೈತರು**

ಈ ಬೆಳವಣಿಗೆಯಿಂದ ನರ್ಸರಿ ಮಾಲೀಕರ ಮೇಲೆಯೇ ಆರೋಪ ಹೊರಿಸುವ ಬದಲು, ಕಳಪೆ ಗುಣಮಟ್ಟದ ಕೊಕೊಪೀಟ್ ಸರಬರಾಜು ಮಾಡಿದವರ ವಿರುದ್ಧ ಸೂಕ್ತ ತನಿಖೆ ನಡೆಸಬೇಕು ಎಂದು ರೈತರು ಒತ್ತಾಯಿಸಿದ್ದಾರೆ, ನರ್ಸರಿ ಮೇಲೆ ನಂಬಿಕೆ ಇದೇ.

ವೈ ಬೂದಿಹಾಳ್ ಗ್ರಾಮದ ರೈತರು ಮಾತನಾಡಿ, ನಾವು ಹಲವು ವರ್ಷಗಳಿಂದ ಎರ್ರೆಪ್ಪ ಅವರ ನರ್ಸರಿಯಲ್ಲಿ ಮೆಣಸಿನಕಾಯಿ ಸಸಿಗಳನ್ನು ಖರೀದಿಸಿ ಉತ್ತಮ ಬೆಳೆ ಪಡೆಯುತ್ತಿದ್ದೇವೆ.

ಈ ಹಿಂದೆ ಇಂತಹ ಸಮಸ್ಯೆ ಎದುರಾಗಿರಲಿಲ್ಲ. ಈ ಬಾರಿ ಕೊಕೊಪೀಟ್‌ನ ಗುಣಮಟ್ಟದಿಂದ ಸಸಿಗಳು ಹಾನಿಗೊಳಗಾಗಿವೆ. ಇದರಲ್ಲಿ ನರ್ಸರಿ ಮಾಲೀಕರ ತಪ್ಪಿಲ್ಲ. ಅವರು ಕೂಡ ನಮ್ಮಂತೆಯೇ ನಷ್ಟ ಅನುಭವಿಸುತ್ತಿದ್ದಾರೆ ಎಂದು ನರ್ಸರಿ ಮಾಲೀಕರ ಪರವಾಗಿ ಬೆಂಬಲ ವ್ಯಕ್ತಪಡಿಸಿದ್ದಾರೆ.

ಸುಮಾರು 400 ಎಕರೆ ಪ್ರದೇಶದ ರೈತರ ಬೆಳೆ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇರುವುದರಿಂದ ಕೃಷಿ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಸಸಿಗಳ ಸ್ಥಿತಿ ಹಾಗೂ ಬಳಸಲಾದ ಕೊಕೊಪೀಟ್‌ನ ಗುಣಮಟ್ಟ ಪರಿಶೀಲಿಸಬೇಕು. ಕೊಕೊಪೀಟ್ ಮಾದರಿಗಳನ್ನು ಪ್ರಯೋಗಾಲಯಕ್ಕೆ ಕಳುಹಿಸಿ ಗುಣಮಟ್ಟ ಪರೀಕ್ಷೆ ನಡೆಸಿ, ತಪ್ಪಿತಸ್ಥರು ಯಾರೇ ಆಗಿದ್ದರೂ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ರೈತರು ಆಗ್ರಹಿಸಿದ್ದಾರೆ.

ಕಳಪೆ ಗುಣಮಟ್ಟದ ವಸ್ತು ಸರಬರಾಜಿನಿಂದ ರೈತರು ಮತ್ತು ನರ್ಸರಿ ಮಾಲೀಕರು ಇಬ್ಬರೂ ನಷ್ಟ ಅನುಭವಿಸುವಂತಾಗಿದ್ದು, ಈ ಪ್ರಕರಣಕ್ಕೆ ಶೀಘ್ರ ನ್ಯಾಯ ದೊರೆಯಬೇಕು ಎಂಬುದು ರೈತರ ಒತ್ತಾಯವಾಗಿದೆ.

ಈಗಾಗಲೇ ಹೊಲಗಳಲ್ಲಿ ನೀರು ಬಂದಿದೆ, ಸಸಿ ಈ ರೇತಿ ಆಗಿದೆ, ಬೇರೆ ಕಡೆ ಸಸಿ ಸಿಗುತ್ತಾ ಇಲ್ಲ, ಸಿಕ್ಕರೆ ಅದೂ ದುಬಾರಿ ದರ ಹೇಳುತ್ತಾರೆ ಎಂದು ರೈತರು ಕಣ್ಣೀರು ಹಾಕಿದ್ದಾರೆ. ಈಗಾಗಲೇ ಬರಗಾಲ ಆಗಿದೆ, ನೀರು ಅಭಾವ ಇದೇ, ನಾವು ಬೇಸಾಯದ ಮೇಲೆ ಜೀವನ ಮಾಡಿಕೊಂಡು ಬದಕುಬೇಕು. 1.ಕೆಜಿ ಬೀಜ, 1.50.000.ಲಕ್ಷ ದಿಂದ 80.000 ಸಾವಿರ ವರಗೆ ಇದೆ ಅನ್ನುತ್ತಾರೆ ರೈತರು. ಸರ್ಕಾರ ಆಸರೆ ಆಗಬೇಕು, ಮೋಸ ಮಾಡಿದ್ದ ಕೋಕೋಪೀಟ್, ಮಾಲೀಕರನ್ನು ಬಂಧಿಸಿ ನ್ಯಾಯ ಕೊಡಿಸಬೇಕು ಅನ್ನುತ್ತಾರೆ.

**ಬೀದರ್ ಎಟಿಎಂ ೮೩ ಲಕ್ಷ ದರೋಡೆ ಪ್ರಕರಣ**

# 19 ತಿಂಗಳ ಬಳಿಕ ಬಿಹಾರದಲ್ಲಿ ಖದೀಮರ ಬೇಟೆಯಾಡಿದ ಕರ್ನಾಟಕ ಪೊಲೀಸರು

**ಬೀದರ್, ಆ. 13:** ಕಳೆದ ಒಂದೂವರೆ ವರ್ಷಕ್ಕೂ ಹೆಚ್ಚು ಕಾಲ ಬೀದರ್ ಪೊಲೀಸರಿಗೆ ದೊಡ್ಡ ಸವಾಲಾಗಿ ಪರಿಣಮಿಸಿದ್ದ, ಇಡೀ ರಾಜ್ಯವನ್ನೇ ಬೆಚ್ಚಿಬೀಳಿಸಿದ್ದ ಹಾಡುಹಗಲಿನ ಎಟಿಎಂ ದರೋಡೆ ಹಾಗೂ ಸೆಕ್ಯುರಿಟಿ ಗಾರ್ಡ್ ಕೊಲೆ ಪ್ರಕರಣಕ್ಕೆ ಕೊನೆಗೂ ಬಿಗ್ ಕ್ಲೈಮ್ಯಾಕ್ಸ್ ಸಿಕ್ಕಿದೆ! ಪ್ರಕರಣ ನಡೆದ ಭೀಕರ ಘಟನೆಗೆ ಭರ್ತಿ 1 ವರ್ಷ 7 ತಿಂಗಳ (19 ತಿಂಗಳು) ಬಳಿಕ, ಪ್ರಕರಣದ ಬಿಹಾರದ ಇಬ್ಬರು ಕುಖ್ಯಾತ ದರೋಡೆಕೋರರ ಹೆಡೆಮುರಿಗೆ ಕಟ್ಟಿ ಪೊಲೀಸರು ಬೀದರ್‌ಗೆ ಕರೆತಂದಿದ್ದಾರೆ.

ಬಂಧಿತ ಆರೋಪಿಗಳನ್ನು ಬಿಹಾರ ಮೂಲದ ಅಮನ್‌ಕುಮಾರ್ ಸಿಂಗ್ ಹಾಗೂ ಅಲೋಕ್‌ಕುಮಾರ್ ಎಂದು ಗುರುತಿಸಲಾಗಿದೆ. ಬಿಹಾರದ ವೈಶಾಲಿ ಜಿಲ್ಲೆಯ ಧಾಮೋದರ್ ಗ್ರಾಮದಲ್ಲಿ ಬುಧವಾರ ಮಧ್ಯಾಹ್ನ ಬೀದರ್ ಪೊಲೀಸರು ಅತ್ಯಂತ ಚಾಣಾಕ್ಷತನದ ಕಾರ್ಯಾಚರಣೆ ನಡೆಸಿ ಈ ಇಬ್ಬರೂ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಹಾಡಹಗಲೇ ನಡೆದಿದ್ದ ಆ ಭೀಕರ ದರೋಡೆ ಏನು?: ಜನವರಿ 16, 2025ರಂದು ಬೀದರ್ ನಗರದ ಹೃದಯಭಾಗದಲ್ಲಿರುವ ಎಸ್‌ಬಿಐ ಬ್ಯಾಂಕ್ ಹಾಗೂ ಎಟಿಎಂ ಮುಂಭಾಗದಲ್ಲಿ ಅತ್ಯಂತ ಭೀಕರ ದರೋಡೆ ನಡೆದಿತ್ತು. ಸಿಎಮ್‌ಎಸ್ ಏಜೆನ್ಸಿಯ ಕ್ಯಾಶ್‌ವ್ಯಾನ್‌ನಿಂದ ಹಣ ತುಂಬಲು ಬಂದಿದ್ದ ಸಿಬ್ಬಂದಿಯ ಮೇಲೆ ದರೋಡೆಕೋರರು ಗುಂಡಿನ ದಾಳಿ ನಡೆಸಿದ್ದರು. ಈ ವೇಳೆ ಸಿಎಮ್‌ಎಸ್ ಸಿಬ್ಬಂದಿ ಗಿರಿ ವೆಂಕಟೇಶ್ ಎಂಬುವವರು ಸ್ಥಳದಲ್ಲೇ ದಾರುಣವಾಗಿ ಸಾವನ್ನಪ್ಪಿದ್ದರೆ, ಶಿವಕುಮಾರ್ ಗುನ್ನಳ್ಳಿ ಎಂಬ ಇನ್ನೋರ್ವ ಸಿಬ್ಬಂದಿ ಗಂಭೀರವಾಗಿ ಗಾಯಗೊಂಡಿದ್ದರು. ದುಷ್ಕರ್ಮಿಗಳು ಸ್ಥಳದಲ್ಲೇ ಬರೋಬ್ಬರಿ 83 ಲಕ್ಷ ರೂಪಾಯಿ ನಗದನ್ನು ದರೋಡೆ ಮಾಡಿ ಪರಾರಿಯಾಗಿದ್ದರು.



ಕಾರ್ಯಾಚರಣೆ: ಪ್ರಕರಣ ನಡೆದ ದಿನದಿಂದಲೂ ಆರೋಪಿಗಳ ಪತ್ತೆಗೆ ಬಲೆ ಬೀಸಿದ್ದ ಬೀದರ್ ಪೊಲೀಸರಿಗೆ ಕಳೆದ 20 ದಿನಗಳ ಹಿಂದೆ ಆರೋಪಿಗಳ ಖಚಿತ ಸುಳಿವು ಸಿಕ್ಕಿತ್ತು. ಸುಳಿವು ಸಿಕ್ಕ ತಕ್ಷಣವೇ ಕಾರ್ಯಪ್ರವೃತ್ತರಾದ ಬೀದರ್ ಖಾಕಿಪಡೆ, ಕಳೆದ 20 ದಿನಗಳಿಂದ ಬಿಹಾರದಲ್ಲೇ ಬೀಡುಬಿಟ್ಟು ಆರೋಪಿಗಳ ಪ್ರತಿಯೊಂದು ಚಲನವಲನಗಳ ಮೇಲೆ ನಿರಂತರ ನಿಗಾ ಇಟ್ಟಿತ್ತು. ವಿಶೇಷವೆಂದರೆ, ಈ ಕಾರ್ಯಾಚರಣೆಯಲ್ಲಿ ಬಿಹಾರ ಅಥವಾ ಇತರ ಯಾವುದೇ ರಾಜ್ಯದ ಪೊಲೀಸರ ಸಹಾಯವನ್ನು ಪಡೆಯದೇ, ಮಾಹಿತಿ ಸೋರಿಕೆಯಾಗದಂತೆ ಅತ್ಯಂತ ಗೌಪ್ಯವಾಗಿ ಬೀದರ್ ಪೊಲೀಸರೇ ದಾಳಿ ನಡೆಸಿ ಆರೋಪಿಗಳನ್ನು ವಶಕ್ಕೆ ಪಡೆದಿದ್ದಾರೆ.

ಖಡಕ್ ಆಪರೇಷನ್ ನಡೆಸಿದ ಪೊಲೀಸ್ ತಂಡ: ಬೀದರ್ ಎಸ್‌ಪಿ ಪ್ರದೀಪ್ ಗುಂಟಿ ಅವರ ನೇರ ಉಸ್ತುವಾರಿಯಲ್ಲಿ ಈ ಹೈವೋಲ್ಟೇಜ್ ಆಪರೇಷನ್ ನಡೆದಿದೆ ಎಂದು ತಿಳಿಸಿದರು.

**ಈ ಕ್ರೈಂ ಆಪರೇಷನ್ ತಂಡದಲ್ಲಿ:** ಓರ್ವ ಎಸ್‌ಪಿ, ಇಬ್ಬರು ಡಿವೈಎಸ್ಪಿ, ಇಬ್ಬರು ಸಿಪಿಐ, ನಾಲ್ಕು ಪಿಎಸ್‌ಐ, 20 ತರಬೇತಿ ಪಡೆದ ಪೊಲೀಸ್ ಸಿಬ್ಬಂದಿ. ಕ್ರೈಮ್ ವಿಭಾಗದ 12 ನುರಿತ ಸಿಬ್ಬಂದಿ ಸೇರಿ ಒಟ್ಟು ದೊಡ್ಡ ಪಡೆಯೇ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿತ್ತು.

ದರೋಡೆ ನಡೆದ ಸ್ಥಳದಲ್ಲೇ ಸಾರ್ವಜನಿಕರ ಸಂಭ್ರಮಾಚರಿಸಿದರು. ಪಟಾಕಿ ಹಚ್ಚಿ ಹರ್ಷವ್ಯಕ್ತ ಪಡಿಸಿದ ಜನರು, ಪೊಲೀಸರ ಸಾಹಸವನ್ನು ಕೊಂಡಾಡಿದರು.

### ಡಿಜಿಟಲ್ ಯುಗದಲ್ಲಿ ಎಂಜಿನಿಯರಿಂಗ್ ಗಣಿತ

# ಪೈಥಾನ್-ಆಧಾರಿತ ಕಂಪ್ಯೂಟಿಂಗ್ ಮತ್ತು ಲ್ಯಾಟೆಕ್ಸ್ ದಾಖಲೀಕರಣ – ಶಿಕ್ಷಕರ ಅಭಿವೃದ್ಧಿ ಕಾರ್ಯಕ್ರಮ



**ಬಳ್ಳಾರಿ ಆ 13.** ವೀರಶೈವ ವಿದ್ಯಾವರ್ಧನ ಸಂಘ, ರಾವ್ ಬಹದ್ದೂರ್ ವೈ. ಮಹಾಬಲೇಶ್ವರಪ್ಪ ಎಂಜಿನಿಯರಿಂಗ್ ಕಾಲೇಜು, ಬಳ್ಳಾರಿ ಮೂಲಭೂತ ವಿಜ್ಞಾನ ವಿಭಾಗದಿಂದ, "ಡಿಜಿಟಲ್ ಯುಗದಲ್ಲಿ ಎಂಜಿನಿಯರಿಂಗ್ ಗಣಿತ: ಪೈಥಾನ್-ಆಧಾರಿತ ಕಂಪ್ಯೂಟಿಂಗ್ ಮತ್ತು ಲ್ಯಾಟೆಕ್ಸ್ ದಾಖಲೀಕರಣ" ಕುರಿತು, ಆಗಸ್ಟ್ 10 ರಿಂದ 14, 2026 ರವರೆಗೆ, ಐದು ದಿನಗಳ ಫ್ಯಾಕಲ್ಟಿ ಅಭಿವೃದ್ಧಿ ಕಾರ್ಯಕ್ರಮ (ಎಫ್‌ಡಿಪಿ) ವಿಜ್ಞಾನ ವೇದಿಕೆ ಉಪಕ್ರಮವನ್ನು ಆಯೋಜಿಸಲಾಗಿದೆ.

ಈ ಕಾರ್ಯಕ್ರಮದಲ್ಲಿ ಪ್ರೊ ಡಾ. ರಮಾನಂದ, ಪ್ರೊಫೆಸರ್, ಗಣಿತಶಾಸ್ತ್ರ ವಿಭಾಗ, ಸೇಂಟ್ ಜೋಸೆಫ್ ಇಂಜಿನಿಯರಿಂಗ್ ಕಾಲೇಜು, ಮಂಗಳೂರು ಪ್ರಾಂಶುಪಾಲರು ಡಾ. ಹೆಚ್.ಮಹಾಬಲೇಶ್ವರ, ಉಪಪ್ರಾಂಶುಪಾಲರು ಡಾ. ಸವಿತಾ ಸೊನೋಳಿ, ಗಣಿತಶಾಸ್ತ್ರ, ಭೌತಶಾಸ್ತ್ರ, ರಸಾಯನಶಾಸ್ತ್ರ ವಿಭಾಗಗಳ ಮುಖ್ಯಸ್ಥರು, ಡಾ. ಸುಮಂಗಳ,ಡಾ. ನಾಗಭೂಷಣ, ಡಾ. ಎನ್. ಎಂ. ಕೊಟ್ಟೂರೇಶ್ವರ,ವಿವಿಧ ಕಾಲೇಜುಗಳ ಅಧ್ಯಾಪಕರು ಭಾಗವಹಿಸಿದ್ದರು.

ಈ ಕಾರ್ಯಕ್ರಮದಲ್ಲಿ ಪ್ರೊ ಡಾ. ರಮಾನಂದ, ಮತ್ತು ಡಾ. ಶುಭ ವಿ.ಎಸ್, ಗಣಿತಶಾಸ್ತ್ರ ವಿಭಾಗ, ಸೇಂಟ್ ಜೋಸೆಫ್ ಇಂಜಿನಿಯರಿಂಗ್ ಕಾಲೇಜು, ಮಂಗಳೂರು ಎಂಜಿನಿಯರಿಂಗ್ ಗಣಿತವು ಹಸ್ತಚಾಲಿತ ಲೆಕ್ಕಾಚಾರಗಳಿಂದ ಡಿಜಿಟಲ್ ಲೆಕ್ಕಾಚಾರಕ್ಕೆ ಪರಿವರ್ತನೆಗೊಂಡಿದೆ. ಆಧುನಿಕ ಎಂಜಿನಿಯರ್‌ಗಳು ಸಂಖ್ಯಾತ್ಮಕ ವಿಶ್ಲೇಷಣೆಗಾಗಿ ಪೈಥಾನ್ ಮತ್ತು ತಾಂತ್ರಿಕ ದಾಖಲಾತಿಗಾಗಿ ಲ್ಯಾಟೆಕ್ಸ್ ಅನ್ನು ಸಂಯೋಜಿಸುತ್ತಾರೆ. ಈ ಏಕೀಕರಣವು ನಿಖರತೆ, ಪುನರಾವರ್ತನೀಯತೆ ಮತ್ತು ವೃತ್ತಿಪರ ಪ್ರಸ್ತುತಿಯನ್ನು ಖಚಿತಪಡಿಸುತ್ತದೆ, ಪರಿಕಲ್ಪನಾತ್ಮಕ ತಿಳುವಳಿಕೆ, ವಿಚಾರಣೆ ಆಧಾರಿತ ಕಲಿಕೆ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿನ ಪ್ರಗತಿಗೆ ವಿದ್ಯಾರ್ಥಿಗಳನ್ನು ಸಿದ್ಧಪಡಿಸಲು ತಂತ್ರಜ್ಞಾನದ ಏಕೀಕರಣಕ್ಕೆ ಒತ್ತು ನೀಡುತ್ತಿವೆ. ಗಣಿತವು ಈ ಕ್ಷೇತ್ರಗಳ ಮೂಲಭೂತ ಭಾಷೆಯಾಗಿ ಕಾರ್ಯ ನಿರ್ವಹಿಸುತ್ತದೆ, ಮಾಡೆಲಿಂಗ್, ಅಲ್ಗಾರಿದಮ್ ವಿನ್ಯಾಸ ಮತ್ತು ಡೇಟಾ ವಿಶ್ಲೇಷಣೆಯನ್ನು ಸಕ್ರಿಯಗೊಳಿಸುತ್ತದೆ. ಅವರು ವಿವರಿಸಿದರು. ಪ್ರಾಂಶುಪಾಲ ಡಾ. ಎಚ್.ಮಹಾಬಲೇಶ್ವರ, ಉನ್ನತ ಎಂಜಿನಿಯರಿಂಗ್ ಗಣಿತವು ಉದಯೋನ್ಮುಖ ತಂತ್ರಜ್ಞಾನಗಳ ಮೂಲಾಧಾರವಾಗಿದ್ದು, ಕೃತಕ ಬುದ್ಧಿಮತ್ತೆ, ಕ್ವಾಂಟಮ್ ಕಂಪ್ಯೂಟಿಂಗ್, ರೊಬೊಟಿಕ್ಸ್ ಮತ್ತು ಡೇಟಾ ಸೈನ್ಸ್‌ನಲ್ಲಿ ನಾವೀನ್ಯತೆಯನ್ನು ಸಕ್ರಿಯಗೊಳಿಸುವ ಮೂಲಭೂತ ಭಾಷೆಯಾಗಿ ಕಾರ್ಯನಿರ್ವಹಿಸುತ್ತದೆ. ಇದು ಸಂಕೀರ್ಣ ವ್ಯವಸ್ಥೆಗಳನ್ನು ಮಾದರಿ ಮಾಡಲು, ಪ್ರಕ್ರಿಯೆಗಳನ್ನು ಅತ್ಯುತ್ತಮ ವಾಗಿಸಲು ಮತ್ತು ಕಚ್ಚಾ ಡೇಟಾವನ್ನು ಕಾರ್ಯಸಾಧ್ಯ ಬುದ್ಧಿಮತ್ತೆಯಾಗಿ ಪರಿವರ್ತಿಸಲು ಅಗತ್ಯವಾದ ವಿಶ್ಲೇಷಣಾ ತ್ಮಕ ಸಾಧನಗಳನ್ನು ಒದಗಿಸುತ್ತದೆ, ಆದ್ದರಿಂದ ಅಧ್ಯಾಪಕರು ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಕೌಶಲ್ಯಗಳನ್ನು ಒದಗಿಸಬೇಕು ಎಂದು ಕೋರಿದರು. ಗಣಿತ ವಿಭಾಗದ ಮುಖ್ಯಸ್ಥರಾದ ಡಾ. ಸುಮಂಗಳ, ಶಿಕ್ಷಕರು ಇಂತಹ ಕೌಶಲ್ಯಗಳನ್ನು ಹೆಚ್ಚು ಹೆಚ್ಚು ಅಳವಡಿಸಿಕೊಳ್ಳಬೇಕು, ಎಂಜಿನಿಯ ರಿಂಗ್ ಸಮಸ್ಯೆಗಳನ್ನು ಪರಿಹರಿಸಲು ಗಣಿತದ ಪರಿಕಲ್ಪನೆಗಳನ್ನು ಅನ್ವಯಿಸುವಲ್ಲಿ ಶಿಕ್ಷಕರ ಜ್ಞಾನ ಮತ್ತು ಕೌಶಲ್ಯಗಳನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ. ಈ ಕಾರ್ಯಕ್ರಮವು ಸಾಮಾನ್ಯವಾಗಿ ಸಂಖ್ಯಾತ್ಮಕ ವಿಧಾನಗಳು, ಗಣಿತದ ಮಾದರಿಗಳು ಮತ್ತು ವಿವಿಧ ಎಂಜಿನಿಯರಿಂಗ್ ವಿಭಾಗಗಳಿಗೆ ಸಂಬಂಧಿಸಿದ ನಿರ್ದಿಷ್ಟ ತಂತ್ರಗಳನ್ನು ಒಳಗೊಂಡಿರುತ್ತದೆ. ವಿಷಯಗಳು ಸಾಮಾನ್ಯವಾಗಿ ಪ್ರಾಯೋಗಿಕ ತರಬೇತಿ ಮತ್ತು ಸಂಶೋಧನಾ ವಿಧಾನಗಳನ್ನು ಒಳಗೊಂಡಿರುತ್ತವೆ. ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಾನೆಕುಂಟೆ ಬಸವರಾಜ್ ಮಾತನಾಡಿ, ವಿಜ್ಞಾನಕ್ಕೆ ಅಗತ್ಯವಾದ ಭೌತಿಕ ವಿದ್ಯಮಾನಗಳ ಪರಿಕಲ್ಪನೆಗಳನ್ನು ಆಳವಾಗಿ ಅರ್ಥಮಾಡಿಕೊಳ್ಳಲು, ಭವಿಷ್ಯದಲ್ಲಿ, ಎಂಜಿನಿಯರಿಂಗ್ ಕೋರ್ಸ್‌ಗಳ ಶಿಕ್ಷಕರು ಇಂತಹ ಕಾರ್ಯಕ್ರಮಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಹಾಜರಾಗಬೇಕು. ಮತ್ತು ವಿದ್ಯಾರ್ಥಿಗಳು ಸಮಾಜಕ್ಕೆ ಕೊಡುಗೆ ನೀಡಲು ತಮ್ಮನ್ನು ತಾವು ನವೀಕರಿಸಿಕೊಳ್ಳಬೇಕು ಎಂದು ಹೇಳಿದರು.

ಈ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳು–ಡಾ.ರಮಾನಂದ, ಪ್ರೊಫೆಸರ್ ಗಣಿತ ವಿಭಾಗ,ಸೇಂಟ್ ಜೋಸೆಫ್ ಎಂಜಿನಿಯರಿಂಗ್ ಕಾಲೇಜು, ಮಂಗಳೂರು, ಡಾ. ಸ್ಮಿತಾ ಎಸ್. ಎಸ್, ಸಹಾಯಕ ಪ್ರೊಫೆಸರ್ ಮತ್ತು ಮುಖ್ಯಸ್ಥರು, ಗಣಿತ ವಿಭಾಗ, ಕ್ರಿಸ್ಟ್, ಬೆಂಗಳೂರು, ಡಾ. ಶುಭ ವಿ.ಎಸ್, ಮಾಜಿ ಸಹಾಯಕ ಪ್ರೊಫೆಸರ್ ಗಣಿತ ವಿಭಾಗ, ಸೇಂಟ್ ಜೋಸೆಫ್ ಎಂಜಿನಿಯರಿಂಗ್ ಕಾಲೇಜು, ಮಂಗಳೂರು, ಡಾ. ಎ. ಜಾನ್ ಕ್ಯಾಸ್ಪರ್, ಸಹಾಯಕ ಪ್ರೊಫೆಸರ್ ಗಣಿತ ವಿಭಾಗ, ಕ್ರಿಸ್ಟ್, ಬೆಂಗಳೂರು, ಡಾ. ಕೆ. ಸೂಸನ್ ಬೈರಿ, ಬೆಂಗಳೂರಿನ ರೇವಾ ವಿಶ್ವವಿದ್ಯಾಲಯ, ಗಣಿತ ವಿಭಾಗ, ಸಹಾಯಕ ಪ್ರೊಫೆಸರ್ ಬಿಎಂಎಸ್ ತಂತ್ರಜ್ಞಾನ ಮತ್ತು ನಿರ್ವಹಣಾ ಸಂಸ್ಥೆಯ ಗಣಿತ ವಿಭಾಗ, ಡಾ. ಗುರವ ಕೆ.ಆರ್, ಧಾರವಾಡ, ಕರ್ನಾಟಕ ಕಲಾ/ವಿಜ್ಞಾನ ಕಾಲೇಜಿನ ಗಣಿತ ವಿಭಾಗ, ಅಸೋಸಿಯೇಟ್ ಪ್ರೊಫೆಸರ್ ಡಾ. ಬಿ. ಪರ್ವತಲು ಭಾಗವಹಿಸಿದ್ದರು.



ಹುಬ್ಬಳ್ಳಿಯಲ್ಲಿ ಬಿಜೆಪಿ ಕಾರ್ಯಕರ್ತರು ತ್ರಿವರ್ಣಧ್ವಜದೊಂದಿಗೆ ಹರ್ ಘರ್ ತಿರಂಗಾ ಅಭಿಯಾನ ಆಚರಿಸಿದರು.

# ರಸ್ತೆ ಸುರಕ್ಷತೆ ಜತೆ ಅಪಘಾತ ತಡೆಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಿ: ಕಲಬುರಗಿ ಡಿಸಿ ಇಕ್ರಂ ಶರೀಫ್



**ಕಲಬುರಗಿ, ಆ 13:** ನಗರ ಮತ್ತು ಜಿಲ್ಲೆಯಲ್ಲಿ ಹೆಚ್ಚುತ್ತಿರುವ ರಸ್ತೆ ಅಪಘಾತಗಳನ್ನು ತಡೆಯಲು, ಹೆದ್ದಾರಿ ಸಂಚಾರ ಸುಗಮಗೊಳಿಸಲು ಹಾಗೂ ಮಿತಿಮೀರಿದ ಸರಕು ಸಾಗಣೆಗೆ ವಾಹನಗಳಿಗೆ ಕಡಿವಾಣ ಹಾಕಲು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಇಕ್ರಂ ಶರೀಫ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಸುಪ್ರೀಂ ಕೋರ್ಟ್ ಮಾರ್ಗ ದರ್ಶನದಂತೆ ರಸ್ತೆ ಸುರಕ್ಷತೆಗೆ ಮೊದಲ ಆದ್ಯತೆ ನೀಡಬೇಕು. ಈ ವಿಷಯದಲ್ಲಿ ನಿರ್ಲಕ್ಷ್ಯ ವಹಿಸುವ ಅಧಿಕಾರಿಗಳು ಹಾಗೂ ಗುತ್ತಿಗೆದಾರರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ವಿಶೇಷವಾಗಿ ಚಿತ್ತಾಪುರ, ಸೇಡಂ, ವಾಡಿ ಮತ್ತು ಜೇವರ್ಗಿ ಭಾಗದ ಗಣಿ ಹಾಗೂ ಕ್ವಾರಿಗಳಿಂದ ಮಿತಿಮೀರಿದ ಭಾರ ಹೊತ್ತು ಸಾಗುವ ಲಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು ಸೂಚಿಸಿದ ಅವರು, ಜಿಲ್ಲೆಯ ಎಲ್ಲಾ ಗಣಿ ಮತ್ತು ಕ್ವಾರಿಗಳ ಪ್ರವೇಶ ಹಾಗೂ ನಿರ್ಗಮನ ದ್ವಾರಗಳಲ್ಲಿ 15 ದಿನಗಳ ಒಳಗಾಗಿ ಸಿಸಿಟಿವಿಗಳನ್ನು ಅಳವಡಿಸಬೇಕು. ಈ ಸಿಸಿಟಿವಿಗಳ 'ಲೈವ್ ಲಿಂಕ್' ಅನ್ನು ಆರ್‌ಟಿಒ ಮತ್ತು ಪೊಲೀಸ್ ಅಧಿಕಾರಿಗಳ ಮೊಬೈಲ್‌ಗಳಿಗೆ ಸಂಪರ್ಕಿಸಲು ಆದೇಶಿಸಿದರು.

ನಿಯಮ ಉಲ್ಲಂಘಿಸುವ ವಾಹನ ಜಪ್ತಿ, ಎಫ್.ಐ.ಆರ್ ದಾಖಲಿಸುವುದು ಹಾಗೂ ಕ್ವಾರಿ ಪರವಾನಗಿ ರದ್ದುಗೊಳಿಸಲು ಅಧಿಕಾರಿಗಳಿಗೆ ಸೂಚಿಸಿದರು.ಹೆದ್ದಾರಿಗಳಲ್ಲಿ ಅತಿವೇಗದಿಂದ ಚಲಿಸುವ ವಾಹನಗಳನ್ನು ಪತ್ತೆಹಚ್ಚಲು 'ಸ್ಪೀಡ್ ಡಿಟೆಕ್ಷನ್ ಗನ್ಸ್' ಹಾಗೂ ಸಿಸಿಟಿವಿ ಬಳಕೆ ಮಾಡಲು ತಿಳಿಸಿದರು. ಕೆಎಸ್‌ಆರ್‌ಟಿಸಿ ಬಸ್‌ಗಳು, ಲಾರಿಗಳು ಹಾಗೂ ಸಿಮೆಂಟ್ ಫ್ಯಾಕ್ಟರಿ ವಾಹನಗಳಿಗೆ 'ಸ್ಪೀಡ್ ಗವರ್ನರ್' ಅಳವಡಿಸಿರುವುದನ್ನು ಖಾತರಿಪಡಿಸಿಕೊಳ್ಳಲು ಸಾರಿಗೆ ಮತ್ತು ಪೊಲೀಸ್ ಇಲಾಖೆಯಿಂದ ಜಂಟಿ ತಪಾಸಣೆ ನಡೆಸಲು ಆದೇಶಿಸಿದರು.

ಹೆದ್ದಾರಿ ಬದಿಯಲ್ಲಿ ಭಾರಿ ವಾಹನಗಳ ಅಸ್ತವ್ಯಸ್ತ ಪಾರ್ಕಿಂಗ್ ತಡೆಯಲು ಸೇಡಂ, ಚಿತ್ತಾಪುರ ಹಾಗೂ ಸಿರಸಗಿ ಭಾಗಗಳಲ್ಲಿ 'ಟ್ರಕ್ ಟರ್ಮಿನಲ್' ನಿರ್ಮಿಸಲು ಜಾಗ ಗುರುತಿಸಿ ಪ್ರಸ್ತಾವನೆ ಸಲ್ಲಿಸಲು ಕಘಆ ಹಾಗೂ ಓಊಂಖ ಅಧಿಕಾರಿಗಳಿಗೆ ಸೂಚಿಸಿದರು. ತೂಕ ಪರಿಶೀಲಿಸಲು ನೂತನ ಡಿಜಿಟಲ್ ವೇಬ್ರಿಡ್ಜ್‌ಗಳನ್ನು ಸ್ಥಾಪಿಸಲು ಯೋಜಿಸಲಾಗಿದೆ. ಅಲ್ಲದೆ, ನಗರದಲ್ಲಿ ಬೆಳಿಗ್ಗೆ 7 ರಿಂದ ರಾತ್ರಿ 10 ಗಂಟೆಯವರೆಗೆ ಭಾರಿ ವಾಹನಗಳ ಪ್ರವೇಶ ಸಂಪೂರ್ಣ ನಿಷೇಧಿಸಲಾಗಿದೆ. ದಿನಕ್ಕೆ 40,000ಕ್ಕೂ ಹೆಚ್ಚು ವಾಹನ ದಟ್ಟಣೆ ಹೊಂದಿರುವ ಹುಮನಾಬಾದ ಕ್ರಾಸ್‌ನಿಂದ ಅಫಜಲಪುರ ಕ್ರಾಸ್‌ವರೆಗಿನ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ವಹಿಸಲು ಕೇಂದ್ರಕ್ಕೆ ಪ್ರಸ್ತಾಪ ಸಲ್ಲಿಸಲು ತಿಳಿಸಲಾಯಿತು.

ಮುಂದಿನ 30 ದಿನಗಳಲ್ಲಿ ಜಿಲ್ಲಾದ್ಯಂತ 'ರಸ್ತೆ ಸುರಕ್ಷತಾ ಆಡಿಟ್' ನಡೆಸಿ ಬ್ಲಾಕ್ ಸ್ಪಾಟ್‌ಗಳನ್ನು ಸುಧಾರಿಸಬೇಕು.

ಐಆರ್‌ಸಿಗೆ ವಿರುದ್ಧವಾಗಿರುವ ಅವೈಜ್ಞಾನಿಕ ಗತಿರೋಧಕಗಳನ್ನು ತಕ್ಷಣ ತೆರವುಗೊಳಿಸಿ, ರೇಡಿಯಂ ರಿಫ್ಲೆಕ್ಟರ್ ಮತ್ತು ಎಚ್ಚರಿಕೆ ಫಲಕಗಳನ್ನು ಅಳವಡಿಸಲು 'ಮಿಷನ್ ಮೋಡ್'ನಲ್ಲಿ ಕೆಲಸ ಮಾಡಲು ಅಧಿಕಾರಿಗಳಿಗೆ ನಿರ್ದೇಶಿಸಿದರು.ಖಾಸಗಿ ಆಂಬ್ಯುಲೆನ್ಸ್ ತಪಾಸಣೆಗೆ ಉಪಸಮಿತಿ ರಚಿಸಲು ಹಾಗೂ ನಗರದಲ್ಲಿ ಬೀದಿ ದೀಪಗಳ ಆಡಿಟ್ ನಡೆಸಲು ಪಾಲಿಕೆಗೆ ಸೂಚಿಸಿದರು.

# ಕಲ್ಯಾಣ ಕರ್ನಾಟಕದಲ್ಲಿ ನೂರಾರು 'ಕೂಸಿನ ಮನೆ'ಗಳಿಗೆ ಬೀಗ...!




**ಕಲಬುರಗಿ, ಆ. 13:** ಗ್ರಾಮ ಪಂಚಾಯಿತಿಗಳಲ್ಲಿ ಅನುದಾನದ ಕೊರತೆ ಕಾರಣಕ್ಕೆ 'ಕೂಸಿನ ಮನೆ'ಗಳ ಆರೈಕೆದಾರರಿಗೆ ಗೌರವಧನ ನೀಡಲು ಸಾಧ್ಯವಾಗುತ್ತಿಲ್ಲ. ಹೀಗಾಗಿ, ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳಲ್ಲಿ 538 'ಕೂಸಿನ ಮನೆ'ಗಳಿಗೆ ಬೀಗ ಹಾಕಲಾಗಿದೆ. ಕೇಂದ್ರ ಸರ್ಕಾರವು ದೇಶದಾದ್ಯಂತ ಜುಲೈ1ರಿಂದ ನರೇಗಾ ಬದಲು 'ವಿಬಿ ಜಿ ರಾಮ್ ಜಿ' ಯೋಜನೆ ಜಾರಿಗೆ ತಂದಿದೆ. ಯೋಜನೆ ಅಡಿ 'ಕೂಸಿನ ಮನೆ' ಆರೈಕೆದಾರರಿಗೆ ಕೂಲಿ ನೀಡಲು ತಾಂತ್ರಿಕವಾಗಿ ಸಾಧ್ಯವಿಲ್ಲ ಎಂದು ರಾಜ್ಯಕ್ಕೆ ತಿಳಿಸಿದೆ. ಆದ್ದರಿಂದ 'ಕೂಸಿನ ಮನೆ' ರಾಜ್ಯ ಸರ್ಕಾರಕ್ಕೆ ಮತ್ತಷ್ಟು ಹೊರೆಯಾಗಿ ಪರಿಣಮಿಸಿದೆ.

ರಾಜ್ಯ ಸರ್ಕಾರವು ಗ್ರಾಮ ಪಂಚಾಯಿತಿ ಅನುದಾನದಲ್ಲಿ ಆರೈಕೆದಾರರಿಗೆ ಗೌರವಧನ ನೀಡುತ್ತಿದೆ. ಆದರೆ, ಅನುದಾನದ ಕೊರತೆಯಿಂದ ಈಗಾಗಲೇ ಕೃಶವಾಗಿರುವ ಪಂಚಾಯಿತಿಗಳಿಗೆ ಈ 'ಭಾರ' ತಡೆದುಕೊಳ್ಳಲು ಆಗುತ್ತಿಲ್ಲ. ಆದ್ದರಿಂದ ಕೂಸಿನ ಮನೆಗಳು ಒಂದೊಂದಾಗಿ ಮುಚ್ಚುತ್ತಿವೆ. ಕಲ್ಯಾಣ ಕರ್ನಾಟಕದಲ್ಲಿ ಕಲಬುರಗಿ ಜಿಲ್ಲೆಯಲ್ಲಿ ಹೆಚ್ಚು ಮನೆಗಳು ಬಂದ್ ಆಗಿವೆ. 127 ಮನೆಗಳಿಗೆ ಬೀಗ ಹಾಕಲಾಗಿದೆ. ಕೇವಲ 66 ಮನೆಗಳು ಕಾರ್ಯ ನಿರ್ವಹಿಸುತ್ತಿವೆ. ವಿಜಯನಗರದಲ್ಲಿ ಹೆಚ್ಚು ಸಕ್ರಿಯ: ಕಲ್ಯಾಣ ಕರ್ನಾಟಕ ಭಾಗದ ವಿಜಯನಗರ ಜಿಲ್ಲೆಯಲ್ಲಿ ಪಂಚಾಯಿತಿ ಅನುದಾನದಲ್ಲಿಯೇ 86 ಮನೆಗಳನ್ನು ನಡೆಸಲಾಗುತ್ತಿದೆ. ಈ ಭಾಗದಲ್ಲಿ ಹೆಚ್ಚು ಸಕ್ರಿಯ ಮನೆಗಳನ್ನು ಹೊಂದಿದ ಜಿಲ್ಲೆ ಇದಾಗಿದೆ.

**ಏನಿದು ಯೋಜನೆ :** ಉದ್ಯೋಗ ಖಾತರಿ (ನರೇಗಾ) ಯೋಜನೆಯಡಿ ಕೆಲಸ ಮಾಡುವ ಕಾರ್ಮಿಕರ ಮಕ್ಕಳ ಆರೈಕೆಗಾಗಿ ರಾಜ್ಯ ಸರ್ಕಾರ 2023ರಲ್ಲಿ 'ಕೂಸಿನ ಮನೆ'ಗಳನ್ನು ಆರಂಭಿಸಿತು. ಕಾರ್ಮಿಕ ಮಹಿಳೆಯರು 6 ತಿಂಗಳಿನಿಂದ 3 ವರ್ಷದೊಳಗಿನ ತಮ್ಮ ಮಕ್ಕಳನ್ನು ಇಲ್ಲಿ ಬಿಟ್ಟು ಹೋಗಬಹುದು. ತರಬೇತಿ ಪಡೆದ ಆರೈಕೆದಾರರು ಮಕ್ಕಳನ್ನು ಆರೈಕೆ ಮಾಡುತ್ತಾರೆ. ಪೌಷ್ಟಿಕ ಆಹಾರ ನೀಡುತ್ತಾರೆ. ಸಕ್ರಿಯ ಉದ್ಯೋಗ ಚೀಟಿ ಹೊಂದಿದ ಮಹಿಳೆಯರನ್ನು ನರೇಗಾ ಯೋಜನೆಯ ಗರಿಷ್ಠ ಕೆಲಸದ ದಿನಗಳವರೆಗೆ 'ಕೂಸಿನ ಮನೆ'ಯ ಆರೈಕೆದಾರರನ್ನಾಗಿ ನೇಮಿಸಲಾಗುತ್ತಿದೆ. ಅವರಿಗೆ ಸಾಮೂಹಿಕ ಕಾಮಗಾರಿಗಳಲ್ಲಿ ಪ್ರತ್ಯೇಕ ಎನ್‌ಎಂಆರ್ ಸೃಜಿಸಿ, ಕೆಲಸದ ಸ್ಥಳದಲ್ಲಿ ಹಾಜರಾತಿಯಿಂದ ವಿನಾಯಿತಿ ನೀಡಿ, ಗೌರವಧನವಾಗಿ ಕೂಲಿ ಪಾವತಿಸಲಾ ಗುತ್ತಿತ್ತು. ಕಾಮಗಾರಿ ಇಲ್ಲದಿದ್ದಾಗ ಗ್ರಾಮ ಪಂಚಾಯಿತಿ ಅನುದಾನದಲ್ಲಿ ಗೌರವಧನ ಭರಿಸಲಾಗುತ್ತಿತ್ತು. ಅದು ಬಿಡುಗಡೆ ಆಗಿಲ್ಲ. ಸಂಗ್ರಹಿಸಿದ ತೆರಿಗೆ ಹಣವನ್ನು ಬಳಸಿಕೊಳ್ಳುತ್ತಿದ್ದೇವೆ. ಈ ಸಂಬಂಧ ಪ್ರತಿಕ್ರಿಯೆ ಪಡೆಯಲು ಕಲಬುರಗಿ ಜಿಲ್ಲಾ ಪಂಚಾಯಿತಿ ಸಿಇಒ ಅವರಿಗೆ ಕರೆ ಮಾಡಿದರೆ, ಅವರು ಲಭ್ಯರಾಗಲಿಲ್ಲ.

### ಹಿಂದುಳಿದ ವರ್ಗಗಳ ಸಮಾಜದ ಮಹನೀಯರ ಜಯಂತಿಗಳಿಗೆ ರೂ.50 ಸಾವಿರ ಅನುದಾನ: ಪಿ.ಗಾದೆಪ್ಪ



**ಬಳ್ಳಾರಿ,ಆ.13.** ಬಳ್ಳಾರಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಹಿಂದುಳಿದ ವರ್ಗಗಳ ವಿವಿಧ ಸಮಾಜಗಳ ಮಹನೀಯರ ಜಯಂತಿಗಳನ್ನು ವಿಜೃಂಭಣೆಯಿಂದ ಆಚರಿಸಲು ಪಾಲಿಕೆ ವತಿಯಿಂದ ಘೋಷಿಸಲಾದ ರೂ.50,000 ಅನುದಾನದ ಸದುಪಯೋಗವನ್ನು ಆಯಾ ಸಮಾಜದ ಮುಖಂಡರು ಪಡೆದುಕೊಳ್ಳಬೇಕು ಎಂದು ಮಹಾನಗರ ಪಾಲಿಕೆಯ ಮೇಯರ್ ಪಿ.ಗಾದೆಪ್ಪ ಮನವಿ ಮಾಡಿದ್ದಾರೆ.

ನಾನು ಮಹಾಪೌರನಾಗಿ ಅಧಿಕಾರ ವಹಿಸಿಕೊಂಡ ನಂತರ ಪ್ರಥಮ ಬಾರಿಗೆ ಮಂಡಿಸಿದ ಮಹಾನಗರ ಪಾಲಿಕೆಯ ಬಜೆಟ್‌ನಲ್ಲಿ ಹಿಂದುಳಿದ ವರ್ಗಗಳ ಶ್ರೇಯೋಭಿವೃದ್ಧಿ ಹಾಗೂ ಅವರ ಸಾಂಸ್ಕೃತಿಕ ಗೌರವಕ್ಕೆ ಆದ್ಯತೆ ನೀಡಲಾಗಿದೆ. ಅದರ ಭಾಗವಾಗಿ ವಿವಿಧ ಹಿಂದುಳಿದ ವರ್ಗಗಳ ಸಮಾಜದ ಮಹನೀಯರ ಜಯಂತಿ ಆಚರಣೆಗಾಗಿ ಪಾಲಿಕೆ ವತಿಯಿಂದ ತಲಾ ರೂ.50,000 ಆರ್ಥಿಕ ನೆರವು ನೀಡುವ ಪ್ರಮುಖ ನಿರ್ಧಾರವನ್ನು ಕೈಗೊಳ್ಳಲಾಗಿತ್ತು ಎಂದು ಸ್ಮರಿಸಿದರು.

ಹಿಂದುಳಿದ ಸಮುದಾಯಗಳ ಸಂಸ್ಕೃತಿ, ಪರಂಪರೆ ಮತ್ತು ಮಹನೀಯರ ವಿಚಾರಧಾರೆಗಳನ್ನು ಸಮಾಜಕ್ಕೆ ತಲುಪಿಸಲು ಹಾಗೂ ಜಯಂತಿಗಳನ್ನು ವ್ಯವಸ್ಥಿತವಾಗಿ ಆಚರಿಸಲು ಈ ನೆರವು ನೀಡಲಾಗುತ್ತಿದೆ. ನಗರದ ಎಲ್ಲಾ ವರ್ಗಗಳ ಹಾಗೂ ಸಮುದಾಯಗಳ ಸರ್ವಾಂಗೀಣ ಅಭಿವೃದ್ಧಿಯೊಂದಿಗೆ ಸಾಮಾಜಿಕ ಸಾಮರಸ್ಯಕ್ಕೆ ಪಾಲಿಕೆ ಬದ್ಧವಾಗಿದೆ.

ಬಳ್ಳಾರಿ ನಗರದ ಹಿಂದುಳಿದ ವರ್ಗಗಳ ವಿವಿಧ ಸಂಘ-ಸಂಸ್ಥೆಗಳು, ಸಮಾಜದ ಮುಖಂಡರು ಪಾಲಿಕೆಯ ನಿಯಮಾವಳಿಗಳ ಪ್ರಕಾರ ಈ ಅನುದಾನವನ್ನು ಪಡೆದುಕೊಂಡು ಕಾರ್ಯಕ್ರಮಗಳಲ್ಲಿ ಎಲ್ಲ ಸಮಾಜದವರು ಸಕ್ರಿಯವಾಗಿ ತೊಡಗಿಸಿಕೊಂಡು ಯಶಸ್ವಿಗೊಳಿಸಬೇಕು ಎಂದು ಮೇಯರ್ ಪಿ.ಗಾದೆಪ್ಪ ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

# ರಾತ್ರೋರಾತ್ರಿ ದಲಿತ ಯುವಕನ ಹತ್ಯೆ: ಸೇಡಂನಲ್ಲಿ ಶವದೊಂದಿಗೆ ಮಿಂಚಿನ ಪ್ರತಿಭಟನೆ



**ಕಲಬುರಗಿ, ಆ. 13:** ಜಿಲ್ಲೆಯ ಸೇಡಂ ತಾಲ್ಲೂಕಿನ ಊಡಗಿ ಗ್ರಾಮದಲ್ಲಿ ತಡರಾತ್ರಿ ದಲಿತ ಯುವಕನ ಕೊಲೆ ಮಾಡಿದವರ ಬಂಧನಕ್ಕೆ ಒತ್ತಾಯಿಸಿ, ಮಾದಿಗ ಸಮಾಜದಿಂದ ಶವದೊಂದಿಗೆ ಸೇಡಂ ಬಸವೇಶ್ವರ ವೃತ್ತದಲ್ಲಿ ಮಿಂಚಿನ ಪ್ರತಿಭಟನೆ ನಡೆಸಲಾಯಿತು.

ಕಲಬುರಗಿ ಜಿಮ್ಸ್ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ನಗರಕ್ಕೆ ಆಗಮಿಸಿದ ಶವದೊಂದಿಗೆ ಕುಟುಂಬಸ್ಥರು, ಮಾದಿಗ ಸಮಾಜದ ಪ್ರಮುಖರು ದಿಢೀರ್ ಪ್ರತಿಭಟನೆ ನಡೆಸಿದರು.

ಅಂಗಡಿಯೊಂದರ ಬಳಿ ತೆರಳಿದ್ದ ಭಾಗ್ಯವಂತನ ಮೇಲೆ ಅದೇ ಗ್ರಾಮದ ನಬಿ ಮತ್ತು ಐದಾರು ಸಂಗಡಿಗರು ಮನಸೋ ಇಚ್ಛೆ ಹಲ್ಲೆ ಮಾಡಿದ್ದಾರೆ. ತಕ್ಷಣ ಆಸ್ಪತ್ರೆಗೆ ಕರೆದೊಯ್ದರೂ ಕೊನೆಯುಸಿರೆಳೆದಿದ್ದಾನೆ. ಇದೊಂದು ಉದ್ದೇಶಪೂರ್ವಕ ಕೃತ್ಯ. ಆದರೆ ಒಬ್ಬನನ್ನು ಮಾತ್ರ ಬಂಧಿಸಲಾಗಿದೆ ಎಂದು ಪೊಲೀಸರು ಹೇಳುತ್ತಿದ್ದು, ಇನ್ನುಳಿದವರ ಬಂಧನ ಯಾವಾಗ ಎಂದು ಸಮಾಜದ ಮುಖಂಡ ವಿಜಯಕುಮಾರ ಆಡಕಿ ಪ್ರಶ್ನಿಸಿದರು. ಸರ್ಕಾರದ ನಿಯಮದಂತೆ ಅಲ್ಪ ಪರಿಹಾರ ಯಾವುದಕ್ಕೂ ಸಾಲದು. ಗಂಡನ ಕಳೆದುಕೊಂಡು ಪತ್ನಿ ಬದುಕು ಸಾಗಿಸುವುದು ಕಷ್ಟಕರ. ಪತ್ನಿಗೆ ಸರ್ಕಾರಿ ನೌಕರಿ ಹಾಗೂ 50 ಲಕ್ಷ ರೂ. ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು.

ಸ್ಥಳಕ್ಕೆ ಭೇಟಿ ನೀಡಿದ ಹೆಚ್ಚುವರಿ ಎಸ್‌ಪಿ ಮಹೇಶ ಮೇಘಣ್ಣನವರ್, ತಹಸೀಲ್ದಾರ್ ಶ್ರೀಯಾಂಕಾ ಧನಶ್ರೀ, ಡಿವೈಎಸ್‌ಪಿ ಸಂಗಮನಾಥ ಹಿರೇಮಠ, ಸಮಾಜ ಕಲ್ಯಾಣ ಸಹಾಯಕ ನಿರ್ದೇಶಕಿ ಡಾ.ಶ್ರುತಿ ಅವರು,

> **ಕೊಲೆಯಾಗಿ 24 ಗಂಟೆಯಾಗಿದೆ. ಸಚಿವರ ಸ್ವಗ್ರಾಮದಲ್ಲೇ ದಲಿತ ಯುವಕನ ಹತ್ಯೆಯಾದರೂ ಕನಿಷ್ಠ ಸಾಂತ್ವನ ಹೇಳದಿರುವುದು ವಿಷಾದನೀಯ. ಇದೇ ಘಟನೆ ಅನ್ಯ ಧರ್ಮದಲ್ಲಿ ಆಗಿದ್ದರೆ ಬೆಂಗಳೂರಿನಲ್ಲಿದ್ದರೂ ಸಚಿವರು ಓಡೋಡಿ ಬರುತ್ತಿದ್ದರು. ಘಟನೆಯಲ್ಲಿ ಭಾಗಿಯಾದ ಎಲ್ಲರನ್ನು ಬಂಧಿಸಬೇಕು. –ರಾಜಕುಮಾರ ಪಾಟೀಲ್, ತೆಲ್ಕೂರ ಮಾಜಿ ಶಾಸಕ**

ಸರ್ಕಾರದ ಪರಿಹಾರ ಹಣ ನಿಯಮದಂತೆ ನಾಳೆ ಜಮೆ ಆಗಲಿದೆ. ನೌಕರಿ ಇನ್ನುಳಿದ ಕೆಲಸಕ್ಕಾಗಿ ಸರ್ಕಾರಕ್ಕೆ ದಾಖಲೆ ಸಲ್ಲಿಸಲಾಗುವುದು ಎಂದರು.

ಇದಕ್ಕೊಪ್ಪದ ಪ್ರತಿಭಟನಾಕಾರರು ಸ್ಥಳಕ್ಕೆ ಸಚಿವ ಡಾ.ಶರಣಪ್ರಕಾಶ ಪಾಟೀಲ್ ಬಂದು ಸಿಎಂ ಜತೆ ಮಾತನಾಡಿ ವಿಶೇಷ ಪ್ರಕರಣವೆಂದು ಪರಿಗಣಿಸಿ ಪರಿಹಾರ ಕೊಡಿಸಬೇಕು ಎಂದು ಪಟ್ಟು ಹಿಡಿದರು.ಹೆಚ್ಚುವರಿ ಎಸ್‌ಪಿ ಮೇಘಣ್ಣನವರ್ ಮೊಬೈಲ್‌ನಲ್ಲಿ ಸಚಿವರ ಜತೆ ಮಾತನಾಡಿ ವಿಷಯ ತಿಳಿಸಿದರು. ಸಾಧ್ಯವಾದಷ್ಟು ಗರಿಷ್ಠ ಹಂತದ ಪರಿಹಾರ ಕೊಡಿಸಲಾಗುವುದು ಎಂದು ಭರವಸೆ ನೀಡಿದ್ದಾರೆ ಎಂದು ಪ್ರತಿಭಟನಾನಿರತರ ಗಮನಕ್ಕೆ

# ಶಾಂತರಸರು ಸಾಹಿತಿ ಮಾತ್ರವಲ್ಲ ಹೋರಾಟದ ಗಟ್ಟಿಧ್ವನಿಯಾಗಿದ್ದರು: ವೆಂಕಟಸಿಂಗ್



**ಕಲಬುರಗಿ, ಆ. 13:** ನಾಡೋಜ ದಿ.ಡಾ.ಶಾಂತರಸರು ಸಾಹಿತಿ ಮಾತ್ರವಲ್ಲ, ಈ ನೆಲ-ಜಲ, ಭಾಷೆ ಮತ್ತು ಪರಿಸರದ ಪರ ಗಟ್ಟಿ ಧ್ವನಿ ಎತ್ತಿದ ಹೋರಾಟಗಾರರಾಗಿದ್ದರು ಎಂದು ಮಾಹಿತಿ ಆಯೋಗ ಕಲಬುರಗಿ ಪೀಠದ ಆಯುಕ್ತ ಬಿ.ವೆಂಕಟ್‌ಸಿಂಗ್ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ರಂಗಾಯಣ ಸಹಯೋಗದಡಿ ನಾಡೋಜ ಡಾ.ಶಾಂತರಸರ ಸಣ್ಣಗೌಡಸಾನಿ ನಾಟಕ ಪ್ರದರ್ಶನಕ್ಕೆ ಡಾ.ಎಸ್. ಎಂ. ಪಂಡಿತ ರಂಗಮಂದಿರದಲ್ಲಿ ಚಾಲನೆ ನೀಡಿ ಮಾತನಾಡಿದ ಅವರು, ಶಾಂತರಸರದು ಮತ್ತು

> **1992ರಲ್ಲಿ ಘೋಷಣೆಯಾದ ರಾಜ್ಯೋತ್ಸವ ಪ್ರಶಸ್ತಿ ತಿರಸ್ಕರಿಸುವ ಮೂಲಕ ತಮ್ಮ ನಿಲುವಿನಲ್ಲಿ ಯಾವುದೇ ರಾಜಿ ಇಲ್ಲ ಎಂಬುದನ್ನು ಶಾಂತರಸರು ತೋರಿಸಿಕೊಟ್ಟಿದ್ದರು. ಜನಪರ ವಿಚಾರಗಳಿಗಾಗಿ ವಿಭಿನ್ನ ಚಳವಳಿ ರೂಪಿಸಿ ನಾಡು-ನುಡಿ ಮತ್ತು ಜನರ ಹಿತಕ್ಕಾಗಿ ಸದಾ ಬದ್ಧರಾಗಿದ್ದರು.**
> **– ಬಿ.ವೆಂಕಟಸಿಂಗ್, ಆಯುಕ್ತ, ಮಾಹಿತಿ ಆಯೋಗ ಕಲಬುರಗಿ.**

ನನ್ನೂರು ಅಕ್ಕಪಕ್ಕದಲ್ಲಿದ್ದು, ಬಾಲ್ಯದಿಂದಲೂ ಅವರೊಂದಿಗೆ ಒಡನಾಟ ಹೊಂದಿದ್ದೆ. 1988ರಲ್ಲಿ ಪತ್ರಕರ್ತನಾಗಿ ಕೆಲಸ ಮಾಡುತ್ತಿದ್ದ ವೇಳೆ ಶಾಂತರಸರ ಜತೆ ಇನ್ನಷ್ಟು ನಿಕಟ ಸಂಪರ್ಕಕ್ಕೆ ಬಂದೆ. ಆಗಲೇ ಅವರಲ್ಲಿದ್ದ ಪ್ರತಿಭಟನಾ ಮನೋಭಾವ, ಸಾಮಾಜಿಕ ಕಳಕಳಿ ಹಾಗೂ ಅನ್ಯಾಯದ ವಿರುದ್ಧ ಹೋರಾಡುವ ಗುಣ ಹತ್ತಿರದಿಂದ ಕಂಡಿದ್ದೇನೆ ಎಂದು ಸ್ಮರಿಸಿದರು.

ನೆಲ-ಜಲ ಹಾಗೂ ಭಾಷೆ ವಿಚಾರದಲ್ಲಿ ರಾಜಿಯಾಗದ ನಿಲುವು ಹೊಂದಿದ್ದ ಶಾಂತರಸರು ಈ ಭಾಗಕ್ಕೆ ರಾಜಕೀಯ, ಸಾಹಿತ್ಯ, ಸಾಂಸ್ಕೃತಿಕ ಸೇರಿ ಯಾವುದೇ ಕ್ಷೇತ್ರದಲ್ಲಿ ಅನ್ಯಾಯವಾದರೂ ಧ್ವನಿ ಎತ್ತುತ್ತಿದ್ದರು. ಸ್ವಂತ ನಿವೇಶನ ಮಾರಿ ಬಂಡಾಯದ ಚಳವಳಿಗಳಿಗೆ ಬೆಂಬಲ ನೀಡಿದ ವಿಶಿಷ್ಟ ವ್ಯಕ್ತಿತ್ವ ಅವರದಾಗಿತ್ತು ಎಂದರು.

## ಮನಸ್ಸು ಶಾಂತ ಪ್ರಶಾಂತಗೊಳಿಸುವ ಮಾರ್ಗವೇ ಆಧ್ಯಾತ್ಮ: ಶ್ರೀ ರಂಭಾಪುರಿ ಜಗದ್ಗುರುಗಳು



**ಶ್ರೀ ರಂಭಾಪುರಿ ಪೀಠ(ಬಾಳೆಹೊನ್ನೂರು)– ಆ.13:** ಭಾರತೀಯ ಸಂಸ್ಕೃತಿಯಲ್ಲಿ ಬರುವ ಹಬ್ಬಗಳು ಜನಮಾನಸದ ಮೇಲೆ ಪ್ರಭಾವ ಬೀರಿವೆ. ಮನುಷ್ಯನ ಭಾವನೆಗಳು ವಿಕಾರಗೊಳ್ಳದೇ ವಿಕಾಸಗೊಳಿಸುವುದೇ ಹಬ್ಬಗಳ ಆಚರಣೆಯ ಹಿಂದಿರುವ ಸತ್ಯ. ಚಂಚಲ ಮನಸ್ಸನ್ನು ಶಾಂತ ಪ್ರಶಾಂತಗೊಳಿಸುವ ಮಾರ್ಗವೇ ಆಧ್ಯಾತ್ಮ ಎಂದು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಹಿಂದೂ ಸಂಸ್ಕೃತಿಯಲ್ಲಿ ಆಚರಿಸುವ ಹಬ್ಬಗಳಲ್ಲಿ ಬದುಕಿನ ಶ್ರೇಯಸ್ಸಿಗೆ ಬೇಕಾದ ಅಮೂಲ್ಯ ಅಂಶಗಳನ್ನು ಕಾಣುತ್ತೇವೆ. ಇವುಗಳು ಮಾನವ ಜೀವನದ ಉನ್ನತಿಗೆ ದಿಕ್ಸೂಚಿಗಳಾಗಿವೆ. ಬೆಳೆಯುವ ಯುವ ಜನಾಂಗದಲ್ಲಿ ಸಾತ್ವಿಕ ಮತ್ತು ತಾತ್ವಿಕ ಚಿಂತನಗಳನ್ನು ಬೆಳೆಸುವ ಅವಶ್ಯಕತೆ ಬಹಳಷ್ಟಿದೆ. ಈ ನಾಡಿನ ಸಂಸ್ಕೃತಿಯ ಪಾವಿತ್ರ್ಯತೆಯನ್ನು ಕಾಪಾಡಿಕೊಂಡು ಬರುವುದು ಎಲ್ಲರ ಧ್ಯೇಯವಾಗಬೇಕು. ದೇಶ ಧರ್ಮಗಳು ಬೇರೆಯಾದರೂ ಆಧ್ಯಾತ್ಮ ಸಾಧನೆ ಒಂದೇಯಾಗಿದೆ. ಸತ್ಯದ ಸತ್ಪಥದಲ್ಲಿ ಮಾನವ ಜೀವನ ಬಲಗೊಳ್ಳಬೇಕಾಗಿದೆ. ಒಂದು ಧರ್ಮ ಇನ್ನೊಂದು ಧರ್ಮದ ಸತ್ಯವನ್ನು ಪರಿಗಣಿಸದಿದ್ದರೂ ಸತ್ಯ ಎಂದಿಗೂ ಬದಲಾಗದು. ಸತ್ಯ ಸಂಸ್ಕೃತಿ ಗೌರವಿಸದೇ ಹೋದರೆ ಜೀವನ ನಾಶಗೊಳ್ಳುತ್ತದೆ. ಶ್ರೀ ಜಗದ್ಗುರು ರೇಣುಕಾಚಾರ್ಯರು ಸಮಾಜದಲ್ಲಿ ಧಾರ್ಮಿಕ ಮತ್ತು ಸಾಮಾಜಿಕ ಮೌಲ್ಯಗಳನ್ನು ಬೋಧಿಸಿ ಉದ್ಧರಿಸಿದ್ದನ್ನು ಯಾರೂ ಮರೆಯಲಾಗದೆಂದರು.

ಮನುಷ್ಯ ಜೀವನದಲ್ಲಿ ಸ್ಥಾನಮಾನ ಆಸ್ತಿ ಅಂತಸ್ತುಗಳು ಬದಲಾಗಬಹುದು. ಆದರೆ ಮಾನವೀಯ ಮೌಲ್ಯಗಳು ಮತ್ತು ಸಂಬಂಧಗಳು ಯಾವಾಗಲೂ ಶಾಶ್ವತವಾಗಿರುತ್ತವೆ. ಸುಖವೇ ಬರಲಿ ದು:ಖವೇ ಬರಲಿ ಎರಡನ್ನು ಸಮನ್ವಯದಿಂದ ಅರಿತು ಬಾಳುವುದರಲ್ಲಿ ಶಾಂತಿ ನೆಮ್ಮದಿಯಿದೆ. ಶ್ರೀ ಜಗದ್ಗುರು ರೇಣುಕಾಚಾರ್ಯರ ಮೌಲ್ಯಾಧಾರಿತ ಚಿಂತನಗಳು ಸಕಲರಿಗೂ ಅನ್ವಯಿಸುತ್ತವೆ ಎಂದರು.

ಶ್ರೀ ಜಗದ್ಗುರು ರೇಣುಕ ವಿಜಯ ಪುರಾಣ ಪ್ರವಚನ ಮಾಡುತ್ತಿರುವ ಬೇರುಗಂಡಿ ಬೃಹನ್ಮಠದ ರೇಣುಕ ಮಹಾಂತ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ ಅಶಾಂತಿಯಿಂದ ತತ್ತರಿಸುತ್ತಿರುವ ಜೀವಜಗತ್ತಿಗೆ ಆಧ್ಯಾತ್ಮದ ಅರಿವು ಮತ್ತು ಮಹಾನುಭಾವರ ಆದರ್ಶ ವಿಚಾರ ಧಾರೆಗಳ ಅನುಸಂಧಾನದ ಅವಶ್ಯಕತೆಯಿದೆ. ಶ್ರಾವಣ ಮಾಸ ಹಿಂದೂಗಳಿಗೆ ಮತ್ತು ವೀರಶೈವ ಸಮುದಾಯದ ಜನತೆಗೆ ಬಹಳಷ್ಟು ಪವಿತ್ರವಾಗಿದೆ. ಭೌತಿಕ ಬದುಕಿನಲ್ಲಿ ಮನುಷ್ಯ ಸಂಪತ್ತನ್ನಷ್ಟೇ ಬಯಸುತ್ತಾನೆ. ಆದರೆ ಆಧ್ಯಾತ್ಮ ಸಾಧನೆಯಲ್ಲಿ ಆಧ್ಯಾತ್ಮದ ಸಂತೃಪ್ತಿ ಸಮಾಧಾನ ಕಾಣುತ್ತೇವೆ. ಶ್ರೀ ಜಗದ್ಗುರು ರೇಣುಕಾಚಾರ್ಯರು ಬೋಧಿಸಿದ ಜೀವನದ ಸಿದ್ಧಿ ಸಾಧನೆಗಳು ಬದುಕಿ ಬಾಳುವ ಜನಾಂಗಕ್ಕೆ ಆಶಾಕಿರಣವಾಗಿವೆ ಎಂದರು. ಸುಳ್ಳ ಪಂಚಗೃಹ ಹಿರೇಮಠದ ಶಿವಸಿದ್ಧ ರಾಮೇಶ್ವರ ಶಿವಾಚಾರ್ಯ ಸ್ವಾಮಿಗಳು, ಹುಡುಗಿ ಹಿರೇಮಠದ ಸೋಮೇಶ್ವರ ಶಿವಾಚಾರ್ಯ ಸ್ವಾಮಿಗಳು ಉಪಸ್ಥಿತರಿದ್ದರು.

# ಬಳ್ಳಾರಿ ಜಿಲ್ಲೆಯಲ್ಲಿ ಶಿಶು, ತಾಯಿ ಮರಣ ಕಡಿಮೆ ಮಾಡಲು ಶ್ರಮಿಸುತ್ತಿರುವ ಜೆಎಸ್‌ಡಬ್ಲ್ಯೂ ಫೌಂಡೇಶನ್



**ಬಳ್ಳಾರಿ ಆ13.** ಜಿಲ್ಲಾ ಪಂಚಾಯತ್ ಬಳ್ಳಾರಿ ಕಚೇರಿಯಲ್ಲಿ ಜೆಎಸ್ಡಬ್ಲ್ಯೂ ಫೌಂಡೇಶನ್ ಸಂಸ್ಥೆಯು ಬಳ್ಳಾರಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರಕ್ಕೆ 200 ಸಿಪಿಎಪಿ ಸರ್ಕ್ಯೂಟ್ ಕಿಟ್‌ಗಳನ್ನು ನೀಡುವುದರ ಮೂಲಕ ಬೆಂಬಲಕ್ಕೆ ನಿಂತಿದೆ. ಉಸಿರಾಟದ ಬೆಂಬಲದ ಅಗತ್ಯವಿರುವ ತೀವ್ರವಾಗಿ ಅಸ್ವಸ್ಥ ಗೊಂಡ ನವಜಾತ ಶಿಶುಗಳಿಗೆ ಅಗತ್ಯತೆಗೆ ಪ್ರತಿಯಾಗಿ ಈ ಬೆಂಬಲ ವನ್ನು ನೀಡಲಾಯಿತು. ಪ್ರತಿ ಮಗುವಿಗೆ ಮೀಸಲಾದ ಸರ್ಕ್ಯೂಟ್ ನ್ನು ಬಳಸುವ ಮೂಲಕ ಸೋಂಕು ನಿಯಂತ್ರಣ ಅಭ್ಯಾಸಗಳನ್ನು ಬಲ ಪಡಿಸಲು ಸಹಾಯ ಮಾಡುತ್ತದೆ.

ಈ ಸಂದರ್ಭದಲ್ಲಿ ಮಾತನಾಡಿದ ಬಳ್ಳಾರಿ ಜಿಲ್ಲಾ ಪಂಚಾಯತ್ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಂಡಿ ಹ್ಯಾರಿಸ್ ಸುಮೈರ್, ಐಎಎಸ್,ರವರು ಮಾತನಾಡುತ್ತ ಬಳ್ಳಾರಿ ಜಿಲ್ಲೆಯಲ್ಲಿ ಶಿಶು ಮರಣ ಪ್ರಮಾಣ (ಐಎಂಆರ್) ಮತ್ತು ತಾಯಂದಿರ ಮರಣ ಪ್ರಮಾಣ (ಎಂಎಂಆರ್) ಕಡಿಮೆ ಮಾಡಲು ಜಿಲ್ಲಾಡಳಿತ ಸದಾ ಬದ್ಧವಾಗಿದೆ. ಈ ಬದ್ಧತೆಗೆ ಜೆಎಸ್‌ಡಬ್ಲ್ಯೂ ಫೌಂಡೇಶನ್‌ನ ನಿರಂತರ ಬೆಂಬಲಕ್ಕಾಗಿ ತಾವು ಕೃತಜ್ಞತೆಯನ್ನು ಮತ್ತು ಧನ್ಯವಾದ ಅರ್ಪಿಸಿದರು, ವಿಶೇಷವಾಗಿ ಸಂಡೂರು ತಾಲ್ಲೂಕಿನಲ್ಲಿ ಅಪಾಯದ ಅಂಚಿನಲ್ಲಿರುವ ಗರ್ಭಿಣಿಯರಿಗೆ ಹೆರಿಗೆ ಸೇವೆಗಳನ್ನು ಒದಗಿಸುತ್ತಿರು ವುದರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಬಳ್ಳಾರಿಯ ಎಂಸಿಆರ್‌ಸಿಯ ಮಕ್ಕಳ ಚಿಕಿತ್ಸಾ ವಿಭಾಗದ ಪ್ರಾಧ್ಯಾಪಕ ಮತ್ತು ಮುಖ್ಯಸ್ಥ ಡಾ. ವಿಶ್ವನಾಥ್ ಬಿ ಮತ್ತು ವಿಶೇಷ ನವಜಾತ ಶಿಶು ಆರೈಕೆ ಘಟಕದ ಅಸೋಸಿಯೇಟ್ ಪ್ರೊಫೆಸರ್ ಮತ್ತು ನೋಡಲ್ ಅಧಿಕಾರಿ ಡಾ.ಬಿ.ಕೆ. ಶ್ರೀಕಾಂತ್; ಜೆಎಸ್‌ಡಬ್ಲ್ಯೂ ಪ್ರತಿಷ್ಠಾನದ ದಕ್ಷಿಣ ಭಾರತ ವಲಯ ಮುಖ್ಯಸ್ಥ ಪೆದ್ದಣ್ಣ ಬೀದಲ; ವಿಜಯನಗರದ ಜೆಎಸ್‌ಡಬ್ಲ್ಯೂ ಫೌಂಡೇಶನ್ನ ಮುಖ್ಯಸ್ಥ ಭಾರತಿ ಪಳನಿಸಾಮಿ ಮತ್ತು ಮುತ್ತು ಕೃಷ್ಣನ್, ಮುಖ್ಯಸ್ಥರು ಆರೋಗ್ಯ ಮತ್ತು ಪೋಷಣೆ, ಜೆಎಸ್‌ಡಬ್ಲ್ಯೂ ಫೌಂಡೇಶನ್, ವಿಜಯನಗರ ಅವರ ಸಮ್ಮುಖದಲ್ಲಿ 200 ಸಿಪಿಎಪಿ ಸರ್ಕ್ಯೂಟ್ ಕಿಟ್‌ಗಳನ್ನು ಹಸ್ತಾಂತರಿಸಲಾಯಿತು.

ಸಾರ್ವಜನಿಕ ಆರೋಗ್ಯ ಸೇವೆಗಳನ್ನು ಬಲಪಡಿಸುವ ಮತ್ತು ಸಮುದಾಯಗಳಿಗೆ ಗುಣಮಟ್ಟದ ಆರೈಕೆಯ ಕಾರ್ಯಚಟುವಟಿಕೆಗಳನ್ನು ಸುಧಾರಿಸುವ ಗುರಿಯನ್ನು ಹೊಂದಿರುವ ಜೆಎಸ್‌ಡಬ್ಲ್ಯೂ ಫೌಂಡೇಶನ್‌ನ ಆರೋಗ್ಯ ಮತ್ತು ಪೋಷಣೆ ಕಾರ್ಯವಿಭಾಗದ ಭಾಗವಾಗಿದೆ.

ಸಿಪಿಎಪಿ ಸರ್ಕ್ಯೂಟ್‌ಗಳ ಲಭ್ಯತೆಯು, ನವಜಾತ ಶಿಶುಗಳಲ್ಲಿ ಸುರಕ್ಷಿತ ಹಾಗೂ ಹೆಚ್ಚು ಪರಿಣಾಮಕಾರಿ ಉಸಿರಾಟದ ಆರೈಕೆಗೆ ಸಹಾಯಕಾರಿಯಾಗಿದೆ. ತೀವ್ರವಾಗಿ ಅಸ್ವಸ್ಥಗೊಂಡ ನವಜಾತ ಶಿಶುಗಳಲ್ಲಿ ಸೋಂಕು-ಸಂಬಂಧಿತ ತೊಡಕುಗಳನ್ನು ಕಡಿಮೆ ಮಾಡುವ ಪ್ರಯತ್ನಗಳಿಗೂ ಈ ಬೆಂಬಲವು ಸಹಾಯವಾಗಲಿದೆ.



# ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ

4ನೇ ಮಹಡಿ, ಕೃಷಿ ಭವನ, ಹಡ್ಸನ್ ಸರ್ಕಲ್ ಹತ್ತಿರ, ನೃಪತುಂಗ ರೋಡ್, ಅಂಬೇಡ್ಕರ್ ವೀದಿ,
ಸಂಪಂಗಿರಾಮನಗರ, ಬೆಂಗಳೂರು, ಕರ್ನಾಟಕ-560 001, ದೂರವಾಣಿ: 0802211 5291



ಕರ್ನಾಟಕ ರಾಜ್ಯದಲ್ಲಿನ ಸಮಸ್ತ ಮಕ್ಕಳಿಗೆ
80ನೇ ಸ್ವಾತಂತ್ರ್ಯೋತ್ಸವದ
ಶುಭಾಶಯಗಳು



ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ (ಕೆಎಸ್ ಸಿಪಿಸಿಆರ್) ಎನ್ನುವುದು ಮಕ್ಕಳ ಹಕ್ಕುಗಳ ರಕ್ಷಣೆ, ಆರೈಕೆ ಮತ್ತು ಸುರಕ್ಷತೆಗಾಗಿ ಇರುವ ಸರ್ಕಾರಿ ಸಂಸ್ಥೆಯಾಗಿದೆ. ಇದು ಮಕ್ಕಳ ಮೇಲಿನ ದೌರ್ಜನ್ಯ, ಬಾಲ ಕಾರ್ಮಿಕ ಪದ್ಧತಿ ಹಾಗೂ ಹಕ್ಕುಗಳ ಉಲ್ಲಂಘನೆ ತಡೆಯಲು ಕಾರ್ಯ ನಿರ್ವಹಿಸುತ್ತದೆ.

ಸ್ವಾತಂತ್ರ್ಯೋತ್ಸವದ ಶುಭಕೋರುವವರು



ಸಂತೋಷ್ ಕುಮಾರ್
ಅಧ್ಯಕ್ಷರು



ಸತ್ಯನಾರಾಯಣ ಶೆಟ್ಟಿ
ಸದಸ್ಯರು



ಜಗನ್ನಾಥ್ ಹಾಲಮಡಗಿ
ಸದಸ್ಯರು



ವೆಂಕಟೇಶ್
ಸದಸ್ಯರು



ಸವಿತಾ.ಎಸ್. ಆರ್
ವಕೀಲರು


## 200 ಕೋಚ್‌ಗಳ ನಿರ್ಮಾಣಕ್ಕೆ ಒಪ್ಪಂದ, ಪಂಜಾಬ್‌ನ ರೈಲ್ವೆ ಕೋಚ್ ಫ್ಯಾಕ್ಟರಿಯಲ್ಲಿ ತಯಾರಿ


# ಬಾಂಗ್ಲಾಕ್ಕೆ ಭಾರತ ನಿರ್ಮಿತ 19 ರೈಲ್ವೆ ಬೋಗಿಗಳ ಮೊದಲ ಸಮೂಹ ರವಾನೆ

**ಢಾಕಾ, ಆ.13:** ಹೊಸಪೀಳಿಗೆಯ 19 ಅಗಲವಾದ ಹಳಿ (ಬ್ರಾಡ್‌ಗೇಜ್) ಪ್ರಯಾಣಿಕರ ಬೋಗಿಗಳ ಮೊದಲ ತಂಡವು ದರ್ಶನ ಗಡಿಯ ಮೂಲಕ ಭಾರತದಿಂದ ಬಾಂಗ್ಲಾದೇಶವನ್ನು ಪ್ರವೇಶಿಸಲು ಸಿದ್ಧವಾಗಿದ್ದು, ದಶಕಕ್ಕೂ ಹೆಚ್ಚು ಸಮಯದ ನಂತರ ಬಾಂಗ್ಲಾದೇಶಕ್ಕೆ ಭಾರತೀಯ ಪ್ರಯಾಣಿಕ ಕೋಚ್ ಪೂರೈಕೆ ಪುನರಾರಂಭಗೊಂಡಂತಾಗಿದೆ.

ಪಂಜಾಬ್‌ನ ಕಪೂರ್ತಾಲದಲ್ಲಿರುವ ರೈಲ್ ಕೋಚ್ ಫ್ಯಾಕ್ಟರಿಯಲ್ಲಿ ತಯಾರಾದ ಈ ಬೋಗಿಗಳು, ಬಾಂಗ್ಲಾದೇಶ ರೈಲ್ವೆಯ 200 ಆಧುನಿಕ ಬ್ರಾಡ್-ಗೇಜ್ ಪ್ರಯಾಣಿಕ ಕೋಚ್‌ಗಳ ಖರೀದಿ ಯೋಜನೆಯ ಮೊದಲ ಭಾಗವಾಗಿದೆ. 200 ಕೋಚ್‌ಗಳ ಯೋಜನೆಯನ್ನು 2022ರಲ್ಲಿ ಅಂದಾಜು 1,704.66 ಕೋಟಿ ಟಾಕಾ (139 ದಶಲಕ್ಷ ಡಾಲರ್) ವೆಚ್ಚದಲ್ಲಿ ಪ್ರಾರಂಭಿಸಲಾಯಿತು, ಇದರಲ್ಲಿ ಸುಮಾರು 1,331 ಕೋಟಿ ಟಾಕಾವನ್ನು (108 ದಶಲಕ್ಷ ಡಾಲರ್) ಯುರೋಪಿಯನ್ ಇನ್‌ವೆಸ್ಟ್‌ಮೆಂಟ್ ಬ್ಯಾಂಕ್ ಸಾಲದ ಮೂಲಕ ಹಣಕಾಸು ಒದಗಿಸುವ ನಿರೀಕ್ಷೆಯಿದೆ.

ಭಾರತೀಯ ತಯಾರಕರಿಂದ ನೇರವಾಗಿ ಕೋಚ್‌ಗಳನ್ನು ಖರೀದಿಸುವ ಬದಲು, ಬಾಂಗ್ಲಾದೇಶ ರೈಲ್ವೇ ಅಂತರರಾಷ್ಟ್ರೀಯ ಸ್ಪರ್ಧಾತ್ಮಕ ಟೆಂಡರ್ ಆಯ್ಕೆ ಮಾಡಿಕೊಂಡಿತು. ಇದರಲ್ಲಿ ರೈಟ್ಸ್ 111.26 ದಶಲಕ್ಷ ಡಾಲರ್ (915 ಕೋಟಿ ರೂ.) ಮೌಲ್ಯದ ಪ್ರಸ್ತಾಪದೊಂದಿಗೆ ಯಶಸ್ವಿ ಬಿಡ್ಡರ್ ಆಗಿ ಹೊರಹೊಮ್ಮಿತು.

ಮೇ 20, 2024ರಂದು ಢಾಕಾದ ರೈಲ್ ಭವನದಲ್ಲಿ ಮೌಲ್ಯದ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಒಪ್ಪಂದದ ಪ್ರಕಾರ, ಕೋಚ್‌ಗಳನ್ನು ಪೂರೈಸುವ ಜೊತೆಗೆ ವಿನ್ಯಾಸ, ಬಿಡಿಭಾಗಗಳು ಮತ್ತು ತರಬೇತಿಯನ್ನು ಒಳಗೊಂಡ ತಾಂತ್ರಿಕ



ನೆರವು ನೀಡಲು ರೈಟ್ಸ್ ಜವಾಬ್ದಾರರಾಗಿರುತ್ತದೆ. ಒಪ್ಪಂದವು ಪೂರೈಕೆ ಮತ್ತು ಕಮಿಷನಿಂಗ್‌ಗೆ 36 ತಿಂಗಳುಗಳನ್ನು ಮತ್ತು ನಂತರ 24 ತಿಂಗಳ ವಾರಂಟಿ ಅವಧಿಯನ್ನು ಒದಗಿಸುತ್ತದೆ.

ಆದಾಗ್ಯೂ, ಮಾರ್ಚ್ 2022 ರ ಅನುಮೋದನೆಯಿಂದ ಮೇ 2024ರಲ್ಲಿ ಒಪ್ಪಂದಕ್ಕೆ ಸಹಿ ಹಾಕುವವರೆಗೆ ಈ ಯೋಜನೆಗೆ ಎರಡೂವರೆ ವರ್ಷಗಳಿಗಿಂತ ಹೆಚ್ಚು ಸಮಯ ಬೇಕಾಯಿತು. ಯೋಜನಾ ನಿರ್ದೇಶಕರು ಮತ್ತು ಸಲಹೆಗಾರರ ನೇಮಕ ಹಾಗೂ ಯುರೋಪಿಯನ್ ಇನ್‌ವೆಸ್ಟ್‌ಮೆಂಟ್ ಬ್ಯಾಂಕ್‌ನಿಂದ ಅನುಮೋದನೆ ಪಡೆಯುವಲ್ಲಿ ಉಂಟಾದ ಸಮಸ್ಯೆಗಳು ಈ ವಿಳಂಬಕ್ಕೆ ಕಾರಣ ಎಂದು ಆ ಸಮಯದಲ್ಲಿ ಯೋಜನಾ ನಿರ್ದೇಶಕರಾಗಿದ್ದ ಝ್ಯುದುಲ್ ಇಸ್ಲಾಂ ತಿಳಿಸಿದ್ದಾರೆ.

ಮೊದಲ ಕಂತಿನಲ್ಲಿ ಮೂರು ಎಸಿ ಸ್ಲಿಪರ್ ಕೋಚ್‌ಗಳು, ಮೂರು ಎಸಿ ಚೇರ್ ಕಾರ್‌ಗಳು, 11 ನಾನ್-ಎಸಿ ಚೇರ್ ಕಾರ್‌ಗಳು ಮತ್ತು ಎರಡು ಪವರ್ ಕಾರ್‌ಗಳು ಸೇರಿವೆ.

ಆಧುನಿಕ ಎಲ್‌ಎಚ್‌ಬಿ ತಂತ್ರಜ್ಞಾನವನ್ನು ಬಳಸಿ ನಿರ್ಮಿಸಲಾದ ಈ ಕೋಚ್‌ಗಳು ಸುಧಾರಿತ ಅಪಘಾತ-ಸುರಕ್ಷತಾ ವ್ಯವಸ್ಥೆಗಳು, ಬಲಪಡಿಸಿದ ಛಾವಣಿಯ ರಚನೆಗಳು ಮತ್ತು ಸಿಸಿಟಿವಿ ಕ್ಯಾಮರಾ ಸೇರಿದಂತೆ ಸುರಕ್ಷತೆ ಮತ್ತು ಪ್ರಯಾಣಿಕರ ಸೌಕರ್ಯಗಳ ಶ್ರೇಣಿಯನ್ನು ಹೊಂದಿವೆ. ಅವು ವಿಶೇಷ ಆಸನ ವ್ಯವಸ್ಥೆಗಳು, ಮಗುವಿನ ಆರೈಕೆ ಕೊಠಡಿಗಳು ಮತ್ತು ಪ್ರಾರ್ಥನಾ ಮಂದಿರಗಳನ್ನು ಸಹ ಒಳಗೊಂಡಿವೆ. ಯೋಜನೆಯ ನಿರ್ದಿಷ್ಟ ವಿವರಣೆಗಳಿಗೆ ಅನುಗುಣವಾಗಿ ಕೋಚ್‌ಗಳನ್ನು ಬಾಂಗ್ಲಾದೇಶ ರೈಲ್ವೆಯ 415-ವೋಲ್ಟ್ ವಿದ್ಯುತ್ ವ್ಯವಸ್ಥೆಯೊಂದಿಗೆ ಚಲಾಯಿಸಲು ವಿನ್ಯಾಸಗೊಳಿಸಲಾಗಿದೆ.

ಭಾರತವು ಈ ಹಿಂದೆ 2015-16 ರಲ್ಲಿ ಬಾಂಗ್ಲಾದೇಶ ರೈಲ್ವೆಗೆ 120 ಪ್ರಯಾಣಿಕರ ಬೋಗಿಗಳನ್ನು ಪೂರೈಸಿತ್ತು. ಈ ಇತ್ತೀಚಿನ ರವಾನೆಯು ಸುಮಾರು ಒಂದು ದಶಕದ ವಿರಾಮದ ನಂತರ ಭಾರತ ನಿರ್ಮಿತ ಪ್ರಯಾಣಿಕ ಕೋಚ್‌ಗಳು ಬಾಂಗ್ಲಾದೇಶಕ್ಕೆ ಮರಳುತ್ತಿರುವುದನ್ನು ಸೂಚಿಸುತ್ತದೆ.

ಒಪ್ಪಂದದ ಪ್ರಕಾರ ಉಳಿದ ಕೋಚ್‌ಗಳನ್ನು ವಿತರಿಸಿ ಕಮಿಷನ್ ಮಾಡಿದ ನಂತರ, ಬಾಂಗ್ಲಾದೇಶ ರೈಲ್ವೇಗೆ ತನ್ನ ಹಳೆಯ ಬೋಗಿಗಳ ಮೇಲಿನ ಒತ್ತಡವನ್ನು ಕಡಿಮೆ ಮಾಡಲು, ಹೊಸ ಸೇವೆಗಳನ್ನು ಪರಿಚಯಿಸಲು ಅಥವಾ ಅಸ್ತಿತ್ವದಲ್ಲಿರುವ ಮಾರ್ಗಗಳಲ್ಲಿ ಬೋಗಿ ಸಾಮರ್ಥ್ಯವನ್ನು ಹೆಚ್ಚಿಸಲು ಹೆಚ್ಚಿನ ಅವಕಾಶ ಸಿಗಲಿದೆ. ಪದ್ಮಾ ರೈಲು ಸಂಪರ್ಕದ ವಿಸ್ತರಣೆಯೊಂದಿಗೆ ನಂಬಿಕಸ್ಥ ಪ್ರಯಾಣಿಕ ಸೇವೆಗಳಿಗೆ ಬೇಡಿಕೆ ಹೆಚ್ಚಾಗಿರುವ ನೈಋತ್ಯ ಪ್ರದೇಶದಲ್ಲಿ ಇದರ ಪ್ರಭಾವವು ವಿಶೇಷವಾಗಿ ಗಮನಾರ್ಹವಾಗಿರುತ್ತದೆ. ಗಡಿಯಲ್ಲಿ ಕೋಚ್‌ಗಳ ಆಗಮನಕ್ಕಾಗಿ ಕಾಯುತ್ತಿರುವುದಾಗಿ ರೈಲ್ವೆ ಮತ್ತು ದರ್ಶನ ಬಂದರು ಅಧಿಕಾರಿಗಳು ತಿಳಿಸಿದ್ದಾರೆ.

# ಯುದ್ಧ ಕೊನೆಗಾಣಿಸುವ ನಿಟ್ಟಿನಲ್ಲಿ ಪ್ರಗತಿ ಕಾಣದಿದ್ದರೂ ತೈಲಬೆಲೆ ಶೇ.2ರಷ್ಟು ಇಳಿಕೆ



**ಲಂಡನ್, ಆ.13:** ಹಾರ್ಮುಜ್ ಜಲಸಂಧಿಯ ಮೂಲಕ ಸರಕು ಸಾಗಣೆ ತೀವ್ರವಾಗಿ ನಿಯಂತ್ರಿಸಲ್ಪಟ್ಟಿದ್ದರೂ ಹಾಗೂ ವಾಷಿಂಗ್ಟನ್ ಮತ್ತು ಇರಾನ್ ನಡುವೆ ಯುದ್ಧ ಅಂತ್ಯಗೊಳಿಸುವ ನಿಟ್ಟಿನಲ್ಲಿ ಯಾವುದೇ ರಾಜತಾಂತ್ರಿಕ ಪ್ರಗತಿ ಕಾಣದಿದ್ದರೂ ತೈಲಬೆಲೆಯಲ್ಲಿ ದಿಢೀರ್ ಕುಸಿತ ಕಂಡುಬಂದಿದೆ.

ಜಾಗತಿಕ ತೈಲ ಬೆಲೆಯ ಮಾನದಂಡವಾದ ಬ್ರೆಂಟ್ ಕ್ರೂಡ್ ಬೆಲೆಯು ಶೇ.2ರಷ್ಟು ಇಳಿಕೆಯಾಗಿ ಬ್ಯಾರಲ್‌ಗೆ 87.20 ಡಾಲರ್‌ಗೆ ತಲುಪಿದೆ. ಅದೇ ರೀತಿ, ಯುಎಸ್ ಮಾನದಂಡವಾದ ಡಬ್ಲ್ಯುಟಿಐ ಬೆಲೆಯು ಸಹ ಅದೇ ಪ್ರಮಾಣದಲ್ಲಿ ಕುಸಿದು ಬ್ಯಾರಲ್‌ಗೆ 81.45 ಡಾಲರ್‌ಗೆ ತಲುಪಿದೆ. ಆಯಕಟ್ಟಿನ ಹಾರ್ಮುಜ್ ಜಲಸಂಧಿಯ ಮೂಲಕ ನಡೆಯುವ ಹಡಗುಗಳ ಸಂಚಾರವು ಯುದ್ಧ ಪೂರ್ವದಲ್ಲಿದ್ದ ಪ್ರತಿದಿನ 130-140 ಸಂಚಾರಕ್ಕಿಂತ ಬಹಳ ಕಡಿಮೆಯಾಗಿದೆ. ಆದರೆ, ಅಧಿಕೃತ ಅಂಕಿಅಂಶಗಳು ಹೇಳುವಂತೆ ಹಡಗುಗಳ ಸಂಚಾರ ಸ್ವಲ್ಪ ಹೆಚ್ಚು ಇರಬಹುದು. ಹಡಗಿನಿಂದ ಹಡಗಿಗೆ ತೈಲ ವರ್ಗಾವಣೆ ಮಾಡುವುದು ಮತ್ತು ಜಲಸಂಧಿಯನ್ನು ಹಾದುಹೋಗುವಾಗ ಹಡಗುಗಳು ತಮ್ಮ ಸಿಗ್ನಲ್ ವ್ಯವಸ್ಥೆಯನ್ನು ಸ್ಥಗಿತಗೊಳಿಸುವುದನ್ನು ಗಮನಿಸಿದರೆ ಸಂಚಾರವು ಹೆಚ್ಚಿರಬಹುದು ಎಂದು ಅನಧಿಕೃತ ಮೂಲಗಳು ಸೂಚಿಸುತ್ತವೆ ಎಂದು ಎಂದು ಜೆಫರೀಸ್ ಹೂಡಿಕೆ ಬ್ಯಾಂಕ್‌ನ ಮುಖ್ಯ ಅರ್ಥಶಾಸ್ತ್ರಜ್ಞ ಮೋಹಿತ್ ಕುಮಾರ್ ಗುರುವಾರ ತಮ್ಮ ಟಿಪ್ಪಣಿಯಲ್ಲಿ ಬರೆದುಕೊಂಡಿದ್ದಾರೆ. ಜತೆಗೆ ಇದು ತೈಲ ಪೂರೈಕೆ ಕೊರತೆಯ ಪರಿಣಾಮವನ್ನು ಕಡಿಮೆ ಮಾಡಲು ಸಹಾಯವಾಗಿದೆ ಎಂದಿದ್ದಾರೆ. ಇದರಲ್ಲಿ ಚೀನಾ ದೇಶವು ತನ್ನ ತೈಲ ಆಮದನ್ನು ಕಡಿಮೆ ಮಾಡಿರುವುದು ಸೇರಿದೆ, ಹಾಗೂ ಇತರ ದೇಶಗಳು ತಮ್ಮ ಮೀಸಲು ದಾಸ್ತಾನನ್ನು ಬಳಸಿಕೊಳ್ಳುತ್ತಿವೆ. ವಾಷಿಂಗ್ಟನ್ ಕೂಡ ತನ್ನ ತೈಲ ಉತ್ಪಾದನೆಯನ್ನು ಹೆಚ್ಚಿಸಿದ್ದರೆ, ಗಲ್ಫ್ ಉತ್ಪಾದಕರು ಪೈಪ್‌ಲೈನ್‌ಗಳ ಮೂಲಕ ಪರ್ಯಾಯ ರಫ್ತು ಮಾರ್ಗಗಳನ್ನು ಕಂಡುಕೊಂಡಿದ್ದಾರೆ. ಜಲಸಂಧಿ ಬಂದ್ ಆಗಿದ್ದರೂ ಸಹ, ಪೂರೈಕೆ ಮತ್ತು ಬೇಡಿಕೆಯ ಚಿತ್ರಣವು ಅಷ್ಟೇನೂ ಕೆಟ್ಟದಾಗಿ ಕಾಣುತ್ತಿಲ್ಲ ಎಂದು ಕುಮಾರ್ ಹೇಳಿದ್ದಾರೆ. ಪರ್ಯಾಯ ಮಾರ್ಗಗಳಿದ್ದರೂ, ಆ ಜಲಸಂಧಿಯಲ್ಲಿ ತೈಲ ಸಾರಿಗೆಯು ಒಂದು ದೊಡ್ಡ ಸವಾಲಾಗಿ ಉಳಿದಿದೆ. ಜಾಗತಿಕವಾಗಿ ಈ ತ್ರೈಮಾಸಿಕದಲ್ಲಿ ದಿನಕ್ಕೆ 1.8 ಮಿಲಿಯನ್ ಬ್ಯಾರಲ್ ತೈಲ ಕೊರತೆ ಎದುರಾಗಲಿದೆ ಎಂದು ಅಂತರರಾಷ್ಟ್ರೀಯ ಇಂಧನ ಸಂಸ್ಥೆ ಬುಧವಾರ ಎಚ್ಚರಿಸಿತ್ತು. ಇದು ಒಂದು ತಿಂಗಳ ಹಿಂದಿನ ಅಂದಾಜಿಗಿಂತ ಎರಡರಷ್ಟಕ್ಕಿಂತ ಹೆಚ್ಚಾಗಿದೆ ಹಾಗೂ ಜಾಗತಿಕ ತೈಲ ದಾಸ್ತಾನು ವೇಗವಾಗಿ ಕರಗುತ್ತಿದೆ. ಮಾರುಕಟ್ಟೆಯು ಶಾಶ್ವತವಾಗಿ ಮೀಸಲು ದಾಸ್ತಾನನ್ನು ಬಳಸಿಕೊಳ್ಳಲು ಸಾಧ್ಯವಿಲ್ಲ. ಬೇಗ ಅಥವಾ ತಡವಾಗಿ, ದಾಸ್ತಾನು ಖಾಲಿಯಾಗುತ್ತದೆ," ಎಂದು ಪಿಕರಿಂಗ್ ಎನರ್ಜಿ ಪಾರ್ಟನರ್ಸ್‌ನ ಮುಖ್ಯ ಹೂಡಿಕೆ ಅಧಿಕಾರಿ ಡಾನ್ ಪಿಕರಿಂಗ್ ಹೇಳಿದ್ದಾರೆ.

# ಶ್ರೀಶಾಂತ್ ರೂಮ್‌ಮೇಟ್ ಆಗಬೇಕು ಎಂದ ಹರ್ಭಜನ್!

**ನವದೆಹಲಿ, ಆ. 13:** ಹರ್ಭಜನ್ ಸಿಂಗ್ ಮತ್ತು ಎಸ್. ಶ್ರೀಶಾಂತ್ ನಡುವೆ 2008ರ ಐಪಿಎಲ್ ಪಂದ್ಯದ ವೇಳೆ ನಡೆದ 'ಕಪಾಳಮೋಕ್ಷ' ವಿವಾದ ಭಾರಿ ಚರ್ಚೆಯಾಗಿತ್ತು. ಘಟನೆ ಬಳಿಕ ಇಬ್ಬರು ದಿಗ್ಗಜರು ಪರಸ್ಪರ ಮಾತನಾಡಿಕೊಂಡೇ ಇರಲಿಲ್ಲ. ಇತ್ತೀಚೆಗೆ ಈ ಇಬ್ಬರ ನಡುವಿನ ಹಳೆಯ ವೈಷಮ್ಯದ ಮಂಜುಗಡ್ಡೆ ಕರಗುವ ಲಕ್ಷಣಗಳು ಗೋಚರಿಸುತ್ತಿದ್ದು, ಹರ್ಭಜನ್ ಸಿಂಗ್ ನೀಡಿರುವ ಹೇಳಿಕೆ ಕ್ರಿಕೆಟ್ ಪ್ರಿಯರಲ್ಲಿ ಅಚ್ಚರಿ ಹಾಗೂ ಕುತೂಹಲ ಮೂಡಿಸಿದೆ.ಶ್ರೀಶಾಂತ್ ಕುರಿತು ಮಾತನಾಡಿರುವ ಹರ್ಭಜನ್ ಸಿಂಗ್, ತಮಗೆ ಶ್ರೀಶಾಂತ್ ರೂಮ್‌ಮೇಟ್ ಆಗಿರುವುದರಲ್ಲಿ ಯಾವುದೇ ಅಭ್ಯಂತರವಿಲ್ಲ. ನಾವಿಬ್ಬರೂ ಒಂದೇ ಕೋಣೆಯಲ್ಲಿ ಉಳಿದುಕೊಂಡರೆ ಅನೇಕ ವಿಷಯಗಳು ಬಗೆಹರಿಯುತ್ತವೆ. ನಾನು ಅವರನ್ನು ನನ್ನ ರೂಮ್‌ಮೇಟ್ ಆಗಿ ಪರಿಗಣಿಸಬಹುದು. ನನಗೆ ಯಾವುದೇ ಅಡ್ಡಿಯಿಲ್ಲ ಎಂದು ಮನಸ್ಸಿನ ಮಾತುಗಳನ್ನು ಹಂಚಿಕೊಂಡಿದ್ದಾರೆ. ಮತ್ತೊಂದೆಡೆ, ಶ್ರೀಶಾಂತ್ ಕೂಡ ಸಂದರ್ಶನವೊಂದರಲ್ಲಿ ಹರ್ಭಜನ್ ಸಿಂಗ್ ಅವರನ್ನು ಬಾಕ್ಸಿಂಗ್ ರಿಂಗ್‌ನಲ್ಲಿ ಎದುರಿಸುವುದಾಗಿ ಸವಾಲು ಹಾಕಿದ್ದರು. ಇಬ್ಬರೂ ಬಾಕ್ಸಿಂಗ್ ಉಡುಪಿನಲ್ಲಿರುವ ಹಳೆಯ ಚಿತ್ರಗಳನ್ನು ನೆನಪಿಸಿಕೊಂಡ ಶ್ರೀಶಾಂತ್, "ಅದೇ ದೃಶ್ಯ, ನಿಮ್ಮಲ್ಲಿ ಧೈರ್ಯವಿದೆಯೇ ನನ್ನೊಂದಿಗೆ ರಿಂಗ್‌ಗೆ ಬರುವ ಧೈರ್ಯ ನಿಮಗಿದೆಯೇ" ಎಂದು ಹರ್ಭಜನ್ ಅವರಿಗೆ ನೇರ ಸವಾಲು ಎಸೆದಿದ್ದರು. ನಾನು ಪ್ರಸ್ತುತ 'ಬೇರ್ ನಕಲ್ ಫೈಟಿಂಗ್ ಲೀಗ್' ಜೊತೆ ಗುರುತಿಸಿಕೊಂಡಿದ್ದು, ಅಂತಾರಾಷ್ಟ್ರೀಯ ಫೈಟರ್ ಆದ ಕೊನರ್ ಮೆಕ್‌ಗ್ರೆಗರ್ ಅವರಂತಹ ದಿಗ್ಗಜರೊಂದಿಗೆ ಕೆಲಸ ಮಾಡುತ್ತಿರುವುದಾಗಿ ಶ್ರೀಶಾಂತ್ ಇದೇ ಸಂದರ್ಭದಲ್ಲಿ ತಿಳಿಸಿದ್ದರು. ಹರ್ಭಜನ್ ಸಿಂಗ್ ಅವರಿಗೆ ಕೇವಲ ಜಾಹೀರಾತುಗಳಲ್ಲಿ ನಟಿಸುವುದಷ್ಟೇ ಅಲ್ಲದೆ, ನಿಜವಾಗಿಯೂ ಸ್ವಾಭಿಮಾನವಿದ್ದರೆ ರಿಂಗ್ನೊಳಗೆ ಬಂದು ತನ್ನೊಂದಿಗೆ ಸ್ಪರ್ಧಿಸಲಿ ಎಂದು ಶ್ರೀಶಾಂತ್ ಸವಾಲು ಹಾಕಿದ್ದರು. ಮಲಯಾಳಿಗಳು ಮತ್ತು ಸರ್ದಾರ್ಗಳ ಹೆಸರಿನಲ್ಲಿ ಈ ಸವಾಲನ್ನು ಸ್ವೀಕರಿಸುವಂತೆ ಹರ್ಭಜನ್ ಅವರನ್ನು ಕೆಣಕಿದ್ದರು. ಇದೆಲ್ಲದರ ನಡುವೆ ಇದೀಗ ಹರ್ಭಜನ್ ನೀಡಿರುವ ಹೇಳಿಕೆಯನ್ನು ನೋಡಿದರೆ, ಎಲ್ಲವನ್ನು ಮರೆತು ಸ್ನೇಹದ ಹಸ್ತ ಚಾಚಿರುವಂತೆ ತೋರುತ್ತದೆ.



ಒಟ್ಟಾರೆಯಾಗಿ, ಹರ್ಭಜನ್ ಸಿಂಗ್ ರೂಮ್‌ಮೇಟ್ ಆಗಿ ಹೊಂದಾಣಿಕೆ ಮಾಡಿಕೊಳ್ಳುವ ಮಾತುಗಳನ್ನಾಡಿದ್ದರೆ, ಶ್ರೀಶಾಂತ್ ಮಾತ್ರ ಬಾಕ್ಸಿಂಗ್ ರಿಂಗ್‌ನಲ್ಲಿ ಕಾದಾಡುವಂತೆ ಮುಕ್ತ ಸವಾಲು ಹಾಕಿದ್ದರು. 2008ರ ಕಹಿ ನೆನಪುಗಳನ್ನು ಬಿಟ್ಟು ಈ ಇಬ್ಬರು ಹಳೆಯ ಆಟಗಾರರು ತಮ್ಮ ನಡುವಿನ ವೈಮನಸ್ಸನ್ನು ಕೊನೆಗೊಳಿಸಿ ಹೊಸ ಸ್ನೇಹಕ್ಕೆ ನಾಂದಿ ಹಾಡುತ್ತಾರಾ ಅಥವಾ ಕ್ರೀಡಾಂಗಣದ ಹೊರಗಿನ ಈ ವಾಗ್ವಾದ ಮುಂದುವರಿಯುತ್ತಾ ಎಂಬುದನ್ನು ಕಾಲವೇ ನಿರ್ಧರಿಸಬೇಕಿದೆ.ಪಂದ್ಯ ಮುಗಿದ ನಂತರ ಶ್ರೀಶಾಂತ್ ಮೈದಾನದಲ್ಲೇ ಕಣ್ಣೀರಿಡುತ್ತಿರುವ ದೃಶ್ಯಗಳು ಇಡೀ ದೇಶಾದ್ಯಂತ ಭಾರಿ ಸಂಚಲನ ಸೃಷ್ಟಿಸಿದ್ದವು. ಈ ಕೃತ್ಯಕ್ಕಾಗಿ ಹರ್ಭಜನ್ ಸಿಂಗ್ ಅವರನ್ನು ಆ ಐಪಿಎಲ್ ಆವೃತ್ತಿಯ ಉಳಿದ ಪಂದ್ಯಗಳಿಂದ ನಿಷೇಧಿಸಲಾಗಿದ್ದಲ್ಲದೆ, ಅವರ ಪಂದ್ಯದ ಶುಲ್ಕವನ್ನೂ ಮುಟ್ಟುಗೋಲು ಹಾಕಿಕೊಳ್ಳಲಾಗಿತ್ತು. ಆರಂಭದಲ್ಲಿ ಇದು ಇಬ್ಬರ ನಡುವಿನ ತೀವ್ರ ವೈಷಮ್ಯಕ್ಕೆ ಕಾರಣವಾಗಿದ್ದರೂ, ಆ ನಂತರದ ವರ್ಷಗಳಲ್ಲಿ ಇಬ್ಬರೂ ಆಟಗಾರರು ಸಾರ್ವಜನಿಕವಾಗಿ ಒಂದಾಗಿ ಹಳೆಯ ಕಹಿ ಘಟನೆಯನ್ನು ಮರೆತು ಸ್ನೇಹಿತರಾಗಿದ್ದರು.

# 20 ವರ್ಷದೊಳಗಿನ ರಾಜ್ಯಮಟ್ಟದ ಹವ್ಯಾಸಿ ಕ್ರೀಡಾಕೂಟ ಡಿಸ್ಕ್ ಎಸೆತದಲ್ಲಿ ಅವಿನಾಶ್ ಮಲ್ಲಿಕಾರ್ಜುನ ತಳಕೇರಿಗೆ ಚಿನ್ನ

**ದೇವರ ಹಿಪ್ಪರಗಿ, ಆ.13:** 2026-27ನೇ ಸಾಲಿನ 20 ವರ್ಷದೊಳಗಿನ ರಾಜ್ಯಮಟ್ಟದ ಅಮೆಚೂರ್ ಕ್ರೀಡಾಕೂಟದ ಡಿಸ್ಕ್ ಎಸೆತ ಸ್ಪರ್ಧೆಯಲ್ಲಿ ದೇವರ ಹಿಪ್ಪರಗಿಯ ಶ್ರೀ ಸಿದ್ದೇಶ್ವರ ಸ್ವಾಮೀಜಿ ಪದವಿ ಪೂರ್ವ ಕಾಲೇಜಿನ ದ್ವಿತೀಯ ವರ್ಷದ ವಿದ್ಯಾರ್ಥಿ ಅವಿನಾಶ್ ಮಲ್ಲಿಕಾರ್ಜುನ ತಳಕೇರಿ ಅತ್ಯುತ್ತಮ ಸಾಧನೆ ಮಾಡಿದ್ದಾರೆ.

ಡಿಸ್ಕ್ ಅನ್ನು 50.63 ಮೀಟರ್ ದೂರ ಎಸೆಯುವ ಮೂಲಕ ಅವಿನಾಶ್ ಚಿನ್ನದ ಪದಕಕ್ಕೆ ಭಾಜನರಾಗಿದ್ದಾರೆ. ತಮ್ಮ ನಿರಂತರ ಪರಿಶ್ರಮ, ಕಠಿಣ ತರಬೇತಿ ಹಾಗೂ ಕ್ರೀಡಾ ಪ್ರತಿಭೆಯ ಮೂಲಕ ಅವರು ಈ ಗಮನಾರ್ಹ ಸಾಧನೆ ಮಾಡಿದ್ದಾರೆ.




ಶಿಕ್ಷಕರ ಪುತ್ರರಾಗಿರುವ ಅವಿನಾಶ್ ತಳಕೇರಿ ಅವರು ವಿಜಯಪುರ ಜಿಲ್ಲೆಯ ಪರವಾಗಿ ಸತತವಾಗಿ ಏಳನೇ ಬಾರಿ ರಾಜ್ಯಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಿರುವುದು ವಿಶೇಷವಾಗಿದೆ. ಈ ಮೂಲಕ ಅವರು ವಿಜಯಪುರ ಜಿಲ್ಲೆ ಹಾಗೂ ದೇವರ ಹಿಪ್ಪರಗಿ ತಾಲೂಕಿನ ಕೀರ್ತಿಯನ್ನು ರಾಜ್ಯಮಟ್ಟದಲ್ಲಿ ಹೆಚ್ಚಿಸಿದ್ದಾರೆ. ಅವಿನಾಶ್ ಅವರ ಸಾಧನೆಗೆ ಶ್ರೀ ಸಿದ್ದೇಶ್ವರ ಸ್ವಾಮೀಜಿ ಪದವಿ ಪೂರ್ವ ಕಾಲೇಜಿನ ಸಂಸ್ಥೆಯ ಅಧ್ಯಕ್ಷರಾದ ವಿ.ಕೆ. ಪಾಟೀಲ, ತರಬೇತುದಾರರಾದ ಹಾಜಿಲಾಲ್ ಮಕಾಂದರ್, ರಾಜು ಕಾಖಂಡಕಿ ಸೇರಿದಂತೆ ತಾಲೂಕಿನ ಗಣ್ಯರು ಹಾಗೂ ಕ್ರೀಡಾಭಿಮಾನಿಗಳು ಹರ್ಷ ವ್ಯಕ್ತಪಡಿಸಿ ಅಭಿನಂದನೆ ಸಲ್ಲಿಸಿದ್ದಾರೆ. ಕ್ರೀಡಾ ಕ್ಷೇತ್ರದಲ್ಲಿ ಅವಿನಾಶ್ ಇನ್ನಷ್ಟು ಎತ್ತರಕ್ಕೆ ಬೆಳೆಯಲಿ ಹಾಗೂ ರಾಷ್ಟ್ರಮಟ್ಟದಲ್ಲಿಯೂ ಜಿಲ್ಲೆ ಮತ್ತು ರಾಜ್ಯಕ್ಕೆ ಕೀರ್ತಿ ತರಲಿ ಎಂದು ಶುಭ ಹಾರೈಸಿದ್ದಾರೆ.